ಸೋಮವಾರ, ಆಗಸ್ಟ್ 8, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 219 | ಪುಟ 14
● www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ವಿವಿಧ ವಲಯಗಳಲ್ಲಿ ತಂತ್ರಜ್ಞಾನದ ಶಕ್ತಿಯ ವೃದ್ಧಿಗೆ ಮಾನವಿಕ ವಿಷಯತಜ್ಞರ ಅರ್ಥಪೂರ್ಣ ಒಳನೋಟ ಬಳಕೆಯಾಗುತ್ತಿದೆ

ಸಿಎಸ್‌ಐಆರ್‌ನ ಮೊದಲ ಮಹಾ ನಿರ್ದೇಶಕಿ ಕಲೈಸೆಲ್ವಿ 9
ಆಕಾಸಾ ಏರ್ ಸೇವೆ ಆರಂಭ 9
ಅನುಭವ ಮಂಟಪ — ಅಗತ್ಯವಷ್ಟೇ ಅಲ್ಲ, ಅವಕಾಶವೂ ಹೌದು
ದುಬಾರಿ ಬೆಲೆಯ ಬದಲಿ ನಿವೇಶನ! 4B
ದಸರೆಗೆ 'ಗಜಪಯಣ' ಮುನ್ನುಡಿ 4A



ಭಾರತಕ್ಕೆ ಪದಕಗಳ ಮಳೆ

ಕಾಮನ್‌ವೆಲ್ತ್ ಕ್ರೀಡಾಕೂಟ

ಬರ್ಮಿಂಗ್‌ಹ್ಯಾಮ್: ಭಾರತದ ಕ್ರೀಡಾಪಟುಗಳ ತಂಡವು ಸತತ ಆರನೇ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿಯೂ ಪದಕ ಗಳಿಕೆಯಲ್ಲಿ 'ಅರ್ಧಶತಕ' ಸಾಧಿಸಿತು.

ಇಲ್ಲಿ ನಡೆಯುತ್ತಿರುವ 42ನೇ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಭಾನುವಾರ ಐದು ಚಿನ್ನ ಸೇರಿದಂತೆ ಒಟ್ಟು ಹನ್ನೊಂದು ಪದಕಗಳನ್ನು ಭಾರತದ ಅಥ್ಲೀಟ್‌ಗಳು ಜಯಿಸಿದರು. ಇದರೊಂದಿಗೆ ತಂಡದ ಪದಕ ಗಳಿಕೆಯು 50ಕ್ಕೇರಿದೆ. ಪಟ್ಟಿಯಲ್ಲಿ ಐದನೇ ಸ್ಥಾನದಲ್ಲಿದೆ.

ವಿಶ್ವ ಮಹಿಳಾ ಬಾಕ್ಸಿಂಗ್ ಚಾಂಪಿಯನ್ ನಿಖತ್ ಜರೀನ್, ಉದಯೋನ್ಮುಖ ತಾರೆ ನೀತು ಗಂಗಾಸ್ ಮತ್ತು ಅನುಭವಿ ಅಮಿತ್ ಪಂಘಾಲ್ ಬಾಕ್ಸಿಂಗ್‌ನಲ್ಲಿ ಚಿನ್ನ ಗೆದ್ದರೆ, ಟ್ರಿಪಲ್ ಜಂಪ್‌ನಲ್ಲಿ ಎಲ್ದೊಸಾ ಪಾಲ್ ಬಂಗಾರದ ಕಿರೀಟ ಧರಿಸಿದರು. ಪ್ಯಾರಾ ವಿಭಾಗದ ಮಹಿಳೆಯ ಟೇಬಲ್ ಟೆನಿಸ್‌ನಲ್ಲಿ ಭಾವಿನಾ ಪಟೇಲ್ ಕೂಡ ಚಿನ್ನದ ಪದಕಕ್ಕೆ ಕೊರಳೊಡ್ಡಿದರು.

2002ರಿಂದ ಇಲ್ಲಿಯವರೆಗೆ ನಡೆದ ಪ್ರತಿ ಕಾಮನ್‌ವೆಲ್ತ್ ಕೂಟದಲ್ಲಿ ಭಾರತವು 50 ಪದಕಗಳ ಗಡಿ ದಾಟಿದೆ. 2010ರಲ್ಲಿ ನವದೆಹಲಿಯಲ್ಲಿ ನಡೆದಿದ್ದ ಕೂಟದಲ್ಲಿ 101 ಪದಕಗಳನ್ನು ಗಳಿಸಿದ್ದು ಇದುವರೆಗಿನ ಗರಿಷ್ಠ ದಾಖಲೆ. ಹೋದ ವರ್ಷ ಗೋಲ್ಡ್‌ಕೋಸ್ಟ್‌ನಲ್ಲಿ 66 ಪದಕಗಳನ್ನು ತಂಡವು ಜಯಿಸಿತ್ತು.



ಎಲ್ದೊಸಾ ಪಾಲ್ ಅಬೂಬಕ್ಕರ್

ಟ್ರಿಪಲ್ ಜಂಪ್ ಚಿನ್ನ–ಬೆಳ್ಳಿ!

ಭಾರತದ ಎಲ್ದೊಸಾ ಪಾಲ್ ಮತ್ತು ಅಬ್ದುಲ್ಲಾ ಅಬೂಬಕ್ಕರ್ ಪುರುಷರ ಟ್ರಿಪಲ್ ಜಂಪ್ ವಿಭಾಗದಲ್ಲಿ ಕ್ರಮವಾಗಿ ಚಿನ್ನ (17.03 ಮೀ) ಮತ್ತು ಬೆಳ್ಳಿ (17.02 ಮೀ) ಗೆದ್ದು ಐತಿಹಾಸಿಕ ಸಾಧನೆ ಮಾಡಿದರು. ಕಾಮನ್‌ವೆಲ್ತ್ ಕೂಟದ ಇತಿಹಾಸದಲ್ಲಿ ಒಂದೇ ಸ್ಪರ್ಧೆಯಲ್ಲಿ ಚಿನ್ನ ಮತ್ತು ಬೆಳ್ಳಿ ಗೆದ್ದ ಭಾರತದ ಮೊದಲ ಜೋಡಿ ಇದು.



ಭಾವಿನಾ ಪಟೇಲ್
ಪ್ಯಾರಾ ಟಿಟಿ
ವಯಸ್ಸು: 35



ಅಮಿತ್ ಪಂಘಾಲ್
ಪುರುಷರ ಬಾಕ್ಸಿಂಗ್
48-51 ಕೆ.ಜಿ
ವಯಸ್ಸು: 26



ನಿಖತ್ ಜರೀನ್
ಮಹಿಳೆಯರ ಬಾಕ್ಸಿಂಗ್
48-50 ಕೆ.ಜಿ
ವಯಸ್ಸು: 26

ಕೂಟದಲ್ಲಿ ಇದುವರೆಗೆ ಭಾರತ	
ಚಿನ್ನ	17
ಬೆಳ್ಳಿ	13
ಕಂಚು	20



ನೀತು ಗಂಗಾಸ್
ಮಹಿಳೆಯರ ಬಾಕ್ಸಿಂಗ್
45-48 ಕೆ.ಜಿ
ವಯಸ್ಸು: 21

ಇನ್ನಷ್ಟು ಸುದ್ದಿಗಳು 10

'ಕೋವಿಡ್ ನಿರ್ವಹಣೆ: ಒಕ್ಕೂಟ ಪ್ರಜ್ಞೆ ಮರೆದ ರಾಜ್ಯಗಳು'

ನವದೆಹಲಿ (ಪಿಟಿಐ): 'ಕೋವಿಡ್ ಸಾಂಕ್ರಾಮಿಕ ವಿರುದ್ಧದ ಹೋರಾಟದಲ್ಲಿ ಪ್ರತಿಯೊಂದು ರಾಜ್ಯವೂ ತನ್ನ ಸಾಮರ್ಥ್ಯಕ್ಕೆ ಅನುಗುಣವಾಗಿ ನಿರ್ಣಾಯಕ ಪಾತ್ರವನ್ನು ವಹಿಸಿದೆ. ಇದರಿಂದಾಗಿ ಅಭಿವೃದ್ಧಿಶೀಲ ದೇಶಗಳು ಭಾರತವನ್ನು ಒಂದು ಮಾದರಿಯಾಗಿ ಮತ್ತು ಜಾಗತಿಕ ನಾಯಕನನ್ನಾಗಿ ನೋಡಲು ಆರಂಭಿಸಿದವು' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯಗಳನ್ನು ಶ್ಲಾಘಿಸಿದ್ದಾರೆ. ಎಲ್ಲ ರಾಜ್ಯಗಳೂ ಸಹಕಾರಿ ಒಕ್ಕೂಟ ಪ್ರಜ್ಞೆಯನ್ನು ಮೆರೆದಿವೆ ಎಂದೂ ಹೇಳಿದ್ದಾರೆ.



ನರೇಂದ್ರ ಮೋದಿ

> ಒಕ್ಕೂಟ ತತ್ವದ ವಿರುದ್ಧ ಕೇಂದ್ರವು ಹೋಗಬಾರದು. ಸಮವರ್ತಿ ಪಟ್ಟಿಯಲ್ಲಿರುವ ವಿಚಾರಗಳ ಬಗ್ಗೆ ಮಸೂದೆ ರೂಪಿಸುವಾಗ ಸಮಾಲೋಚನೆ ನಡೆಸಬೇಕು
> **ಪಿಣರಾಯಿ ವಿಜಯನ್**, ಕೇರಳ ಮುಖ್ಯಮಂತ್ರಿ

> ರಾಜ್ಯಗಳ ಬೇಡಿಕೆಗಳನ್ನು ಕೇಂದ್ರವು ಹೆಚ್ಚು ಗಂಭೀರವಾಗಿ ಪರಿಗಣಿಸಬೇಕು. ರಾಜ್ಯಗಳ ಮೇಲೆ ಕೇಂದ್ರದ ನೀತಿಯ ಹೇರಿಕೆ ಸಲ್ಲದು
> **ಮಮತಾ ಬ್ಯಾನರ್ಜಿ**, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ನೀತಿ ಆಯೋಗದ ಆಡಳಿತ ಮಂಡಳಿಯ ಏಳನೇ ಸಭೆಯನ್ನು ಉದ್ದೇಶಿಸಿ ಅವರು ಭಾನುವಾರ ಮಾತನಾಡಿದರು.

ಸ್ಥಳೀಯ ವಸ್ತುಗಳನ್ನೇ ಸಾಧ್ಯವಾದಲ್ಲೆಲ್ಲಾ ಬಳಸುವಂತೆ ಜನರಿಗೆ ಉತ್ತೇಜನ ನೀಡಬೇಕು ಎಂದರು.

8ನೇ ಪುಟ ನೋಡಿ

ಅಯೋಧ್ಯೆಯಲ್ಲಿ ಅಕ್ರಮ ನಿವೇಶನ ಮಾರಾಟ

ಮೇಯರ್, ಬಿಜೆಪಿ ಶಾಸಕ ಭಾಗಿ

ಪ್ರಜಾವಾಣಿ ವಾರ್ತೆ

ಲಖನೌ: ಅಯೋಧ್ಯೆ ಅಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯಲ್ಲಿ ಭೂ ಅಕ್ರಮ ವ್ಯವಹಾರ ನಡೆದಿದ್ದು, ಇದರಲ್ಲಿ ಆಡಳಿತಾರೂಢ ಪಕ್ಷದ ಜನಪ್ರತಿನಿಧಿಗಳೇ ಶಾಮೀಲಾಗಿದ್ದಾರೆ. ಇದು ಬಿಜೆಪಿಗೆ ಮುಜುಗರ ಉಂಟುಮಾಡಿದೆ.

'ಬಿಜೆಪಿ ಶಾಸಕ ವೇದ್ ಪ್ರಕಾಶ್ ಗುಪ್ತಾ, ಅಯೋಧ್ಯೆ ಮೇಯರ್ ರಿಷಿಕೇಶ್ ಉಪಾಧ್ಯಾಯ ಹಾಗೂ ಪಕ್ಷದ ಮಾಜಿ ಶಾಸಕ ಸೇರಿದಂತೆ 40 ಮಂದಿ ಅಕ್ರಮವಾಗಿ ನಿವೇಶನಗಳನ್ನು ಮಾರಾಟ ಮಾಡಿದ್ದಾರೆ. ಅಲ್ಲದೇ ಅಕ್ರಮವಾಗಿ ಕಾಲೊನಿಗಳನ್ನೂ ನಿರ್ಮಾಣ ಮಾಡುತ್ತಿದ್ದಾರೆ.ನಿವೇಶನ ಖರೀದಿಸಿದವರ ಪೈಕಿ ಹಲವರು ಈಗಾಗಲೇ ಮನೆಗಳನ್ನೂ ನಿರ್ಮಿಸಿದ್ದಾರೆ ಎಂದು ಅಯೋಧ್ಯೆ ಅಭಿವೃದ್ಧಿ ಪ್ರಾಧಿಕಾರದ (ಎಡಿಎ) ಪ್ರಕಟಣೆ ತಿಳಿಸಿದೆ.

'ಅಕ್ರಮ ಕಟ್ಟಡಗಳನ್ನು ಕೆಡವಲು ಎಡಿಎ ಮುಂದಾಗಿತ್ತು. ಕಟ್ಟಡಗಳ ಮಾಲೀಕರು ನಿವೇಶನ ಖರೀದಿಸಿರುವ ಹಾಗೂ ನಗರಸಭೆಗೆ ತೆರಿಗೆ ಪಾವತಿಸುತ್ತಿರುವ ಕುರಿತ ದಾಖಲೆಗಳನ್ನು ಸಲ್ಲಿಸಿದ್ದರು. ಆಗ ಈ ಹಗರಣ ಬೆಳಕಿಗೆ ಬಂದಿದೆ' ಎಂದು ಮೂಲಗಳು ತಿಳಿಸಿವೆ.



ತೀರ್ಥಹಳ್ಳಿಯಲ್ಲಿ ಗರಿಷ್ಠ 52 ಸೆಂ.ಮೀ ಮಳೆ

ಮಳೆ: ನಾಲ್ಕು ಮಂದಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಭಾನುವಾರ ಧಾರಾಕಾರ ಮಳೆಯಾಗಿದೆ. ಮಳೆಯಿಂದಾಗಿ ಇಬ್ಬರು ಮಕ್ಕಳು ಸೇರಿದಂತೆ ನಾಲ್ಕು ಮಂದಿ ಮೃತಪಟ್ಟಿದ್ದಾರೆ. ಹಲವೆಡೆ ಮನೆಗಳ ಗೋಡೆಗಳು ಕುಸಿದು ಬಿದ್ದಿವೆ. ನೂರಾರು ಎಕರೆ ಜಲಾವೃತಗೊಂಡಿದೆ.

ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಕೂಡ್ಲೂರು ಕ್ರಾಸ್ ಬಳಿ ನಸುಕಿನಲ್ಲಿ ದನದ ಕೊಟ್ಟಿಗೆಯ ಗೋಡೆ ಪಕ್ಕದಲ್ಲಿದ್ದ ಶೆಡ್ ಮೇಲೆ ಕುಸಿದು ಬಿದ್ದು ಫರ್ವೀನ್ (4) ಹಾಗೂ ಇಷಿಕಾ (3) ಸಾವಿಗೀಡಾಗಿದ್ದಾರೆ. ಈ ಮಕ್ಕಳ ತಾಯಿ ಮೀನಾ ಬಿತ್ತು (30) ಹಾಗೂ ಮೋನಿಷಾ (35) ಗಾಯಗೊಂಡಿದ್ದಾರೆ. ನೇಪಾಳ ಮೂಲದ ಕಾರ್ಮಿಕರ ಎರಡು ಕುಟುಂಬಗಳು ಕೂಲಿ ಮಾಡಿಕೊಂಡು ಈ ಶೆಡ್‌ನಲ್ಲಿ ವಾಸವಿದ್ದವು. ಗಾಯಾಳುಗಳಿಗೆ ಮಾಗಡಿ ತಾಲ್ಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತು.

ಚನ್ನರಾಯಪಟ್ಟಣ ತಾಲ್ಲೂಕಿನ ಕಲ್ಲೆಸೋಮನಹಳ್ಳಿ ಬಳಿ ಮರ ಬಿದ್ದು, ರಂಗಶೆಟ್ಟಿ (40) ಮೃತಪಟ್ಟಿದ್ದರೆ, ವಿಜಯಪುರ ಜಿಲ್ಲೆ ಕೊಲ್ಹಾರದ ಬಳಿ ಹಳ್ಳದ ಹರಿವಿನಲ್ಲಿ ಸಿಲುಕಿಕೊಂಡಿದ್ದ ಎಮ್ಮೆಗಳನ್ನು ರಕ್ಷಿಸಲು ಹೋಗಿದ್ದ ರೈತ ನಂದಪ್ಪ ಸಂಗಪ್ಪ ಸೊನ್ನದ (65) ಶನಿವಾರ ಸಂಜೆ ಸಾವಿಗೀಡಾಗಿದ್ದು, ಭಾನುವಾರ ಶವ ಪತ್ತೆಯಾಗಿದೆ.



ಹೊಸಪೇಟೆ ಸಮೀಪದ ತುಂಗಭದ್ರಾ ಜಲಾಶಯದಿಂದ ಭಾನುವಾರ ನದಿಗೆ ಒಂದು ಲಕ್ಷ ಕ್ಯುಸೆಕ್‌ಗೂ ಅಧಿಕ ನೀರು ಹರಿಸಲಾಯಿತು –ಪ್ರಜಾವಾಣಿ ಚಿತ್ರ

ತುಂಗಭದ್ರಾ ಜಲಾಶಯದ ಒಳಹರಿವು ಒಂದು ಲಕ್ಷ ಕ್ಯುಸೆಕ್‌ಗೆ ಏರಿಕೆಯಾಗಿದ್ದು, ಅಷ್ಟೇ ಪ್ರಮಾಣದ ನೀರು ಭಾನುವಾರ ನದಿಗೆ ಹರಿಸುತ್ತಿರುವುದರಿಂದ ಮತ್ತೆ ಕಂಪ್ಲಿ–ಗಂಗಾವತಿ ಸೇತುವೆ ಮುಳುಗುವ ಭೀತಿ ಎದುರಾಗಿದೆ.

ಬೆಳಗಾವಿ ನಗರದ ಸಫಾರ್ ಗಲ್ಲಿಯಲ್ಲಿ ಮನೆಯ ಚಾವಣಿ ಕುಸಿದಿದ್ದು, ವೃದ್ಧ ದಂಪತಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಲ್ಲಿ 52 ಸೆಂ.ಮೀ ಮಳೆಯಾಗಿದೆ.

ಇನ್ನಷ್ಟು ಸುದ್ದಿಗಳು 4B



ಅನ್ಯ ಕಕ್ಷೆ ಸೇರಿದ ಇಸ್ರೊ ಉಪಗ್ರಹಗಳು

ಶ್ರೀಹರಿಕೋಟಾ (ಆಂಧ್ರಪ್ರದೇಶ) (ಪಿಟಿಐ/ಎಎಫ್‌ಪಿ): ಎರಡು ಉಪಗ್ರಹಗಳನ್ನು ಹೊತ್ತು ಭಾನುವಾರ ಬೆಳಿಗ್ಗೆ ನಭದತ್ತ ಜಿಗಿದಿದ್ದ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ನೂತನ ರಾಕೆಟ್, 'ಕಿರು ಉಪಗ್ರಹ ಉಡ್ಡಯನ ವಾಹನ'ವು (ಎಸ್‌ಎಸ್‌ಎಲ್‌ವಿ) ಉಪಗ್ರಹಗಳನ್ನು ನಿಗದಿತ ಕಕ್ಷೆಗೆ ಸೇರಿಸುವಲ್ಲಿ ವಿಫಲವಾಗಿದೆ. ಅನ್ಯ ಕಕ್ಷೆಗೆ ಸೇರಿದ ಕಾರಣ ಎರಡೂ ಉಪಗ್ರಹಗಳು ನಿರುಪಯುಕ್ತ ವಾಗಿವೆ ಎಂದು ಇಸ್ರೊ ಹೇಳಿದೆ.

8

ಚಿನಕುರಳಿ

ಪ್ರಕಾಶ್ ಶೆಟ್ಟಿ



ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣ

'ಕಸದ ತೊಟ್ಟಿಗೆ ಮೊಬೈಲ್ ಎಸೆದ!'

● ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮದಲ್ಲಿ ಮಧ್ಯವರ್ತಿಯಾಗಿದ್ದ ರಾಜ್ಯ ಮೀಸಲು ಪೊಲೀಸ್ ಪಡೆ (ಕೆಎಸ್‌ಆರ್‌ಪಿ) ಇನ್‌ಸ್ಪೆಕ್ಟರ್ ಬಸವರಾಜ ಗುರುವ (32) ಬಿಬಿಎಂಪಿ ಕಸದ ತೊಟ್ಟಿಗೆ ಮೊಬೈಲ್ ಫೋನ್ ಎಸೆದು ಸಾಕ್ಷ್ಯ ನಾಶ ಮಾಡಿರುವುದು ಪತ್ತೆಯಾಗಿದೆ.

ನೇಮಕಾತಿ ಅಕ್ರಮ ಸಂಬಂಧ ಹೈಗ್ರೌಂಡ್ಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಿರುವ ಸಿಐಡಿ ಅಧಿಕಾರಿಗಳು 32ನೇ ಆರೋಪಿ ಆಗಿರುವ ಬಸವರಾಜ ಗುರುವ ಅವರ ಈ ಕೃತ್ಯದ ಬಗ್ಗೆ ಉಲ್ಲೇಖಿಸಿದ್ದಾರೆ.

'ಪರಪ್ಪನ ಅಗ್ರಹಾರ ವೈಷ್ಣವಿ ಲೇಔಟ್ ನಿವಾಸಿ ಬಸವರಾಜ, ತುಮಕೂರು ಜಿಲ್ಲೆಯ ಕೆಎಸ್‌ಆರ್‌ಪಿ ಘಟಕದಲ್ಲಿ ರಿಸರ್ವ್ ಪೊಲೀಸ್ ಇನ್‌ಸ್ಪೆಕ್ಟರ್ (ಆರ್‌ಪಿಐ) ಆಗಿದ್ದ. ಪ್ರಕರಣದ ಆರೋಪಿಯೂ ಆಗಿರುವ ಆರ್‌ಪಿಐ ಎಸ್.ಬಿ.ಮಧು ಜೊತೆ ಮಧ್ಯವರ್ತಿಯಾಗಿ ಕೆಲಸ ಮಾಡಿದ್ದು, ಲಕ್ಷಾಂತರ ರೂಪಾಯಿ ಕಮಿಷನ್ ಪಡೆದಿದ್ದ' ಎಂಬ ಮಾಹಿತಿ ದೋಷಾರೋಪ ಪಟ್ಟಿಯಲ್ಲಿದೆ.

4B ಪುಟ ನೋಡಿ

'ಅಭ್ಯರ್ಥಿಗಳ ಪೆನ್‌ಗಳು ನಾಶ'

'ಪೊಲೀಸ್ ನೇಮಕಾತಿ ವಿಭಾಗದ ಎಡಿಜಿಪಿ, ಡಿವೈಎಸ್ಪಿ ಹಾಗೂ ಇತರೆ ಸಿಬ್ಬಂದಿ, ಪರೀಕ್ಷಾ ಕೇಂದ್ರದಲ್ಲಿ ಒಎಂಆರ್ ಪ್ರತಿ ಖಾಲಿ ಬಿಡುವಂತೆ ಅಭ್ಯರ್ಥಿಗಳಿಗೆ ಸೂಚಿಸಿದ್ದರು. ಅದರಂತೆ ಎಲ್ಲರೂ ಖಾಲಿ ಬಿಟ್ಟಿದ್ದರು. ಅಂಥವರ ಪೆನ್‌ಗಳನ್ನು ಸಂಗ್ರಹಿಸಿದ್ದ ಮಧ್ಯವರ್ತಿಗಳು, ನೇಮಕಾತಿ ವಿಭಾಗದ ಸಿಬ್ಬಂದಿಗೆ ತಲುಪಿಸಿದ್ದರು' ಎಂಬುವುದು ಆರೋಪ ಪಟ್ಟಿಯಲ್ಲಿದೆ.

'ಎಫ್‌ಡಿಎಗಳಾದ ಹರ್ಷ ಹಾಗೂ ಶ್ರೀನಿವಾಸ್, ಆಯಾ ಅಭ್ಯರ್ಥಿಗಳ ಪೆನ್‌ಗಳ ಮೂಲಕವೇ ಒಎಂಆರ್ ತಿದ್ದುಪಡಿ ಮಾಡಿದ್ದರು. ಆ ಬಳಿಕ ಎಲ್ಲ ಪೆನ್‌ಗಳನ್ನು ಮುರಿದು ಹಲವೆಡೆ ಎಸೆದು ನಾಶಪಡಿಸಿದ್ದಾರೆ' ಎಂಬ ಅಂಶವನ್ನೂ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

'ಸಿಸಿಟಿವಿ ದೃಶ್ಯಾವಳಿಗಳೂ ನಾಶ'

'ಪೊಲೀಸ್ ನೇಮಕಾತಿ ವಿಭಾಗದ ಭದ್ರತಾ ಕೊಠಡಿ ಹಾಗೂ ಅಕ್ಕ–ಪಕ್ಕದಲ್ಲಿ ಅಳವಡಿಸಿದ್ದ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳನ್ನೂ ಸಿಬ್ಬಂದಿ ಅಳಿಸಿ ಹಾಕಿರುವುದು ದೃಢಪಟ್ಟಿದೆ' ಎಂಬ ಅಂಶ ಆರೋಪ ಪಟ್ಟಿಯಲ್ಲಿದೆ.

'ಅ.7, 8 ಹಾಗೂ 16 ರಂದು ಬೆಳಿಗ್ಗೆ 6 ಗಂಟೆಯಿಂದ 10 ಗಂಟೆವರೆಗಿನ ದೃಶ್ಯಾವಳಿಗಳನ್ನು ಅಳಿಸಿ ಸಾಕ್ಷ್ಯ ನಾಶ ಮಾಡಲಾಗಿದೆ. ಕೆಲ ಕ್ಯಾಮೆರಾಗಳನ್ನು ಕಾರ್ಯನಿರ್ವಹಿಸದಂತೆ ಸ್ಥಗಿತಗೊಳಿಸಿದ್ದರು. ಒಎಂಆರ್ ಪ್ರತಿ ತಿದ್ದುಪಡಿ ಮಾಡಿದ್ದ ಕೃತ್ಯದ ಸುಳಿವು ಸಿಗಬಾರದೆಂದು ಎಡಿಜಿಪಿ ಅಮ್ರಿತ್ ಪೌಲ್, ಡಿವೈಎಸ್ಪಿ ಶಾಂತಕುಮಾರ್ ಹಾಗೂ ಸಿಬ್ಬಂದಿ ದೃಶ್ಯಾವಳಿ ಅಳಿಸಿರುವುದು ತನಿಖೆಯಿಂದ ಗೊತ್ತಾಗಿದೆ' ಎಂಬ ಮಾಹಿತಿ ಪಟ್ಟಿಯಲ್ಲಿದೆ.



ಮಾರ್ಗಸೂಚಿಯಂತೆ ಮೀಸಲಾತಿ ನಿಗದಿಪಡಿಸದ ಆಡಳಿತಾರೂಢ ಬಿಜೆಪಿ: ಕಾಂಗ್ರೆಸ್ ಆರೋಪ

187 ವಾರ್ಡ್ ಮೀಸಲಾತಿ ನಿಯಮಬಾಹಿರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ 243 ವಾರ್ಡ್‌ಗಳಿಗೆ ಸರ್ಕಾರ ನಿಗದಿಪಡಿಸಿರುವ ಮೀಸಲಾತಿಯಲ್ಲಿ 187 ವಾರ್ಡ್‌ಗಳ ಮೀಸಲಾತಿ 2011ರ ಜನಸಂಖ್ಯೆ, ಪರಿಶಿಷ್ಟಜಾತಿ, ಪಂಗಡ ವಾರ್ಡ್ ಜನಸಂಖ್ಯೆಗೆ ಅನುಗುಣವಾಗಿಲ್ಲ. 56 ವಾರ್ಡ್‌ಗಳ ಮೀಸಲಾತಿ ಮಾತ್ರ ಸರಿ ಇದೆ ಎಂದು ತಜ್ಞರು ಅಂಕಿ–ಅಂಶಗಳ ಮೂಲಕ ಬಹಿರಂಗಪಡಿಸಿದ್ದಾರೆ.

ಯಲಹಂಕ, ಮಲ್ಲೇಶ್ವರ, ಪುಲಿಕೇಶಿನಗರ, ಜಯನಗರ, ಪದ್ಮನಾಭನಗರ ವಿಧಾನಸಭೆ ಕ್ಷೇತ್ರಗಳ ಯಾವ ವಾರ್ಡ್‌ನಲ್ಲೂ ಕಾಯ್ದೆ ಅಥವಾ ಜನಸಂಖ್ಯೆಗೆ ಅನುಗುಣವಾಗಿ ಮೀಸಲು ನಿಗದಿಯಾಗಿಲ್ಲ. ದಾಸರಹಳ್ಳಿ, ಯಶವಂತಪುರ, ಮಹಾಲಕ್ಷ್ಮಿ ಲೇಔಟ್, ಹೆಬ್ಬಾಳ, ಕೆ.ಆರ್. ಪುರ, ಶಿವಾಜಿನಗರ, ಬಿಟಿಎಂ ಲೇಔಟ್, ಬಸವನಗುಡಿ, ಆನೇಕಲ್ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ವಾರ್ಡ್‌ಗಳ ಪೈಕಿ ಒಂದು ವಾರ್ಡ್‌ನ ಮೀಸಲಾತಿ ನಿಯಮಗಳಂತಿದೆ.

ಬೊಮ್ಮನಹಳ್ಳಿ ವಿಧಾನಸಭೆ ಕ್ಷೇತ್ರದ 14 ವಾರ್ಡ್‌ಗಳಲ್ಲಿ 8 ವಾರ್ಡ್‌ಗಳ ಮೀಸಲಾತಿ ನಿಯಮದಂತೆ ಇರುವುದೇ ಗರಿಷ್ಠ. ಇನ್ನುಳಿದಂತೆ ಮಹದೇವಪುರ, ಗೋವಿಂದರಾಜನಗರ, ವಿಜಯನಗರ ಕ್ಷೇತ್ರಗಳಲ್ಲಿ ತಲಾ 5, ಸರ್ವಜ್ಞನಗರ, ಶಾಂತಿನಗರ ಕ್ಷೇತ್ರಗಳಲ್ಲಿ ತಲಾ 4 ವಾರ್ಡ್, ರಾಜರಾಜೇಶ್ವರಿ ನಗರ (3), ಬೆಂಗಳೂರು ದಕ್ಷಿಣ (3), ಬ್ಯಾಟರಾಯನಪುರ, ಸಿ.ವಿ. ರಾಮನ್ ನಗರ, ರಾಜಾಜಿನಗರ, ಚಾಮರಾಜಪೇಟೆ ಕ್ಷೇತ್ರಗಳಲ್ಲಿ ತಲಾ ಎರಡು ವಾರ್ಡ್‌ಗಳ ಮೀಸಲಾತಿ ಸರಿಯಾಗಿದೆ ಎಂದು ನಗರಾಭಿವೃದ್ಧಿ ಇಲಾಖೆಯಲ್ಲಿ ಸಾಕಷ್ಟು ವರ್ಷ ಕಾರ್ಯನಿರ್ವಹಿಸಿದ್ದವರು ತಯಾರಿಸಿರುವ ವರದಿಯಲ್ಲಿ ತಿಳಿಸಲಾಗಿದೆ.

‘ಪಾಲಿಕೆ ಚುನಾವಣೆಗೆ ಸಂಬಂಧಿಸಿದಂತೆ ನಾವೂ ಸಾಕಷ್ಟು ಬಾರಿ ಮೀಸಲಾತಿಯನ್ನು ಅಂತಿಮಗೊಳಿಸಿದ್ದೇವೆ. ಎಲ್ಲ ಪಕ್ಷದ ಶಾಸಕರನ್ನು ಕೂರಿಸಿಕೊಂಡು, ಅವರನ್ನು ಗಣನೆಗೆ ತೆಗೆದುಕೊಂಡು ಮೀಸಲಾತಿ ಅಂತಿಮಗೊಳಿಸುತ್ತಿದ್ದೆವು. ಆದರೆ, ಈ ಬಿಜೆಪಿಯವರು ಯಾರನ್ನೂ ಕೇಳುವುದೇ ಇಲ್ಲ. ಎಲ್ಲ ನೀತಿ–ನಿಯಮಗಳನ್ನು ಗಾಳಿಗೆ ತೂರಿ ಮನಸೋ ಇಚ್ಛೆ ಮೀಸಲಾತಿ ನಿಗದಿ ಮಾಡಿದ್ದಾರೆ’ ಎಂದು ಕಾಂಗ್ರೆಸ್ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ದೂರಿದರು.

‘ಮಾರ್ಗಸೂಚಿಯಂತೆ ಮೀಸಲಾತಿ ನಿಗದಿಪಡಿಸದ ಬಿಜೆಪಿಯವರು ಸಾಕಷ್ಟು ಪಕ್ಷಪಾತ ಮಾಡಿದ್ದಾರೆ. ಕಾಂಗ್ರೆಸ್‌ನ ಪ್ರಮುಖ ನಾಯಕರಿಗೆ ಮೀಸಲಾತಿಯ ಸೌಲಭ್ಯ ದೊರೆಯದಂತೆ ಮಾಡಿದ್ದಾರೆ. ಮೂರ್ನಾಲ್ಕು ಬಾರಿ ಸ್ಪರ್ಧಿಸಿದ್ದ ನಾಯಕರಿಗೆ ಆ ವಾರ್ಡ್‌ನಲ್ಲಿ ಸ್ಪರ್ಧೆ ಮಾಡಲಾಗದಂತೆ ಮೀಸಲಾತಿ ನಿಗದಿ ಮಾಡಿದ್ದಾರೆ’ ಎಂದು ಕಾಂಗ್ರೆಸ್‌ನ ಮಾಜಿ ಕಾರ್ಪೊರೇಟರ್ ಕೇಶವಮೂರ್ತಿ ಆರೋಪಿಸಿದರು.

100ರ ಗಡಿ ತಲುಪದ ಆಕ್ಷೇಪಣೆ!

ಬಿಬಿಎಂಪಿ ವಾರ್ಡ್ ಮೀಸಲಾತಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲು 7 ದಿನಗಳ ಕಾಲಾವಕಾಶ ನೀಡಲಾಗಿದೆ. ಆ.3ರಂದು ಅಧಿಸೂಚನೆ ಹೊರಬಿದ್ದಿದ್ದು, ಆ.10ರಂದು ಆಕ್ಷೇಪಣೆಯನ್ನು ಖುದ್ದಾಗಿ ಸಲ್ಲಿಸಲು ಕೊನೆ ದಿನ. ಆ.6ರ ಶನಿವಾರದವರೆಗೆ ಆಕ್ಷೇಪಣೆಗಳ ಸಂಖ್ಯೆ 100ರ ಗಡಿಯನ್ನೂ ತಲುಪಿಲ್ಲ. ಮೀಸಲಾತಿಗೆ ಸಂಬಂಧಿಸಿದಂತೆ ಸಾಕಷ್ಟು ವಿರೋಧವಿದೆ. ಅದು ಆಕ್ಷೇಪಣೆಗಳ ರೂಪದಲ್ಲಿ ಸರ್ಕಾರಕ್ಕೆ ತಲುಪಬೇಕಿದೆ.

ಈ ಹಿಂದೆ ವಾರ್ಡ್ ಪುನರ್‌ವಿಂಗಡಣೆ ಸಂದರ್ಭದಲ್ಲೂ ಅಂತಿಮ ಎರಡು ದಿನ ಸಾವಿರಾರು ಆಕ್ಷೇಪಣೆಗಳು ಬಂದಿದ್ದವು. ಮೀಸಲಾತಿ ವಿಷಯದಲ್ಲೂ ಅಂತಿಮ ದಿನಗಳಲ್ಲಿ ಹೆಚ್ಚಿನ ಆಕ್ಷೇಪಣೆಗಳು ಸಲ್ಲಿಕೆಯಾಗುವ ನಿರೀಕ್ಷೆ ಇದೆ ಎಂದು ನಗರಾಭಿವೃದ್ಧಿ ಇಲಾಖೆ ಅಧಿಕಾರಿಗಳು ತಿಳಿಸಿದರು.

ಶೇ 30ರಷ್ಟು ಬದಲು!

‘ಮೀಸಲಾತಿ ನಿಗದಿಪಡಿಸುವಲ್ಲಿ ಸಾಕಷ್ಟು ಸಮಸ್ಯೆ ಆಗಿರುವುದು ನಿಜ. ಇದನ್ನು ನಾವೂ ಪಕ್ಷದ ಹಿರಿಯರು, ಸಚಿವರು ಮತ್ತು ಶಾಸಕರ ಗಮನಕ್ಕೆ ತಂದಿದ್ದೇವೆ. ಕರಡು ಪಟ್ಟಿ ಇದೀಗ ಬಿಡುಗಡೆಯಾಗಿದ್ದು, ಅಂತಿಮ ಅಧಿಸೂಚನೆ ಹೊರಬೀಳುವಾಗ ಸುಮಾರು ಶೇ 30ರಷ್ಟು ಬದಲಾವಣೆ ಆಗುವ ಸಾಧ್ಯತೆ ಇದೆ’ ಎಂದು ವಾರ್ಡ್‌ಗಳ ಮೀಸಲಾತಿ ಬದಲಾಗಿ ಸ್ಪರ್ಧೆ ಸಾಧ್ಯವಾಗದೆ ಪರಿತಪಿಸುತ್ತಿರುವ ಬಿಜೆಪಿಯ ಮುಖಂಡರು ತಿಳಿಸಿದರು.



ಸಿ ಡಬ್ಲ್ಯೂ ಜಿ ಯಲ್ಲಿ ಭಾರತೀಯ ಕುಸ್ತಿ ಪಟುಗಳ ಮಿಂಚು

ಮೀಸಲಾತಿ ವಿರೋಧಿಸಿ ಪ್ರತಿಭಟನೆ

ಕೆ.ಆರ್.ಪುರ: ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ಬಿಬಿಎಂಪಿಯ ಹದಿಮೂರು ವಾರ್ಡ್‌ಗಳ ಪೈಕಿ ಒಂದನ್ನು ಮಾತ್ರ ಪರಿಶಿಷ್ಟ ಜಾತಿಗೆ ಮೀಸಲಿರಿಸಿ ದಲಿತ ವಿರೋಧಿ ನೀತಿಯನ್ನು ಅನುಸರಿಸಲಾಗುತ್ತಿದೆ ಎಂದು ಕ್ಷೇತ್ರದ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ವರ್ತೂರು ಕೋಡಿ ಬಳಿ ಪ್ರತಿಭಟನೆ ನಡೆಸಿದರು.

ಮಹದೇವಪುರ ಕ್ಷೇತ್ರವು ದಲಿತ ಮೀಸಲು ಕ್ಷೇತ್ರವಾಗಿದೆ. ಕ್ಷೇತ್ರದಲ್ಲಿ ಸುಮಾರು 1.70 ಲಕ್ಷಕ್ಕೂ ಹೆಚ್ಚು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಸಮುದಾಯವರಿದ್ದಾರೆ. ಮಹದೇವಪುರ ಕ್ಷೇತ್ರದ ಶಾಸಕರ ಕುಮ್ಮಕ್ಕಿನಿಂದ ಹದಿಮೂರು ವಾರ್ಡ್‌ಗಳಲ್ಲಿ ಒಂದನ್ನು ಮಾತ್ರ ಪರಿಶಿಷ್ಟ ಜನಾಂಗಕ್ಕೆ ಮೀಸಲಿಟ್ಟು ದಲಿತ ಜನಾಂಗಕ್ಕೆ ಅನ್ಯಾಯ ಮಾಡಲಾಗಿದೆ ಎಂದು ಕೆಪಿಸಿಸಿ ಎಸ್ಸಿ ಘಟಕದ ಉಪಾಧ್ಯಕ್ಷ ನಲ್ಲೂರಹಳ್ಳಿ ನಾಗೇಶ್ ಆರೋಪಿಸಿದರು.

ಬಿಜೆಪಿ ಶಾಸಕರಿಗೆ ಚುನಾವಣೆ ಮಾಡಲು ಇಷ್ಟವಿಲ್ಲ. ಚುನಾವಣೆ ಮುಂದೂಡುವುದು ಇವರ ಉದ್ದೇಶವಾಗಿದೆ. ಕೆಎಂಸಿ ಕಾಯ್ದೆ ಪ್ರಕಾರ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಾದ ಚುನಾವಣಾ ಆಯೋಗ, ನಗರಾಭಿವೃದ್ಧಿ ಇಲಾಖೆ ಬಿಜೆಪಿ ಕೈಗೊಂಬೆಗಳಾಗಿ ಕಾರ್ಯನಿರ್ವಹಿಸುತ್ತಿವೆ. ಸಂವಿಧಾನದ ಪ್ರಕಾರ ಮೀಸಲಾತಿ ಪ್ರಕಟಿಸದೆ ದಲಿತ ಹಿಂದುಳಿದ ಇತರ ಜಾತಿಗಳಿಗೆ ಅನ್ಯಾಯ ಎಸಗಲಾಗಿದೆ ಎಂದು ದೂರಿದರು.

ಪಾಲಿಕೆಯ ಮಾಜಿ ಸದಸ್ಯ ಉದಯ ಕುಮಾರ್ ಮಾತನಾಡಿ, ಬಿಜೆಪಿಯವರ ಭ್ರಷ್ಟ ದುರಾಲೋಚನೆಯಿಂದ ಕಾಂಗ್ರೆಸ್ ಶಾಸಕರು ಇರುವ ಕ್ಷೇತ್ರಗಳಲ್ಲಿ ಬಿಜೆಪಿಯವರು ಅವರ ಇಷ್ಟಾನುಸಾರ ಮೀಸಲಾತಿ ಹಾಗೂ ವಾರ್ಡ್ ವಿಂಗಡಣೆ ಮಾಡಿದ್ದಾರೆ. ಇದು ಚುನಾವಣೆ ಮುಂದೂಡುವ ತಂತ್ರವಾಗಿದೆ. ಕಾಂಗ್ರೆಸ್ ಪಕ್ಷ ನ್ಯಾಯಾಲಯದ ಮೆಟ್ಟಿಲು ಹತ್ತಲಿದೆ ಎಂದು ಹೇಳಿದರು.

ಕೆಪಿಸಿಸಿ ಹಿಂದುಳಿದ ವರ್ಗಗಳ ರಾಜ್ಯ ಪ್ರಧಾನ ಕಾರ್ಯದರ್ಶಿ ಬೆಳತೂರು ರಮೇಶ್, ವರ್ತೂರು ಎಸ್ಸಿ, ಎಸ್ಟಿ ಬ್ಲಾಕ್ ಅಧ್ಯಕ್ಷ ಮುನಿರಾಜು, ಮಾಜಿ ಅಧ್ಯಕ್ಷ ಜಯರಾಂ ರೆಡ್ಡಿ, ಮುಖಂಡರಾದ ವಿಟಿಬಿ ಬಾಬು, ನಾಗಪ್ಪ, ಅನಿಲ್, ರಾಮಕೃಷ್ಣಪ್ಪ ಇದ್ದರು.



ಬಿಬಿಎಂಪಿ ಮೀಸಲಾತಿ ವಿರೋಧಿಸಿ ಕಾಂಗ್ರೆಸ್ ಮಹದೇವಪುರ ಘಟಕದ ಕಾರ್ಯಕರ್ತರು ವರ್ತೂರು ಕೋಡಿ ಬಳಿ ಪ್ರತಿಭಟನೆ ನಡೆಸಿದರು. ಕೆಪಿಸಿಸಿ ಎಸ್ಸಿ ಘಟಕದ ಉಪಾಧ್ಯಕ್ಷ ನಲ್ಲೂರಹಳ್ಳಿ ನಾಗೇಶ್, ಮಾಜಿ ಪಾಲಿಕೆ ಸದಸ್ಯ ಉದಯಕುಮಾರ್, ಬೆಳತೂರು ರಮೇಶ್, ಜಯರಾಂ ರೆಡ್ಡಿ, ಮುನಿರಾಜು, ಲಕ್ಷ್ಮಿ ಪ್ರಸಾದ್ ಇದ್ದರು



ಸಿತಾರ್ ರತ್ನ ರಹಿಮತ್ ಖಾನ್ ಸಾಹೇಬ್ ಸ್ಮರಣಾರ್ಥ ಸಿತಾರ್ ನವಾಝ್ ಉಸ್ತಾದ್ ಬಾಲೇಖಾನ್ ಸ್ಮರಣಾರ್ಥ ಸಂಸ್ಥೆ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ‘ಸುರ್ ಹೀ ಈಶ್ವರ್’ ಕಾರ್ಯಕ್ರಮದಲ್ಲಿ ನವದೆಹಲಿಯ ಸಂತೋಷ್ ನಹರ್ ಹಾಗೂ ಮಂಗಳೂರಿನ ಉಸ್ತಾದ್ ರಫೀಕ್ ಖಾನ್ ಅವರಿಂದ ವಯೋಲಿನ್–ಸಿತಾರ್ ಜುಗಲ್‌ಬಂದಿ ನಡೆಯಿತು —ಪ್ರಜಾವಾಣಿ ಚಿತ್ರ

ಸಂಸತ್ ಭವನ: ‘ಅನುಭವ ಮಂಟಪ’ ಹೆಸರಿಡಲು ಆಗ್ರಹ

ಬೆಂಗಳೂರು: ನೂತನ ಸಂಸತ್ ಭವನಕ್ಕೆ ‘ಅನುಭವ ಮಂಟಪ’ ಎಂದು ನಾಮಕರಣ ಮಾಡುವಂತೆ ವೀರಶೈವ ಲಿಂಗಾಯತ ಸಂಘಟನಾ ವೇದಿಕೆ ಆಗ್ರಹಿಸಿದೆ.

‘ಬಸವಾದಿ ಶರಣರು 12ನೇ ಶತಮಾನದಲ್ಲಿ ಅನುಭವ ಮಂಟಪದ ಮೂಲಕ ಬಸವಕಲ್ಯಾಣದಲ್ಲಿ ಪ್ರಪ್ರಥಮ ಸಂಸತ್ತನ್ನು ಪ್ರಾರಂಭಿಸಿ, ವಿಶ್ವಕ್ಕೆ ಪ್ರಜಾಪ್ರಭುತ್ವ ಸಂಸತ್ತಿನ ಪರಿಕಲ್ಪನೆ ನೀಡಿದರು. ಆದ್ದರಿಂದ ಪ್ರಧಾನಿ ಮೋದಿ ಅವರು ಸಂಸತ್ ಭವನಕ್ಕೆ ‘ಅನುಭವ ಮಂಟಪ’ ಎಂದು ನಾಮಕರಣ ಮಾಡಬೇಕು’ ಎಂದು ವೇದಿಕೆಯ ರಾಷ್ಟ್ರೀಯ ಅಧ್ಯಕ್ಷ ಪ್ರದೀಪ ಕಂಕಣವಾಡಿ ತಿಳಿಸಿದ್ದಾರೆ.

‘ಅವಕಾಶ ತಪ್ಪಿಸಲು ಮೀಸಲಾತಿ ಅನ್ಯಾಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರಿಗೆ ಗೆಲುವಿನ ಅವಕಾಶ ತಪ್ಪಿಸುವುದಕ್ಕಾಗಿಯೇ ಮೀಸಲಾತಿ ನಿಗದಿಯಲ್ಲಿ ಅನ್ಯಾಯ ಮಾಡಲಾಗಿದೆ. ಇದರ ವಿರುದ್ಧ ಹೋರಾಟ ಮುಂದುವರಿಸಲಾಗುವುದು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಅವರು, ‘ಕಾಂಗ್ರೆಸ್ ಶಾಸಕರು ಪ್ರತಿನಿಧಿಸುವ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯ 93 ವಾರ್ಡ್‌ಗಳ ಪೈಕಿ 76 ವಾರ್ಡ್‌ಗಳನ್ನು ಮಹಿಳೆಯರಿಗೆ ಮೀಸಲಿಡಲಾಗಿದೆ. ಇದು ನ್ಯಾಯವೋ? ಅನ್ಯಾಯವೋ’ ಎಂದು ಪ್ರಶ್ನಿಸಿದರು.

ಬಿಜೆಪಿ ಶಾಸಕರಿರುವ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ 14 ವಾರ್ಡ್‌ಗಳ ಪೈಕಿ ಒಂಬತ್ತು ಮಹಿಳಾ ಮೀಸಲು ಎಂದು ಘೋಷಿಸಲಾಗಿದೆ. ಆದರೆ, ಕಾಂಗ್ರೆಸ್ ಶಾಸಕರಿರುವ ಬಿಟಿಎಂ ಬಡಾವಣೆ ವಿಧಾನಸಭಾ ಕ್ಷೇತ್ರದ ಒಂಬತ್ತು ವಾರ್ಡ್‌ಗಳ ಪೈಕಿ ಎಂಟು, ಗಾಂಧಿನಗರದಲ್ಲಿ ಎಲ್ಲ ಏಳು ವಾರ್ಡ್ ಮತ್ತು ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಎಲ್ಲ ಆರು ವಾರ್ಡ್‌ಗಳನ್ನು ಮಹಿಳೆಯರಿಗೆ ಮೀಸಲಿಡಲಾಗಿದೆ ಎಂದರು.

‘ಮಹಿಳಾ ಮೀಸಲಾತಿಯನ್ನು ಕಾಂಗ್ರೆಸ್ ವಿರೋಧಿಸಿಲ್ಲ. ಆದರೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಮತ್ತು ಮಹಿಳೆಯರಿಗೆ ವಾರ್ಡ್‌ಗಳನ್ನು ಮೀಸಲಿಡುವ ಪ್ರಕ್ರಿಯೆಯಲ್ಲಿ ಅಕ್ರಮ ನಡೆಯಬಾರದು ಎಂಬುದು ನಮ್ಮ ಬೇಡಿಕೆ. ನ್ಯಾಯಯುತವಾಗಿ ಮೀಸಲಾತಿ ನಿಗದಿ ಮಾಡಬೇಕು’ ಎಂದು ಆಗ್ರಹಿಸಿದರು.

ಬಿಬಿಎಂಪಿ ಚುನಾವಣೆ ಎದುರಿಸಲು ಕಾಂಗ್ರೆಸ್ ಸಿದ್ಧವಾಗಿದೆ. ವಾರ್ಡ್‌ಗಳ ಪುನರ್ ವಿಂಗಡಣೆ ಸಂಬಂಧ 3,000 ಆಕ್ಷೇಪಣೆಗಳು ಸಲ್ಲಿಕೆಯಾಗಿದ್ದವು. ಯಾವುದನ್ನೂ ನಗರಾಭಿವೃದ್ಧಿ ಇಲಾಖೆ ಪರಿಹರಿಸಿಲ್ಲ. ಇಲಾಖೆಯ ಲೋಪವನ್ನು ಖಂಡಿಸಿ ಕಾಂಗ್ರೆಸ್ ಮುಖಂಡರು ಪ್ರತಿಭಟನೆ ನಡೆಸಿದ್ದಾರೆ. ಇದರಲ್ಲಿ ತಪ್ಪೇನೂ ಇಲ್ಲ ಎಂದರು. ರಾಜ್ಯದಲ್ಲಿ ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಲ್ಪಸಂಖ್ಯಾತ ಸಮುದಾಯಗಳ ಜನರ ಹೆಸರನ್ನು ಮತದಾರರ ಪಟ್ಟಿಯಿಂದ ತೆಗೆಯಲಾಗಿದೆ. ಈ ಕುರಿತು ಪರಿಶೀಲನೆ ನಡೆಸುವಂತೆ ಪಕ್ಷದ ಕಾರ್ಯಕರ್ತರಿಗೆ ಸೂಚನೆ ನೀಡಲಾಗಿದೆ ಎಂದರು.

29,000 ಮಂದಿ ನೋಂದಣಿ

‘ಆಗಸ್ಟ್ 15ರಂದು ನಗರದ ಸಂಗೊಳ್ಳಿ ರಾಯಣ್ಣ ವೃತ್ತದಿಂದ ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನದವರೆಗೆ ಕಾಂಗ್ರೆಸ್ ಪಕ್ಷದ ವತಿಯಿಂದ ಹಮ್ಮಿಕೊಂಡಿರುವ ಸ್ವಾತಂತ್ರ್ಯ ನಡಿಗೆಯಲ್ಲಿ ಭಾಗವಹಿಸಲು 29,000 ಜನರು ಈವರೆಗೆ ನೋಂದಣಿ ಮಾಡಿಸಿದ್ದಾರೆ’ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ನೋಂದಣಿ ಮಾಡಿದವರಿಗೆ 1.5 ಲಕ್ಷ ರಾಷ್ಟ್ರಧ್ವಜ, ಟೋಪಿ ಮತ್ತು ಟೀ ಷರ್ಟ್‌ಗಳನ್ನು ಉಚಿತವಾಗಿ ವಿತರಿಸಲಾಗುವುದು. ಆ.15ರಂದು ಮೆಟ್ರೊ ಪ್ರಯಾಣಿಕರಿಗೆ ಶೇಕಡ 50ರಷ್ಟು ರಿಯಾಯಿತಿ ನೀಡುವಂತೆ ಮುಖ್ಯಮಂತ್ರಿಯವರಿಗೆ ಮನವಿ ಮಾಡಲಾಗುವುದು ಎಂದರು.

‘ಕಮ್ಯುನಿಸ್ಟ್ ಚಳವಳಿ ಹಿನ್ನಡೆಯಿಂದ ಆರ್‌ಎಸ್‌ಎಸ್ ಬೆಳವಣಿಗೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಾಗತಿಕ ಮಟ್ಟದಲ್ಲಿ ಕಮ್ಯುನಿಸ್ಟ್ ಚಳವಳಿಗಾದ ಹಿನ್ನಡೆಯಿಂದ ದೇಶದಲ್ಲಿ ಆರ್‌ಎಸ್‌ಎಸ್ ಬೆಳೆಯಲು ಮುಖ್ಯ ಕಾರಣ ಆಯಿತು’ ಎಂದು ಎಸ್‌ಯುಸಿಐ ಪಕ್ಷದ ಕೇಂದ್ರ ಪಾಲಿಟ್ ಬ್ಯೂರೊ ಸದಸ್ಯ ಕೆ. ರಾಧಾಕೃಷ್ಣ ಹೇಳಿದರು.

ಮಾರ್ಕ್ಸ್‌ವಾದಿ ಚಿಂತಕ ಮತ್ತು ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷದ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿ ಶಿವದಾಸ್ ಅವರ ಜನ್ಮ ಶತಮಾನೋತ್ಸವದ ಅಂಗವಾಗಿ ನಗರದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ‘1974ರ ಹೋರಾಟದಲ್ಲಿ ಜಯಪ್ರಕಾಶ್ ನಾರಾಯಣ್ ಅವರು ಸಂಘ ಪರಿವಾರವನ್ನು ಸೇರಿಸಿಕೊಂಡಿದ್ದೇ ಕಾರಣ ಎಂದು ವಾದಿಸಲಾಗುತ್ತಿದೆ. ಆದರೆ ಇದು ಸುಳ್ಳು. ಬದಲಿಗೆ ತುರ್ತು ಪರಿಸ್ಥಿತಿ ವೇಳೆ ಸಿಪಿಐ, ಸಿಪಿಐಎಂನಂತಹ ಎಡ ಪಕ್ಷಗಳು ಈ ಹೋರಾಟದಲ್ಲಿ ಜನರ ಜೊತೆಗೆ ನಿಲ್ಲದಿರುವುದೇ ಕಾರಣ. ಎಡ ಪಕ್ಷಗಳು ಕ್ರಾಂತಿಕಾರಿ ಹೋರಾಟವಾಗಿ ಪರಿವರ್ತಿಸಬೇಕಿತ್ತು. ಪರ್ಯಾಯವಿಲ್ಲದ ಜನರು ಜನಸಂಘ, ಆರ್‌ಎಸ್‌ಎಸ್ ನತ್ತ ನೋಡಬೇಕಾಯಿತು’ ಎಂದು ವಿಶ್ಲೇಷಿಸಿದರು.

ಎಸ್‌ಯುಸಿಐಸಿ ಪಕ್ಷದ ರಾಜ್ಯ ಕಾರ್ಯದರ್ಶಿ ಕೆ.ಉಮಾ ಮಾತನಾಡಿ ‘ಪಕ್ಷ ಸಂಘಟಿಸುತ್ತಿರುವ ನೂರಾರು ಹೋರಾಟಗಳ ಹಿಂದಿನ ಸೈದ್ಧಾಂತಿಕ, ಸಾಂಸ್ಕೃತಿಕ-ನೈತಿಕ ಬಲ ಶಿವದಾಸ್ ಘೋಷ್’ ಎಂದು ಹೇಳಿದರು.

ಸದಸ್ಯ ರಾಮಾಂಜನಪ್ಪ ಆಲ್ದಳ್ಳಿ, ಎಚ್.ವಿ.ದಿವಾಕರ್, ಎಂ.ಎನ್.ಶ್ರೀರಾಂ, ಕೆ.ಸೋಮಶೇಖರ್, ಎಂ.ಶಶಿಧರ್, ಬಾ.ಸುನೀತ್ ಕುಮಾರ್ ಹಾಜರಿದ್ದರು.



ಶಿವದಾಸ್ ಘೋಷ್ ಅವರ 'ಆಗಸ್ಟ್ 15ರ ಸ್ವಾತಂತ್ರ್ಯ ಮತ್ತು ಜನತೆಯ ವಿಮುಕ್ತಿ', 'ಚೀನಾದ ಸಾಂಸ್ಕೃತಿಕ ಕ್ರಾಂತಿ', 'ಭಾರತದ ಸಾಂಸ್ಕೃತಿಕ ಚಳವಳಿ ಮತ್ತು ನಮ್ಮ ಕರ್ತವ್ಯಗಳು' ಎಂಬ ಕೃತಿಗಳ ಕನ್ನಡ ಅವತರಣಿಕೆಯನ್ನು ಕೆ.ರಾಧಾಕೃಷ್ಣ ಅವರು ಬಿಡುಗಡೆ ಮಾಡಿದರು

ವಿಕಾಸ ಚಾರಿಟಬಲ್ ಟ್ರಸ್ಟ್‌ನಿಂದ ಆರೋಗ್ಯ ತಪಾಸಣಾ ಶಿಬಿರ

ರಾಜರಾಜೇಶ್ವರಿನಗರ: ವಿಕಾಸ ಚಾರಿಟಬಲ್ ಟ್ರಸ್ಟ್ ಹಾಗೂ ಮುನಿರತ್ನ ಅಭಿಮಾನಿಗಳ ಬಳಗದಿಂದ ನಡೆದ ಉಚಿತ ಆರೋಗ್ಯ ತಪಾಸಣೆ ಶಿಬಿರದಲ್ಲಿ ನೂರಾರು ಮಂದಿ ಉಚಿತ ಔಷಧಿ ಹಾಗೂ ಚಿಕಿತ್ಸೆ ಪಡೆದುಕೊಂಡರು. ಇದೇ ವೇಳೆ ಹಲವರು ರಕ್ತದಾನ ಮಾಡಿದರು.

ಸುಂಕದಕಟ್ಟೆ ಸಮೀಪದ ರಾಜೀವ್‌ಗಾಂಧಿ ನಗರದಲ್ಲಿ ಯುನಿಟಿ ಲೈಫ್‌ಲೈನ್ ಆಸ್ಪತ್ರೆಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಡಾ.ಜಗದೀಶ್ ಹಾಲಪ್ಪ ಅವರು ಉಚಿತ ಔಷಧಿ ವಿತರಿಸಿದರು. ಡಾ.ಜಯರಾಮು, ಡಾ.ಗಿರೀಶ್ ನೇತೃತ್ವದಲ್ಲಿ 50ಕ್ಕೂ ಹೆಚ್ಚು ವೈದ್ಯರು ಚಿಕಿತ್ಸೆ ನೀಡಿದರು.

ಟ್ರಸ್ಟ್ ಅಧ್ಯಕ್ಷ ಕೆ.ಎಸ್.ಯೋಗೇಶ್ ಮಾತನಾಡಿ, ಕೋವಿಡ್ ನಂತರ ಹಲವರ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದ್ದು, ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸೆ ಪಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಅವರ ನೆರವಿಗೆ ಬಂದು ಸ್ವಲ್ಪ ಸಹಾಯ ಮಾಡಲು ಖಾಸಗಿ ಆಸ್ಪತ್ರೆಯ ನುರಿತ ವೈದ್ಯರ ನೆರವಿನೊಂದಿಗೆ ಆರೋಗ್ಯ ಶಿಬಿರ ಹಮ್ಮಿಕೊಳ್ಳಲಾಗಿದೆ. 350 ಜನರಿಗೆ ಉಚಿತ ಕನ್ನಡಕ ವಿತರಿಸಲಾಗಿದೆ ಎಂದರು.



ವಿಕಾಸ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಕೆ.ಎಸ್.ಯೋಗೇಶ್, ಬಿಜೆಪಿ ಮುಖಂಡ ಎಂ.ಮಂಜುನಾಥ್, ನಗರಸಭೆ ಮಾಜಿ ಸದಸ್ಯ ಹನುಮೇಗೌಡ, ಮುಖಂಡ ಪ್ರೇಮ್ ಮುರಳಿ ರಕ್ತದಾನ ಮಾಡಿದರು

ನಗರದಲ್ಲಿ ಇಂದು

ಮನೆ–ಮನಗಳಲ್ಲಿ ಶಿವಪೂಜೆ ಶಿವಾನುಭವ ಹಾಗೂ ಸಿದ್ಧಾಂತ ಶಿಖಾಮಣಿ–ವಚನ ಪ್ರವಚನ ಕಾರ್ಯಕ್ರಮ: ಬೆಳಿಗ್ಗೆ: ಸರೋಜಾ ಮತ್ತು ಶ್ರೀಧರ್, ಸ್ಥಳ: ಕೆ.ಎಚ್.ಬಿ ಕಾಲೊನಿ, ಕೋರಮಂಗಲ, ಸಂಜೆ: ಮನು ಇಟ್ಟಿನಾ, ಮಹಾಬಲೇಶ್ವರಪ್ಪ, ಇಟ್ಟಿನಾ ಹೌಸ್ ಕೈಕೊಂಡಹಳ್ಳಿ ಸರ್ಜಾಪುರ ರಸ್ತೆ

ಹಾವನೂರ್ ಆಯೋಗದ ಸುವರ್ಣ ಮಹೋತ್ಸವ: ಉದ್ಘಾಟನೆ: ಸಿದ್ದರಾಮಯ್ಯ, ಅಧ್ಯಕ್ಷತೆ: ರಾಮಚಂದ್ರಪ್ಪ, ಅತಿಥಿಗಳು: ಕೆ. ವೀರಮಣಿ, ಎಚ್.ಎಂ. ರೇವಣ್ಣ, ವಿ.ಆರ್. ಸುದರ್ಶನ್, ರವಿವರ್ಮಕುಮಾರ್, ಆಯೋಜನೆ: ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಸಂಜೆ 4

ಪೌರಾಣಿಕ ನಾಟಕೋತ್ಸವ: ಉದ್ಘಾಟನೆ: ಬಲವಂತರಾವ್ ಪಾಟೀಲ, ಅಧ್ಯಕ್ಷತೆ: ಆರ್. ಭೀಮಸೇನ, ಅತಿಥಿಗಳು: ಚಿಕ್ಕಹೆಜ್ಜಾಜಿ ಮಹದೇವ್, ಪಾಲನೇತ್ರ, ಎಂ.ಜಗದೀಶ್‌ಗೌಡ, ಎಚ್.ಎಸ್. ಗೋವಿಂದಗೌಡ, ಆಯೋಜನೆ: ಕರ್ನಾಟಕ ರಂಗಸಂಗೀತ ಪರಿಷತ್ತು, ಸ್ಥಳ: ರವೀಂದ್ರ ಕಲಾಕ್ಷೇತ್ರ, ಮಧ್ಯಾಹ್ನ 3

ವಚನ ಶ್ರಾವಣ: ಗಾಯನ: ಈರಯ್ಯ ಚಿಕ್ಕಮಠ, ಉಪನ್ಯಾಸ: ಎಸ್. ಪಿನಾಕಪಾಣಿ, ಅಧ್ಯಕ್ಷತೆ: ಎಸ್.ಆರ್. ಪಾಟೀಲ, ಅತಿಥಿಗಳು: ನಟರಾಜ್ ಸಾಗರನಹಳ್ಳಿ, ಬಿ.ಕೆ. ಚಂದ್ರಶೇಖರ್, ರಾಮಲಿಂಗಪ್ಪ, ಕೆ.ಬಿ. ರುದ್ರಪ್ಪ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಸರ್ವಮಂಗಳಮ್ಮ ಸಿದ್ಧಯ್ಯ ವಿದ್ಯಾರ್ಥಿನಿಯರ ನಿಲಯ, ಮಹಾಲಕ್ಷ್ಮೀಪುರ, ಸಂಜೆ 6


ರಾಘವೇಂದ್ರ ಸಾರ್ವಭೌಮರ 351ನೇ ಆರಾಧನೆ ಹಾಗೂ ಶ್ರೀಕೃಷ್ಣ ಜಯಂತಿ ಉತ್ಸವ: ಪ್ರವಚನ: ಕಲ್ಲಾಪುರ ಪವಮಾನಾಚಾರ್, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ಸುಧೀಂದ್ರನಗರ, ಮಲ್ಲೇಶ್ವರ, ಸಂಜೆ 6.30

ಪ್ರವಾಸಿಗರಿಗೆ ಮುದ ನೀಡಿದ ತುಂತುರು ಮಳೆ

ಗಿರಿಧಾಮದ ವಾಹನ ನಿಲುಗಡೆ ಸ್ಥಳದಲ್ಲಿ 300 ಕಾರುಗಳ ನಿಲುಗಡೆಗೆ ಮಾತ್ರ ಜಿಲ್ಲಾಡಳಿತ ಅವಕಾಶ ನೀಡುತ್ತಿದೆ. ಭಾನುವಾರ ಪಾರ್ಕಿಂಗ್ ನಿಲುಗಡೆಯ ಸ್ಥಳ ತುಂಬಿತ್ತು

ನಂದಿ ಗಿರಿಧಾಮಕ್ಕೆ ಪ್ರವಾಸಿಗರ ದಂಡು

ಚಿಕ್ಕಬಳ್ಳಾಪುರ: ಪ್ರಸಿದ್ಧ ನಂದಿ ಗಿರಿಧಾಮದಲ್ಲಿ ಭಾನುವಾರ ಬೆಳ್ಳಂಬೆಳಿಗ್ಗೆಯೇ ಪ್ರವಾಸಿಗರ ದಂಡು ಹರಿದು ಬಂದಿತ್ತು. ಬೈಕು, ಕಾರುಗಳಲ್ಲಿ ಹೆಚ್ಚಿನ ಸಂಖ್ಯೆಯ ಪ್ರವಾಸಿಗರು ಗಿರಿಧಾಮಕ್ಕೆ ಬಂದರು. ತುಂತುರು ಮಳೆ ಪ್ರವಾಸಿಗರಿಗೆ ಮತ್ತಷ್ಟು ಮುದ ನೀಡಿತ್ತು.



ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿರುವ ನಂದಿಬೆಟ್ಟ

ಇಡೀ ಗಿರಿಧಾಮ ಬೆಳಿಗ್ಗೆ ಮಂಜು ಹೊದ್ದು ಮಲಗಿತ್ತು. ಬೆಳಿಗ್ಗೆಯೇ ಗಿರಿಧಾಮವು ಪ್ರವಾಸಿಗರಿಂದ ತುಂಬಿ ತುಳುಕುತ್ತಿತ್ತು. ದ್ವಾರದಿಂದಲೇ ಪ್ರವಾಸಿಗರು ಸಾಲುಗಟ್ಟಿ ನಿಂತಿದ್ದರು. ಪ್ರವೇಶದ ದ್ವಾರದಲ್ಲಿ ಪೊಲೀಸರು ಬ್ಯಾರಿಕೇಡ್‌ಗಳನ್ನು ಅಳವಡಿಸಿದ್ದರು.

ಬೆಳಿಗ್ಗೆಯಿಂದ ಸಂಜೆಯವರೆಗೂ ವಾಹನಗಳಲ್ಲಿ ಅಪಾರ ಸಂಖ್ಯೆಯಲ್ಲಿ ಪ್ರವಾಸಿಗರು ನಂದಿಬೆಟ್ಟಕ್ಕೆ ಬಂದರು.

ಸಾಮಾನ್ಯವಾಗಿ ವಾರಾಂತ್ಯದ ದಿನಗಳಾದ ಶನಿವಾರ ಮತ್ತು ಭಾನುವಾರ ಗಿರಿಧಾಮಕ್ಕೆ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಾರೆ.

ತಿಂಗಳಲ್ಲಿ 562 ಪ್ರಕರಣಗಳು ವರದಿ • 4 ಸಾವಿರಕ್ಕೂ ಅಧಿಕ ಮಂದಿಗೆ ತಪಾಸಣೆ

ಡೆಂಗಿ: ನಗರದಲ್ಲಿ ಉಲ್ಬಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆಯಿಂದಾಗಿ ನಗರದಲ್ಲಿ ಡೆಂಗಿ ಪ್ರಕರಣಗಳು ಉಲ್ಬಣಗೊಂಡಿದ್ದು, ತಿಂಗಳಲ್ಲಿ 562 ಪ್ರಕರಣಗಳು ದೃಢಪಟ್ಟಿವೆ.

ಮೊದಲ ಆರು ತಿಂಗಳು ಡೆಂಗಿ ನಿಯಂತ್ರಣದಲ್ಲಿತ್ತು. ಆ ವೇಳೆ ಜ್ವರಕ್ಕೆ ಒಳಪಟ್ಟವರ ಸಂಖ್ಯೆ 350ರ ಗಡಿಯ ಆಸುಪಾಸಿನಲ್ಲಿತ್ತು. ಬಿಸಿಲು–ಮಳೆಯಿಂದಾಗಿ ಪ್ರಕರಣಗಳ ಸಂಖ್ಯೆ ದಿಢೀರ್ ಹೆಚ್ಚಳವಾಗಿದೆ. ಕಳೆದೊಂದು ವಾರದಲ್ಲಿಯೇ 115 ಮಂದಿ ಈ ಜ್ವರದಿಂದ ಬಳಲಿದ್ದಾರೆ. ಈವರೆಗೆ ನಗರದಲ್ಲಿ ವರದಿಯಾದ ಡೆಂಗಿ ಪ್ರಕರಣಗಳ ಒಟ್ಟು ಸಂಖ್ಯೆ ಸಾವಿರದ ಗಡಿ (950) ಸಮೀಪಿಸಿದೆ. ಕಳೆದ ವರ್ಷ ಈ ವೇಳೆ ಡೆಂಗಿ ಪ್ರಕರಣಗಳ ಸಂಖ್ಯೆ 300ರ ಗಡಿಯೊಳಗಿತ್ತು.

ನಗರದಲ್ಲಿ ಈವರೆಗೆ 34,987 ಮಂದಿಯಲ್ಲಿ ಡೆಂಗಿ ಶಂಕೆ ವ್ಯಕ್ತವಾಗಿದೆ. ಅವರಲ್ಲಿ 4,351 ಮಂದಿಯ ರಕ್ತದ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ.



ಡೆಂಗಿ ನಿಯಂತ್ರಣಕ್ಕೆ ಮನೆ ಮನೆ ಸಮೀಕ್ಷೆ, ಜಾಗೃತಿ ಸೇರಿ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಆಸ್ಪತ್ರೆಗಳಲ್ಲಿ ಪರೀಕ್ಷೆ ನಡೆಸಲಾಗುತ್ತಿದೆ.
ಡಾ.ಕೆ.ವಿ. ತ್ರಿಲೋಕ್ ಚಂದ್ರ,
ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ)

ಡೆಂಗಿ ಜ್ವರಕ್ಕೆ ಈ ವರ್ಷ ಯಾವುದೇ ಮರಣ ಪ್ರಕರಣ ವರದಿಯಾಗಿಲ್ಲ. 903 ಮಂದಿಯಲ್ಲಿ ಚಿಕೂನ್‌ಗುನ್ಯ ಜ್ವರದ ಶಂಕೆ ವ್ಯಕ್ತವಾಗಿದೆ. ಅವರಲ್ಲಿ 22 ಮಂದಿಯ ರಕ್ತದ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. 10 ಮಂದಿಯಲ್ಲಿ ಚಿಕೂನ್‌ಗುನ್ಯ ಜ್ವರ ದೃಢಪಟ್ಟಿದೆ.

‘ನೀರಿನ ತೊಟ್ಟಿಗಳು, ಟ್ಯಾಂಕ್‌ಗಳು ಮತ್ತು ಬ್ಯಾರಲ್‌ಗಳನ್ನು ಕನಿಷ್ಠ ಒಂದು ವಾರಗಳಿಗೊಮ್ಮೆ ಸ್ವಚ್ಛಗೊಳಿಸಿ, ಮುಚ್ಚಿಡಬೇಕು. ಮಳೆ ನೀರು ಸಂಗ್ರಹವಾಗುವ ವಾಹನಗಳ ಚಕ್ರಗಳು, ತೆಂಗಿನ ಚಿಪ್ಪುಗಳನ್ನು ವಿಲೇವಾರಿ ಮಾಡಬೇಕು. ಹವಾನಿಯಂತ್ರಿತ ಯಂತ್ರಗಳು, ಹೂವಿನಕುಂಡಗಳಲ್ಲಿ ಪ್ರತಿ ವಾರ ನೀರನ್ನು ಖಾಲಿ ಮಾಡಬೇಕು’ ಎಂದು ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ಹೇಳಿದರು.

‘ಕೆಲ ದಿನಗಳಿಂದ ಮಳೆಯಾಗುತ್ತಿರುವುದರಿಂದ ಸೊಳ್ಳೆಗಳ ಉತ್ಪತ್ತಿಯೂ ಹೆಚ್ಚಾಗಬಹುದು. ಜ್ವರ, ಮೈ-ಕೈ ನೋವು ಮತ್ತು ಕೀಲು ನೋವು, ತೀವ್ರತರ ತಲೆನೋವು ಸೇರಿದಂತೆ ವಿವಿಧ ಲಕ್ಷಣಗಳು ಕಾಣಿಸಿಕೊಂಡರೆ ಕೂಡಲೇ ಹತ್ತಿರ ಸರ್ಕಾರಿ ಆರೋಗ್ಯ ಕೇಂದ್ರಗಳಿಗೆ ತೆರಳಿ, ತಪಾಸಣೆ ಮಾಡಿಸಿಕೊಳ್ಳಬೇಕು’ ಎಂದು ತಿಳಿಸಿದರು.



ಜಾಗೃತಿ ಕೊರತೆ

‘ಎಡಬಿಡದೆ ಸುರಿಯುತ್ತಿರುವ ಮಳೆಯಿಂದಾಗಿ ಡೆಂಗಿ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾಗುತ್ತಿವೆ. ಕೆಲವೆಡೆ ಮಳೆ ನೀರು ಹಾಗೇ ನಿಂತಿರುವುದರಿಂದ ಸೊಳ್ಳೆಗಳ ಉತ್ಪತ್ತಿ ಹೆಚ್ಚಳವಾಗಿದೆ. ಈಡಿಸ್ ಎಂಬ ಸೊಳ್ಳೆ ಕಡಿತದಿಂದ ಬರುವ ಡೆಂಗಿ ಜ್ವರ, ಒಬ್ಬರಿಂದ ಮತ್ತೊಬ್ಬರಿಗೆ ಬಹುಬೇಗ ಹರಡುತ್ತದೆ. ಹಗಲು ಹೊತ್ತಿನಲ್ಲಿ ಕಚ್ಚುವ ಈ ಸೊಳ್ಳೆ, ಸಂಗ್ರಹಿಸಿಟ್ಟ ನೀರಿನಲ್ಲಿ ಮೊಟ್ಟೆಯಿಟ್ಟು, ಸಂತಾನೋತ್ಪತ್ತಿ ಮಾಡುತ್ತದೆ. ಜನರಲ್ಲಿ ಸ್ವಚ್ಛತೆ ಬಗ್ಗೆ ಇರುವ ಅಸಡ್ಡೆ ಹಾಗೂ ಜಾಗೃತಿ ಕೊರತೆ ರೋಗ ಹೆಚ್ಚಳಕ್ಕೆ ಪ್ರಮುಖ ಕಾರಣ’ ಎಂದು ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಸುದ್ದಿ 2 ನಿಮಿಷ

ವಿಧಾನಸೌಧದಲ್ಲಿ ಇದೇ 10ರಿಂದ ಚಾರಿತ್ರಿಕ ದಾಖಲೆಗಳ ಪ್ರದರ್ಶನ

ಬೆಂಗಳೂರು: ಸ್ವಾತಂತ್ರ್ಯದ ಅಮೃತಮಹೋತ್ಸವದ ಅಂಗವಾಗಿ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಇದೇ 10 ರಿಂದ ಚಾರಿತ್ರಿಕ ದಾಖಲೆಗಳ ಪ್ರದರ್ಶನವನ್ನು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಏರ್ಪಡಿಸಿದೆ.

ವಿಶೇಷವಾಗಿ ಮೈಸೂರು ಸಂಸ್ಥಾನದ ಇತಿಹಾಸವನ್ನು ತಿಳಿಸುವ 1881 ರಿಂದ ಹತ್ತನೇ ಚಾಮರಾಜ ಒಡೆಯರ್, ಮಹಾರಾಣಿ ವಾಣಿವಿಲಾಸ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಳ್ವಿಕೆಗೆ ಸಂಬಂಧಿಸಿದ 46ಕ್ಕೂ ಹೆಚ್ಚು ಇಲಾಖೆಗಳ ದಾಖಲೆಗಳನ್ನು ಪ್ರದರ್ಶಿಸಲಾಗುವುದು.

ಇವುಗಳಲ್ಲಿ ಅತ್ಯಂತ ಹಳೆಯ ದಾಖಲೆ ಎಂದರೆ 1799ರ ಶ್ರೀರಂಗಪಟ್ಟಣದ ಒಪ್ಪಂದದ ಕರಡು, ನಂತರ 1844ರಿಂದ ಮುಜರಾಯಿ ಕಡತಗಳು, 1881 ರಿಂದ ಕಂದಾಯ, ಭೂಕಂದಾಯ ಇಲಾಖೆಯ ಕಡತಗಳು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಕಡತಗಳು, ಬ್ಯಾಂಕಿಂಗ್, ಕೃಷಿ, ಮುನ್ಸಿಪಾಲಿಟಿ, ಶಿಕ್ಷಣ, ಆರೋಗ್ಯ ಮುಂತಾದ ಇಲಾಖೆಗಳ ಸುಮಾರು 1.45 ಲಕ್ಷ ಕಡತಗಳನ್ನು ಸಂಗ್ರಹಿಸಿ ಕ್ಯಾಟಲಾಗ್ ತಯಾರಿಸಲಾಗಿದೆ. ಇವುಗಳಲ್ಲಿ ಕೆಲವನ್ನು ಪ್ರದರ್ಶನಕ್ಕೆ ಇಡಲಾಗುವುದು ಎಂದು ಇಲಾಖೆ ಮೂಲಗಳು ತಿಳಿಸಿವೆ.

ಕೋವಿಡ್: 150 ಕುಟುಂಬಗಳು ದತ್ತು



ಬೆಂಗಳೂರು: ಕೋವಿಡ್‌ನಿಂದ ಸಂಕಷ್ಟಕ್ಕೆ ಸಿಲುಕಿದ 150 ಕುಟುಂಬಗಳನ್ನು ಹೀರೋ ಮೋಟೋಕಾರ್ಪ್ ದತ್ತು ತೆಗೆದುಕೊಂಡಿದೆ. ‘ಈ ಕುಟುಂಬಗಳ ಮಹಿಳೆಯರ ಕೌಶಲ ವೃದ್ಧಿಗೆ, ಮಕ್ಕಳ ಶಿಕ್ಷಣಕ್ಕೆ ಹಣಕಾಸು ನೆರವು ಒದಗಿಸಲಾಗುವುದು’ ಎಂದು ಸಂಸ್ಥೆ ತಿಳಿಸಿದೆ.

ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಅಡಿ ಸಂಸ್ಥೆಯು ‘ಹೀರೊ ವಿ ಕೇರ್’ ಮತ್ತು ‘ಹೀರೊ ಫಾರ್ ಹ್ಯುಮಾನಿಟಿ’ ಯೋಜನೆ ಹಮ್ಮಿಕೊಂಡಿದೆ. ಕೋವಿಡ್‌ನಿಂದ ಪಾಲಕರು ಮತ್ತು ಪೋಷಕರನ್ನು ಕಳೆದುಕೊಂಡ ಮಕ್ಕಳು, ಪತಿ ಕಳೆದುಕೊಂಡ ಮಹಿಳೆಯರಿಗೆ ಈ ಯೋಜನೆಯಡಿ ನೆರವು ನೀಡುವುದಾಗಿ ಸಂಸ್ಥೆ ಹೇಳಿದೆ.

‘ಯೋಜನೆಯ ಮೊದಲ ಹಂತದಲ್ಲಿ 35 ಕುಟುಂಬಗಳಿಗೆ ಪರಿಹಾರದ ಪ್ಯಾಕೇಜ್ ನೀಡಲಾಗಿದೆ. ಮಹಿಳೆಯರು ಉದ್ಯೋಗ ಪಡೆಯಲು ಮತ್ತು ಸ್ವಾವಲಂಬಿಗಳಾಗಲು ಅವರಿಗೆ ಕೌಶಲ ವೃದ್ಧಿ ಕಾರ್ಯಕ್ರಮಗಳನ್ನೂ ಹಮ್ಮಿಕೊಳ್ಳಲಾಗುತ್ತಿದೆ’ ಎಂದು ಸಂಸ್ಥೆಯ ಸಾಂಸ್ಥಿಕ ಸಂವಹನ ವಿಭಾಗದ ಮುಖ್ಯಸ್ಥ ಭರತೇಂದು ಕಬಿ ತಿಳಿಸಿದ್ದಾರೆ.

ಐಎಸ್ ಸಕ್ರಿಯ ಸದಸ್ಯನನ್ನು ಬಂಧಿಸಿದ ಎನ್‌ಐಎ

ನವದೆಹಲಿ (ಪಿಟಿಐ): ‘ರಾಷ್ಟ್ರೀಯ ತನಿಖಾ ಸಂಸ್ಥೆಯವರು (ಎನ್‌ಐಎ) ಇಸ್ಲಾಮಿಕ್ ಸ್ಟೇಟ್ (ಐಎಸ್) ಉಗ್ರ ಸಂಘಟನೆಯ ಸದಸ್ಯನೊಬ್ಬನನ್ನು ದೆಹಲಿಯಲ್ಲಿ ಬಂಧಿಸಿದ್ದಾರೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಮೊಹ್ಸಿನ್ ಅಹ್ಮದ್ ಬಂಧಿತ. ಪಟ್ನಾದವನಾದ ಈತ ಬಾಟ್ಲಾ ಹೌಸ್‌ನಲ್ಲಿ ವಾಸವಿದ್ದ. ಆತನನ್ನು ಶನಿವಾರ ಬಂಧಿಸಲಾಗಿದೆ’ ಎಂದು ಹೇಳಿದ್ದಾರೆ.

‘ಅಹ್ಮದ್, ಐಎಸ್‌ನ ಸಕ್ರಿಯ ಸದಸ್ಯನಾಗಿದ್ದ. ಭಾರತ ಹಾಗೂ ವಿದೇಶಗಳಲ್ಲಿ ನೆಲೆಸಿರುವವರಿಂದ ನಿಧಿ ಸಂಗ್ರಹಿಸುತ್ತಿದ್ದ ಈತ ಅದನ್ನು ಕ್ರಿಪ್ಟೊ ಕರೆನ್ಸಿ ರೂಪದಲ್ಲಿ ಸಿರಿಯಾ ಹಾಗೂ ಇತರ ದೇಶಗಳಿಗೆ ರವಾನಿಸುತ್ತಿದ್ದ. ಆತನ ನಿವಾಸದಲ್ಲಿ ಶೋಧ ನಡೆಸಿದಾಗ ಐಎಸ್ ಸಂಘಟನೆಯೊಂದಿಗೆ ಆನ್‌ಲೈನ್‌ನಲ್ಲಿ ಸಂಪರ್ಕದಲ್ಲಿರುವುದು ಖಚಿತಪಟ್ಟಿತ್ತು. ಆತನ ವಿರುದ್ಧ ಸುಮೊಟೊ ಪ್ರಕರಣ ದಾಖಲಿಸಲಾಗಿತ್ತು’ ಎಂದಿದ್ದಾರೆ.



ಪ್ರತಿಭಾ ಪುರಸ್ಕಾರ

ಕನಕಶ್ರೀ ಚಾರಿಟಬಲ್ ಟ್ರಸ್ಟ್ ವತಿಯಿಂದ ಭಾನುವಾರ ವಿಶ್ವೇಶ್ವರಯ್ಯ ಬಡಾವಣೆಯ ಕನಕ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ 2021–22ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿನಲ್ಲಿ ಉತ್ತಮ ಅಂಕ ಗಳಿಸಿದ ಬೆಂಗಳೂರು ನಗರ, ಗ್ರಾಮಾಂತರ ಜಿಲ್ಲೆಯ ಕುರುಬ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೆರವೇರಿಸಲಾಯಿತು. ರಾಮೋಹಳ್ಳಿ ರಾಮಕೃಷ್ಣ ಯೋಗಾಶ್ರಮದ ಅಧ್ಯಕ್ಷ ಸ್ವಾಮಿ ಯೋಗೇಶ್ವರಾನಂದ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಆಯುಕ್ತ ಕೆ.ಎ.ದಯಾನಂದ, ಐಪಿಎಸ್ ಅಧಿಕಾರಿ ಡಾ.ಭೀಮಾಶಂಕರ ಗುಳೇದ ಇದ್ದರು

‘ಬಿಜೆಪಿ ಸಂಘಟನೆಗೆ ಒತ್ತು ನೀಡಿ’

ವಿವಿಧ ಮೋರ್ಚಾದ ಅಧ್ಯಕ್ಷರ ಪದಗ್ರಹಣ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಹೆಬ್ಬಗೋಡಿಯಲ್ಲಿ ಬಿಜೆಪಿ ಹೆಬ್ಬಗೋಡಿ ಮಹಾಶಕ್ತಿ ಕೇಂದ್ರದ ವಿವಿಧ ಮೋರ್ಚಾದ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ಭಾನುವಾರ ನಡೆಯಿತು.

ಶಾಸಕ ಎಂ. ಕೃಷ್ಣಪ್ಪ ಮಾತನಾಡಿ, ಆನೇಕಲ್ ಪಕ್ಷದ ಭದ್ರಕೋಟೆಯಾಗಿದೆ. ರಾಜ್ಯದಾದ್ಯಂತ ಪಕ್ಷದ ಪರವಾದ ವಾತಾವರಣವಿದೆ. ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲುವು ಸಾಧಿಸಲು ಕಾರ್ಯಕರ್ತರು ಒಗ್ಗಟ್ಟಿನಿಂದ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ರಾಜ್ಯ ಮತ್ತು ಕೇಂದ್ರ ಸರ್ಕಾರ ಕೈಗೊಂಡಿರುವ ಜನಪರ ಕಾರ್ಯಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು. ಬಿಜೆಪಿ ಪರವಾಗಿರುವ ವಾತಾವರಣ ಬಳಸಿಕೊಂಡು ರಾಜ್ಯದಲ್ಲಿ 150ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವ ಮೂಲಕ ಅಧಿಕಾರದ ಚುಕ್ಕಾಣಿ ಹಿಡಿಯಲು ಶ್ರಮಿಸಬೇಕು. ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿ ಮತ್ತು ಚಿಂತನೆಗಳನ್ನು ರಾಜ್ಯದಲ್ಲಿ ಕಾರ್ಯರೂಪಕ್ಕೆ ತರಲು ಪ್ರತಿಯೊಬ್ಬ ಕಾರ್ಯಕರ್ತರು ಮುಂದಾಗಬೇಕು ಎಂದು ತಿಳಿಸಿದರು.



ಆನೇಕಲ್ ತಾಲ್ಲೂಕಿನ ಹೆಬ್ಬಗೋಡಿಯಲ್ಲಿ ನಡೆದ ಬಿಜೆಪಿ ಹೆಬ್ಬಗೋಡಿ ಮಹಾಶಕ್ತಿ ಕೇಂದ್ರದ ವಿವಿಧ ಮೋರ್ಚಾದ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮವನ್ನು ಶಾಸಕ ಎಂ. ಕೃಷ್ಣಪ್ಪ ಉದ್ಘಾಟಿಸಿದರು

ಬಿಬಿಎಂಪಿ ಸೇರಿದಂತೆ ಮುಂಬರುವ ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಲು ಕಾರ್ಯಕರ್ತರು ಬೂತ್ ಮಟ್ಟದಿಂದ ಸಂಘಟಿತರಾಗಿ ಶ್ರಮಿಸಬೇಕು. ಈ ಮೂಲಕ ಬಿಜೆಪಿಯ ಶಕ್ತಿಯನ್ನು ಬಲವರ್ಧನೆಗೊಳಿಸಬೇಕು ಎಂದರು.

ವಿಧಾನ ಪರಿಷತ್ ಸದಸ್ಯ ತುಳಸಿ ಮುನಿರಾಜು ಗೌಡ ಮಾತನಾಡಿ, ಪಕ್ಷದ ಪದಾಧಿಕಾರಿಗಳಾಗಿ ನೇಮಕಗೊಂಡಿರುವವರು ಹುದ್ದೆ ಅಥವಾ ಅಧಿಕಾರ ಎಂದು ಭಾವಿಸದೆ ಜವಾಬ್ದಾರಿ ಎಂದು ಭಾವಿಸಬೇಕು. ತಮಗೆ ವಹಿಸಿರುವ ವಿಭಾಗಗಳಲ್ಲಿ ರಚನಾತ್ಮಕ ಕಾರ್ಯಕ್ರಮ ರೂಪಿಸುವ ಮೂಲಕ ಕಾರ್ಯಕರ್ತರಲ್ಲಿ ಉತ್ಸಾಹ, ಚೈತನ್ಯ ಮೂಡಿಸಿ ಪಕ್ಷದ ಸಂಘಟನೆಯನ್ನು ಬಲಪಡಿಸಬೇಕು ಎಂದು ಸಲಹೆ ನೀಡಿದರು.

ಕೈಮಗ್ಗ ಸ್ಟಾರ್ಟಪ್ ಸವಾಲಿನಲ್ಲಿ ಭಾಗಿಯಾಗಲು ಯುವಕರಿಗೆ ಪ್ರಧಾನಿ ಕರೆ

ನವದೆಹಲಿ (ಪಿಟಿಐ): ಕೈಮಗ್ಗ ಸ್ಟಾರ್ಟಪ್ ಮಹಾನ್ ಸವಾಲಿನಲ್ಲಿ ಭಾಗವಹಿಸುವಂತೆ ಯುವಜನತೆಗೆ ಕರೆ ನೀಡಿರುವ ಪ್ರಧಾನಿ ನರೇಂದ್ರ ಮೋದಿ, ಕಲ್ಪನೆ ಮತ್ತು ಆವಿಷ್ಕಾರ ವಿಚಾರದಲ್ಲಿ ನೇಕಾರರಿಗೆ ಲಭ್ಯವಾದ ಅತ್ಯುತ್ತಮ ಅವಕಾಶ ಇದು ಎಂದು ಹೇಳಿದ್ದಾರೆ.

ರಾಷ್ಟ್ರೀಯ ಕೈಮಗ್ಗ ದಿನದ ಹಿನ್ನೆಲೆಯಲ್ಲಿ ಪ್ರಧಾನಿ ಮೋದಿ, ಭಾರತದ ಶ್ರೀಮಂತ ಸಾಂಸ್ಕೃತಿಕ ವೈವಿಧ್ಯತೆ ಮತ್ತು ಕಲಾತ್ಮಕ ಸಂಪ್ರದಾಯ ಆಚರಣೆಗೆ ಶ್ರಮಿಸುತ್ತಿರುವ ಎಲ್ಲರಿಗೂ ಗೌರವ ಸಲ್ಲಿಸುವುದರೊಂದಿಗೆ ಕೈಮಗ್ಗ ಕ್ಷೇತ್ರದತ್ತ ಬರುವಂತೆ ಆಹ್ವಾನಿಸಿದರು.

‘ಮನೆ, ಮನೆಯಲ್ಲಿ ತ್ರಿವರ್ಣ ಧ್ವಜ’

12ರೊಳಗೆ ಎಲ್ಲ ಸಿದ್ಧತೆ ಮಾಡಿಕೊಳ್ಳಲು ಅಧಿಕಾರಿಗಳಿಗೆ ಬಿಬಿಎಂಪಿ ಆಯುಕ್ತ ತುಷಾರ್ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ 27 ವಿಧಾನಸಭಾ ಕ್ಷೇತ್ರಗಳ ಪ್ರಮುಖ ಸ್ಥಳಗಳನ್ನು ಗುರುತಿಸಿ ಗಣ್ಯರು, ಸ್ಥಳೀಯ ಪ್ರಮುಖರ ನೇತೃತ್ವದಲ್ಲಿ ‘ಮನೆ, ಮನೆಯಲ್ಲಿ ತ್ರಿವರ್ಣ ಧ್ವಜ’ ಕಾರ್ಯಕ್ರಮ ಆಯೋಜಿಸಲು ಅಧಿಕಾರಿಗಳಿಗೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದ್ದಾರೆ.

ಎಲ್ಲ ವಲಯ ಆಯುಕ್ತರು ಹಾಗೂ ಅಧಿಕಾರಿಗಳೊಂದಿಗೆ ಭಾನುವಾರ ವರ್ಚ್ಯುಯಲ್ ಸಭೆ ನಡೆಸಿದ ತುಷಾರ್ ಗಿರಿನಾಥ್, ‘ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಆಗಸ್ಟ್ 13ರಿಂದ 15ರವರೆಗೆ ವಿಧಾನಸಭಾ ಕ್ಷೇತ್ರಗಳಲ್ಲಿ ಕಾರ್ಯಕ್ರಮ ಆಯೋಜಿಸಬೇಕು. ಅಭಿಯಾನವನ್ನು ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಆಯಾ ವಲಯಗಳಲ್ಲಿ ಬರುವ ವಿಧಾನಸಭಾ ಕ್ಷೇತ್ರಗಳಲ್ಲಿ ಕಾರ್ಯಕ್ರಮ ನಡೆಯುವ ಸ್ಥಳ, ನಿಗದಿಪಡಿಸಿಕೊಂಡಿರುವ ಸಮಯ ಹಾಗೂ ಗಣ್ಯರ ಪಟ್ಟಿಯನ್ನು ಕೂಡಲೇ ನೀಡಬೇಕು’ ಎಂದು ಸೂಚಿಸಿದರು.

27 ವಿಧಾನಸಭಾ ಕ್ಷೇತ್ರವಾರು ನಡೆಯುವ ಕಾರ್ಯಕ್ರಮಕ್ಕಾಗಿ ಆಗಸ್ಟ್ 12ರೊಳಗೆ ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು. ಜೊತೆಗೆ ಸ್ವಚ್ಛತಾ ಅಭಿಯಾನವನ್ನು ಹಮ್ಮಿಕೊಳ್ಳಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

ಆಡಳಿತ ವಿಭಾಗದ ವಿಶೇಷ ಆಯುಕ್ತ ರಂಗಪ್ಪ ಮಾತನಾಡಿ, ‘ಮನೆ, ಮನೆಯಲ್ಲಿ ತ್ರಿವರ್ಣ ಧ್ವಜ’ ಅಭಿಯಾನದ ಅಂಗವಾಗಿ ಬಿಬಿಎಂಪಿ ವ್ಯಾಪ್ತಿಯಲ್ಲಿ 10 ಲಕ್ಷ ರಾಷ್ಟ್ರ ಧ್ವಜಗಳನ್ನು ವಿತರಿಸಲಾಗಿದೆ. ವಾರ್ಡ್‌ವಾರು ಮಾರಾಟ ಮಳಿಗೆಗಳ ಮೂಲಕ ನಾಗರಿಕರಿಗೆ ಧ್ವಜಗಳನ್ನು ಮಾರಾಟ ಮಾಡಲಾಗುತ್ತಿದೆ. ಇದಲ್ಲದೆ ಪಾಲಿಕೆಯ ಅಧಿಕಾರಿಗಳು ಮನೆ-ಮನೆಗೆ ಹಾಗೂ ಮಳಿಗೆಗಳಿಗೆ ಭೇಟಿ ಧ್ವಜಗಳನ್ನು ಮಾರಾಟ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಅಭಿಯಾನದ ಕುರಿತ ಜಾಗೃತಿಗೆ ಜಾನಪದ ಸಂಜೆ



ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ‘ಹರ್ ಘರ್ ತಿರಂಗಾ’ ಅಭಿಯಾನದ ಬಗ್ಗೆ ನಾಗರಿಕರಲ್ಲಿ ಜಾಗೃತಿ ಮೂಡಿಸಲು ಬಸವನಗುಡಿಯ ಕಹಳೆ ಬಂಡೆ ಉದ್ಯಾನದಲ್ಲಿ ಭಾನುವಾರ ‘ಜಾನಪದ ಸಂಜೆ’ ಆಯೋಜಿಸಲಾಗಿತ್ತು

ಬೆಂಗಳೂರು: ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ‘ಮನೆ, ಮನೆಯಲ್ಲಿ ತ್ರಿವರ್ಣ ಧ್ವಜ’ ಅಭಿಯಾನದ ಬಗ್ಗೆ ನಾಗರಿಕರಲ್ಲಿ ಜಾಗೃತಿ ಮೂಡಿಸಲು ಬಸವನಗುಡಿಯಲ್ಲಿ ಜಾನಪದ ಸಂಜೆ ಆಯೋಜಿಸಲಾಗಿತ್ತು.

ಜಾನಪದ ಸಂಪ್ರದಾಯವನ್ನು ಬೆಳೆಸುವ ಮತ್ತು ಬೆಂಗಳೂರಿನ ನಾಗರಿಕರಿಗೆ ಜಾನಪದ ಸೊಗಡನ್ನು ಕಂಪಿಸುವ ಹಿತದೃಷ್ಟಿಯಿಂದ ಬಿಬಿಎಂಪಿ ಉದ್ಯಾನಗಳಲ್ಲಿ ಜಾನಪದ ಸಂಜೆ ಕಾರ್ಯಕ್ರಮಗಳನ್ನು ಪ್ರತಿ ಭಾನುವಾರ ನಡೆಸುತ್ತಿದೆ. ಇದರ ಅಂಗವಾಗಿ ದಕ್ಷಿಣ ವಲಯ ಕಹಳೆ ಬಂಡೆ ಉದ್ಯಾನದಲ್ಲಿ ಜಾನಪದ ಸಂಜೆ ಕಾರ್ಯಕ್ರಮ ಆಯೋಜಿಸಲಾಗಿತ್ತು ಎಂದು ದಕ್ಷಿಣ ವಲಯ ಆಯುಕ್ತ ಜಯರಾಮ ರಾಯಪುರ ತಿಳಿಸಿದರು.

‘ಮನೆ, ಮನೆಯಲ್ಲಿ ತ್ರಿವರ್ಣ ಧ್ವಜ’ ಅಭಿಯಾನದ ಬಗ್ಗೆ ನಾಗರಿಕರಲ್ಲಿ ಜಾಗೃತಿ ಮೂಡಿಸಿ, ರಾಷ್ಟ್ರ ಧ್ವಜಗಳನ್ನು ವಿತರಿಸಿದರು. ಆಗಸ್ಟ್ 13ರಿಂದ 15ರವರೆಗೆ ಮನೆಗಳ ಮೇಲೆ ಧ್ವಜಗಳನ್ನು ಹಾರಿಸಲು ತಿಳಿಸಿದರು.

ಶಾಸಕ ರವಿಸುಬ್ರಮಣ್ಯ, ದಕ್ಷಿಣ ವಲಯ ಜಂಟಿ ಆಯುಕ್ತ ಜಗದೀಶ್ ನಾಯಕ್, ವಲಯ ಉಪ ಆಯುಕ್ತ ಲಕ್ಷ್ಮೀ ದೇವಿ ಉಪಸ್ಥಿತರಿದ್ದರು.

‘ಧ್ವಜಾರೋಹಣಕ್ಕೆ ಸಿದ್ದರಾಮಯ್ಯ ಬರಲಿ’

ಬೆಂಗಳೂರು: ‘ಚಾಮರಾಜಪೇಟೆ ಆಟದ ಮೈದಾನದಲ್ಲಿ ಧ್ವಜ ಹಾರಿಸಲು ಅಧಿಕಾರಿಗಳು ಅನುಮತಿ ಕೊಡಲಿ, ಬಿಡಲಿ ನಾವಂತೂ ಧ್ವಜಾರೋಹಣ ಮಾಡಿಯೇ ತೀರುತ್ತೇವೆ. ಈ ಬಾರಿ ಇಲ್ಲಿ ನಡೆಯುವ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ನಾಯಕ ಸಿದ್ದರಾಮಯ್ಯನವರೇ ಬಂದು ಧ್ವಜಾರೋಹಣ ಮಾಡಬೇಕು’ ಎಂದು ಚಾಮರಾಜಪೇಟೆ ನಾಗರಿಕರ ಒಕ್ಕೂಟ ವೇದಿಕೆಯ ಮುಖಂಡರು ಹೇಳಿದರು.

ಚಾಮರಾಜಪೇಟೆ ಈದ್ಗಾ ಮೈದಾನದ ಖಾತೆ ಸಂಬಂಧ ಬಿಬಿಎಂಪಿ ನೀಡಿರುವ ಆದೇಶವನ್ನು ಸಂಭ್ರಮಿಸಿ, ಭಾನುವಾರ ಎಲ್ಲೆಡೆ ಪಟಾಕಿ ಸಿಡಿಸಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ‘ಚಾಮರಾಜಪೇಟೆ ಮೈದಾನವನ್ನು ಆಟದ ಮೈದಾನವನ್ನಾಗಿಯೇ ಉಳಿಸಿಕೊಳ್ಳಲು ನಾವೂ ಕಾನೂನು ಹೋರಾಟಕ್ಕೆ ಸಿದ್ಧರಿದ್ದೇವೆ. ನಮ್ಮ ಬಳಿಯೂ ಎಲ್ಲ ದಾಖಲೆಗಳು ಇವೆ. ಮೈದಾನಕ್ಕೆ ಜಯಚಾಮರಾಜೇಂದ್ರ ಒಡೆಯರ್ ಹೆಸರಿಡಬೇಕು’ ಎಂದು ಹೇಳಿದರು.

ಚಾಮರಾಜಪೇಟೆ ನಾಗರಿಕ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ರುಕ್ಮಾಂಗದ ಮಾತನಾಡಿ, ‘ಮೂರು ತಿಂಗಳ ಹೋರಾಟಕ್ಕೆ ಈಗ ಈ ಫಲಿತಾಂಶ ಬಂದಿದೆ. ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಕನ್ನಡ ಪರ ಸಂಘಟನೆಗಳು ಹಾಗೂ ಹಿಂದೂ ಪರ ಸಂಘಟನೆಗಳು ಬೆಂಬಲ ಕೊಟ್ಟಿದ್ದವು. ಬಂದ್‌ಗೆ ಕರೆ ನೀಡಿದಾಗ ಎಲ್ಲರ ಬೆಂಬಲ ಸಿಕ್ಕಿತ್ತು’ ಎಂದರು.

‘ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಂದ ಗೊಂದಲವಾಯಿತು. ಈ ಕ್ಷೇತ್ರದ ಶಾಸಕರು, ಮಾಜಿ ಕಾರ್ಪೊರೇಟರ್‌ಗಳ ಕುಮ್ಮಕ್ಕಿನಿಂದ ಸಮಸ್ಯೆಯಾಗುತ್ತಿತ್ತು’ ಎಂದು ವಿಶ್ವ ಸನಾತನ ಪರಿಷತ್ ಅಧ್ಯಕ್ಷ ಭಾಸ್ಕರನ್ ಹೇಳಿದರು.

ಹಬ್ಬದಂತೆ ಆಚರಿಸಿ: ಡಿಕೆಶಿ ಸೂಚನೆ

ಬೆಂಗಳೂರು: ಸ್ವಾತಂತ್ರ್ಯದ ಅಮೃತ ಮಹೋತ್ಸವನ್ನು ರಾಜ್ಯದಾದ್ಯಂತ ಹಬ್ಬದಂತೆ ಆಚರಿಸಲು ಕಾಂಗ್ರೆಸ್ ಪಕ್ಷ ನಿರ್ಧರಿಸಿದೆ. ಈ ಉತ್ಸವದಲ್ಲಿ ಪಕ್ಷದ ಎಲ್ಲ ಕಾರ್ಯಕರ್ತರು ಸಕ್ರಿಯವಾಗಿ ಭಾಗವಹಿಸಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸೂಚನೆ ನೀಡಿದರು.

ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಕೋಣನಕುಂಟೆಯಲ್ಲಿ ಭಾನುವಾರ ನಡೆದ ‘ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಣೆ’ ಪೂರ್ವತಯಾರಿಗೆ ಸಂಬಂಧಿಸಿದ ಸಭೆಯಲ್ಲಿ ಮಾತನಾಡಿದ ಅವರು, ‘ಪಕ್ಷಾತೀತವಾಗಿ ಹಾಗೂ ಕುಟುಂಬದವರ ಜತೆಗೂಡಿ ಎಲ್ಲರೂ ಈ ಸಂಭ್ರಮದಲ್ಲಿ ಭಾಗಿಯಾಗಬೇಕು’ ಎಂದರು.

ಆಗಸ್ಟ್ 15ರಂದು ಮೂರು ಕಿಲೋ ಮೀಟರ್ ಉದ್ದದ ತ್ರಿವರ್ಣ ಧ್ವಜ ಹಿಡಿದು ಕೆಂಪೇಗೌಡ ಬಸ್ ನಿಲ್ದಾಣ, ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ಬಸವನಗುಡಿಯ ನ್ಯಾಷನಲ್ ಕಾಲೇಜು ಮೈದಾನದವರೆಗೆ ಸ್ವಾತಂತ್ರ್ಯ ನಡಿಗೆ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದಲ್ಲಿ ಪಕ್ಷದ ಕಾರ್ಯಕರ್ತರು ಬೃಹತ್ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಹೇಳಿದರು.

ಕಾಂಗ್ರೆಸ್ ಮುಖಂಡ ಆರ್.ಕೆ.ರಮೇಶ್ ಮಾತನಾಡಿದರು.

ಸಂಸದ ಡಿ.ಕೆ.ಸುರೇಶ್, ಬೆಂಗಳೂರು ದಕ್ಷಿಣ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಜಿ.ಕೃಷ್ಣಪ್ಪ, ಪಕ್ಷದ ಮುಖಂಡರಾದ ಒ.ಮಂಜುನಾಥ್, ಎಸ್.ಗಂಗಾಧರ್, ಶೋಭಾ ಗೌಡ, ಆಂಜನಪ್ಪ, ವರಪ್ರಸಾದ್ ರೆಡ್ಡಿ, ಉಮಾದೇವಿ, ಕೆ.ಈಶ್ವರ್, ಎಂ.ಶ್ರೀನಿವಾಸ್, ವಿವಿಧ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಎಲ್.ಶ್ರೀಧರ್, ಕಿರಣ್, ಶ್ರೀಧರ್, ಕೆ.ಕುಮಾರ್, ಮುಖಂಡರಾದ ಕೋಣನಕುಂಟೆ ಚಂದ್ರು, ಚುಂಚಘಟ್ಟ ಬಾಬು, ಗುಂಡುಮಣಿ ಶ್ರೀನಿವಾಸ್, ಫ್ರಾಂಕ್ಲಿನ್, ಹರ್ಷ ಉಪಸ್ಥಿತರಿದ್ದರು.

ವೀರನಹೊಸಹಳ್ಳಿಯಿಂದ ಅರಮನೆಗಳ ನಗರ ತಲುಪಿದ ಆನೆಗಳು

ದಸರೆಗೆ 'ಗಜಪಯಣ' ಮುನ್ನುಡಿ

ಪ್ರಜಾವಾಣಿ ವಾರ್ತೆ



'ಅಭಿಮನ್ಯು' ನೇತೃತ್ವದ ಗಜಪಡೆಗೆ ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನ ನಾಗರಹೊಳೆ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯ ವೀರನಹೊಸಹಳ್ಳಿಯಲ್ಲಿ ಭಾನುವಾರ ಪೂಜೆ ಸಲ್ಲಿಸಿ ಬೀಳ್ಕೊಡಲಾಯಿತು —ಪ್ರಜಾವಾಣಿ ಚಿತ್ರ/ಅನೂಪ್ ರಾಘು.ಟಿ.

ಮೈಸೂರು: ನಾಗರಹೊಳೆ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯ ಹುಣಸೂರು ತಾಲ್ಲೂಕಿನ ವೀರನಹೊಸಹಳ್ಳಿಯಲ್ಲಿ ಭಾನುವಾರ ದಸರೆಯ ಸಂಭ್ರಮಕ್ಕೆ 'ಗಜ ಪಯಣ'ವು ಮುನ್ನುಡಿ ಬರೆಯಿತು.

ಜಂಬೂಸವಾರಿಯಲ್ಲಿ ಚಿನ್ನದ ಅಂಬಾರಿ ಹೊರುತ್ತಿರುವ ಅಭಿಮನ್ಯು ಸೇರಿ 9 ಆನೆಗಳಿಗೆ ಸಚಿವರಾದ ಎಸ್.ಟಿ.ಸೋಮಶೇಖರ್, ಉಮೇಶ್ ಕತ್ತಿ ತುಂತುರು ಮಳೆಯಲ್ಲೇ ಸಾಂಪ್ರದಾಯಿಕ ಪೂಜೆ ಸಲ್ಲಿಸಿದರು. ಪುಷ್ಪಾರ್ಚನೆ ಮಾಡಿ ಗಜ ಪಯಣಕ್ಕೆ ಚಾಲನೆ ನೀಡಿದರು.

ಮತ್ತಿಗೋಡು ಆನೆ ಶಿಬಿರದ ಅಭಿಮನ್ಯು, ಭೀಮ, ಮಹೇಂದ್ರ, ಗೋಪಾಲಸ್ವಾಮಿ, ಬಳ್ಳೆ ಶಿಬಿರದ ಅರ್ಜುನ, ದುಬಾರೆ ಶಿಬಿರದ ಧನಂಜಯ, ಕಾವೇರಿ, ರಾಮಪುರ ಆನೆ ಶಿಬಿರದ ಚೈತ್ರಾ, ಲಕ್ಷ್ಮಿ ಆನೆಗಳನ್ನು ಬಣ್ಣ ಮತ್ತು ಹೂಗಳಿಂದ ಅಲಂಕರಿಸಲಾಗಿತ್ತು.

ಅರಮನೆ ಪುರೋಹಿತ ಪ್ರಹ್ಲಾದ್ ರಾವ್ ನೇತೃತ್ವದಲ್ಲಿ ಪೂಜಾ ಕಾರ್ಯಕ್ರಮ ನಡೆಯಿತು. ಆನೆಗಳಿಗೆ ಪಂಚಫಲ, ಕಡುಬು, ಚಕ್ಕುಲಿ, ನಿಪ್ಪಟ್ಟು, ಹೋಳಿಗೆ, ಬೆಲ್ಲ, ಕಬ್ಬು, ಕಲ್ಲು ಸಕ್ಕರೆ, ಮೋದಕ ನೈವೇದ್ಯ ನೀಡಿ 'ಶೋಡಷೋಪಚಾರ' ಪೂಜೆ ಮಾಡಲಾಯಿತು. ಗಣಪತಿ ಅರ್ಚನೆ ಜೊತೆ ವನದೇವತೆ, ಚಾಮುಂಡೇಶ್ವರಿಗೆ ಪ್ರಾರ್ಥನೆ ಸಲ್ಲಿಸಲಾಯಿತು.

ಶೂ ಧರಿಸಿ ಸಚಿವ ಕತ್ತಿಯಿಂದ ಪೂಜೆ- ಟೀಕೆ

ಸಚಿವ ಉಮೇಶ್ ಕತ್ತಿ ಶೂ ಧರಿಸಿಯೇ ಆನೆಗಳಿಗೆ ಪೂಜೆ ಸಲ್ಲಿಸಿರುವುದು ಟೀಕೆಗೆ ಕಾರಣವಾಯಿತು. ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗಿಯಾಗುವಾಗ ಶೂ ತೆಗೆಯುವುದು ಸಂಪ್ರದಾಯ. ಸಚಿವ ಎಸ್.ಟಿ.ಸೋಮಶೇಖರ್ ಸೇರಿ ಇತರರು ಪಾದರಕ್ಷೆ ಧರಿಸಿರಲಿಲ್ಲ. ವಿಧಾನ ಪರಿಷತ್ ಸದಸ್ಯ ವಿಶ್ವನಾಥ್ ಪಾದರಕ್ಷೆ ಧರಿಸಿ ಬಂದಿದ್ದರು. ನಂತರ ಎಚ್ಚೆತ್ತುಕೊಂಡು ಪಕ್ಕದಲ್ಲಿ ಬಿಟ್ಟು ಬಂದು ಭಾಗಿಯಾದರು.

ಈ ಬಗ್ಗೆ ನಂತರ ಪ್ರತಿಕ್ರಿಯಿಸಿದ ಉಮೇಶ್ ಕತ್ತಿ ಅವರು, 'ಬಟ್ಟೆಯಿಂದ ಮಾಡಿದ್ದ ಶೂ ಧರಿಸಿದ್ದೆ. ಮಳೆ ಇದ್ದ ಕಾರಣ ಕಾಲು ಜಾರದಿರಲೆಂದು ತೆಗೆಯಲಿಲ್ಲ. ನಾನು ಹೋಗುವ ಮುನ್ನವೇ ಗಜ ಪಡೆಗೆ ಪೂಜೆ ನೆರವೇರಿಸಲಾಗಿತ್ತು. ನನಗೂ 61 ವರ್ಷ ವಯಸ್ಸಾಗಿದ್ದು, ತಿಳಿವಳಿಕೆ ಇದೆ' ಎಂದು ಸಮಜಾಯಿಷಿ ನೀಡಿದರು.

ಪೂಜೆ ನಂತರ ಕೆಲವು ದೂರದವರೆಗೆ ಆನೆಗಳನ್ನು ನಡೆಸಿಕೊಂಡು ಬರಲಾಯಿತು. ಬಳಿಕ ಲಾರಿಗಳಲ್ಲಿ ಮೈಸೂರಿನ ಅರಣ್ಯ ಭವನಕ್ಕೆ ಸಾಗಿಸಲಾಯಿತು.

ಈ ಆನೆಗಳು ಆ.10ರಂದು ಅರಮನೆಗೆ ಆಗಮಿಸಲಿವೆ. ಸೆ.26ರಿಂದ ನವರಾತ್ರಿ ಆರಂಭವಾಗಲಿದೆ. ಅ.5ರ ವಿಜಯದಶಮಿಯಂದು ಜಂಬೂ ಸವಾರಿ ನಡೆಯಲಿದೆ.

ಅಂಗಿಯ ತೋಳಿಗೆ ಕತ್ತರಿ

ಕೆಪಿಟಿಸಿಎಲ್ ನೇಮಕಾತಿ ಪರೀಕ್ಷೆಯಲ್ಲಿ ಕಟ್ಟುನಿಟ್ಟಿನ ಕ್ರಮ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಭಾನುವಾರ ಇಲ್ಲಿ ನಡೆದ ಕೆಪಿಟಿಸಿಎಲ್ ಕಿರಿಯ ಸಹಾಯಕರ ನೇಮಕಾತಿ ಪರೀಕ್ಷೆಯಲ್ಲಿ ಪೂರ್ಣ ತೋಳಿನ ಅಂಗಿ ಹಾಕಿಕೊಂಡು ಬಂದ ಅಭ್ಯರ್ಥಿಗಳಿಗೆ ಪರೀಕ್ಷಾ ಸಿಬ್ಬಂದಿ ಕೇಂದ್ರದ ಒಳಗೆ ಅವಕಾಶ ನೀಡಲಿಲ್ಲ.

ಆದ್ದರಿಂದ ಪೂರ್ಣ ತೋಳಿನ ಅಂಗಿ ಧರಿಸಿದ್ದವರು, ತೋಳಿನ ಭಾಗ ಅದನ್ನು ಕತ್ತರಿಸಿ ಹೊರಗಡೆ ಇಟ್ಟು ಪರೀಕ್ಷೆ ಬರೆದಿದ್ದಾರೆ. ಕೊಪ್ಪಳದ ಭಾಗ್ಯನಗರದ ನವಚೇತನ ಪಬ್ಲಿಕ್ ಶಾಲೆ ಕೇಂದ್ರದಲ್ಲಿ ಈ ಘಟನೆ ನಡೆದಿದೆ.

ಪಿಎಸ್ಐ ನೇಮಕಾತಿ ಅಕ್ರಮದಿಂದಾಗಿ ಇತರೆ ಪರೀಕ್ಷೆಗಳಿಗೆ ಕಟ್ಟುನಿಟ್ಟಿನ ನಿಯಮ ಜಾರಿ ಮಾಡಲಾಗಿದೆ. ಪೂರ್ಣ ತೋಳಿನ ಅಂಗಿ ಧರಿಸದಂತೆ ಪ್ರವೇಶ ಪತ್ರದಲ್ಲಿ ಮೊದಲೇ ಸೂಚಿಸಲಾಗಿತ್ತು. ಆದರೂ, ಕೆಲವರು ಅದೇ ರೀತಿಯ ಅಂಗಿ ಧರಿಸಿ ಬಂದಿದ್ದರು. ಪೂರ್ಣ ತೋಳಿನ ಅಂಗಿ ಬದಲಿಸಲು ಸಿಬ್ಬಂದಿ ಸೂಚಿಸಿದ್ದಾರೆ. ಕೆಲವರು ಹೊಸ ಟೀ ಶರ್ಟ್ ಖರೀದಿಸಿದರೆ, ಇನ್ನೂ ಕೆಲವರು ಅಂಗಿಯ ತೋಳಿನ ಭಾಗವನ್ನು ಕತ್ತರಿಸಿ ಕೇಂದ್ರದ ಹೊರಗಿಟ್ಟು ಪರೀಕ್ಷೆ ಬರೆದರು.



ಕೊಪ್ಪಳದ ಪರೀಕ್ಷಾ ಕೇಂದ್ರದ ಹೊರಗಡೆ ಭಾನುವಾರ ಅಭ್ಯರ್ಥಿಗಳು ಕತ್ತರಿಸಿ ಇಟ್ಟಿದ್ದ ಅಂಗಿಯ ತೋಳುಗಳು

ನವಚೇತನ ಪಬ್ಲಿಕ್ ಶಾಲೆಯ ಪ್ರಾಚಾರ್ಯರಾದ ಸಂಗೀತಾ ಕಲ್ಲೇಶ, 'ಪೂರ್ಣ ತೋಳಿನ ಅಂಗಿ ಧರಿಸಿ ಬರಬಾರದು ಎಂದು ಮೊದಲೇ ಸೂಚಿಸಿದ್ದೆವು. ಸೂಚನಾ ಫಲಕವನ್ನು ಹಾಕಿದ್ದೆವು. ಆದರೂ ಅಭ್ಯರ್ಥಿಗಳು ಎಚ್ಚೆತ್ತುಕೊಂಡಿಲ್ಲ' ಎಂದರು.

ಆರ್‌ಎಸ್‌ಎಸ್ ಮುಖಂಡನ ಆರೋಗ್ಯ ವಿಚಾರಿಸಿದ ಸಚಿವರು

ಮಾಲೂರು (ಕೋಲಾರ ಜಿಲ್ಲೆ): ಹಲ್ಲೆಗೆ ಒಳಗಾಗಿದ್ದ ಆರ್‌ಎಸ್‌ಎಸ್‌ನ ಜಿಲ್ಲಾ ಸಹ ಶಾರೀರಿಕ್ ಪ್ರಮುಖ್ ರವಿಕುಮಾರ್ ಅವರ ಆರೋಗ್ಯ ವಿಚಾರಿಸಲು ಭಾನುವಾರ ಆಸ್ಪತ್ರೆಗೆ ಬಂದಿದ್ದ ಸಚಿವರ ಬಳಿ, ಗಾಯಾಳುವಿನ ತಂದೆ ಹಾಗೂ ಆರ್‌ಎಸ್‌ಎಸ್ ಕಾರ್ಯಕರ್ತರು 'ರಕ್ಷಣೆ ನೀಡಿ' ಎಂದು ಆಗ್ರಹಿಸಿದರು.

'ಸಚಿವರು ಕಾಟಾಚಾರಕ್ಕೆ ಬಂದರು. ರಕ್ಷಣೆಯ ಭರವಸೆ ನೀಡಿಲ್ಲ. ನಮಗೆ ರಕ್ಷಣೆ ಇಲ್ಲದಂತಾಗಿದೆ' ಎಂದು ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಮುನಿರತ್ನ, ನಗರಾಭಿವೃದ್ಧಿ ಸಚಿವ ಬಿ.ಎ.ಬಸವರಾಜ (ಭೈರತಿ), ಸಂಸದ ಎಸ್.ಮುನಿಸ್ವಾಮಿ ಹಾಗೂ ಮಾಜಿ ಶಾಸಕ ಕೆ.ಎಸ್.ಮಂಜುನಾಥ್ ಗೌಡ ಆಸ್ಪತ್ರೆಗೆ ಭೇಟಿ ನೀಡಿದ್ದು, ಗಾಯಾಳುವಿಗೆ ಧೈರ್ಯ ತುಂಬಿ, ಘಟನೆ ವಿವರ ಪಡೆದರು.

'ಬಿಜೆಪಿ ಭ್ರಷ್ಟಾಚಾರ ಕೋವಿಡ್‌ಗಿಂತ ಅಪಾಯಕಾರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿ ಸರ್ಕಾರದಲ್ಲಿನ ಶೇಕಡ 40 ರಷ್ಟು ಕಮಿಷನ್ ಭ್ರಷ್ಟಾಚಾರದ ಸೋಂಕು ಕೋವಿಡ್‌ಗಿಂತಲೂ ಅಪಾಯಕಾರಿ' ಎಂದು ಕಾಂಗ್ರೆಸ್ ತೀವ್ರ ವಾಗ್ದಾಳಿ ನಡೆಸಿದೆ.

ಜಾತಿ, ಸಮುದಾಯ ಕೇಂದ್ರಿತ ನಿಗಮಗಳಲ್ಲಿನ ಭ್ರಷ್ಟಾಚಾರದ ಕುರಿತು 'ಪ್ರಜಾವಾಣಿ'ಯ ಭಾನುವಾರದ ಸಂಚಿಕೆಯಲ್ಲಿ ಪ್ರಕಟವಾದ 'ಒಳನೋಟ'ದ ವಿಶೇಷ ವರದಿಗಳನ್ನು ಕೆಪಿಸಿಸಿಯ ಅಧಿಕೃತ ಟ್ವಿಟರ್ ಖಾತೆಯಲ್ಲಿ ಹಂಚಿಕೊಂಡಿದ್ದು, 'ನಿಗಮ, ಮಂಡಳಿಗಳಲ್ಲಿ ಬಿಜೆಪಿ ಭ್ರಷ್ಟೋತ್ಸವ ವಿಜೃಂಭಣೆಯಿಂದ ನಡೆಯುತ್ತಿದೆ. ಬಡವರ ಹಿಂದುಳಿದವರ ಏಳಿಗೆಯ ಬದಲು ಭ್ರಷ್ಟರ ಏಳಿಗೆಯಾಗುತ್ತಿದೆ. ಬಡವರನ್ನು ತಲುಪಬೇಕಾದ ನೂರಾರು ಕೋಟಿ ಅನುದಾನ ಬಿಜೆಪಿ ಭ್ರಷ್ಟರ ತಿಜೋರಿ ಸೇರುತ್ತಿದೆ' ಎಂದು ಆರೋಪಿಸಿದೆ.

ಸಮಾಜ ಕಲ್ಯಾಣ ಇಲಾಖೆ ಸ್ವಯಂ ಕಲ್ಯಾಣ ಇಲಾಖೆ ಆಗಿರುವಾಗ ಗಂಗಾ ಕಲ್ಯಾಣ ಯೋಜನೆಯಲ್ಲಿ ಭ್ರಷ್ಟರ ಕಲ್ಯಾಣ ಆಗುತ್ತಿರುವುದರಲ್ಲಿ ಆಶ್ಚರ್ಯವಿಲ್ಲ.

'ಹುದ್ದೆ ಮಾರಾಟ ಯೋಜನೆ ಯಶಸ್ವಿ'

'ಪ್ರಜಾವಾಣಿ'ಯ ಭಾನುವಾರದ ಸಂಚಿಕೆಯಲ್ಲಿ ಪ್ರಕಟವಾದ 'ಬ್ಲೂಟೂತ್' ಬಳಸಿ ಅಕ್ರಮ! ವಿಶೇಷ ವರದಿಯನ್ನೂ ಕೆಪಿಸಿಸಿ ಟ್ವಿಟರ್ ಖಾತೆಯಲ್ಲಿ ಹಂಚಿಕೊಂಡು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದೆ.

'ಬಿಜೆಪಿ ಸರ್ಕಾರದಲ್ಲಿ ಒಂದೇ ಒಂದು ನೇಮಕಾತಿಯೂ ಪ್ರಾಮಾಣಿಕವಾಗಿ ನಡೆದಿಲ್ಲ. ಪಿಎಸ್ಐ ನೇಮಕಾತಿ ಪರೀಕ್ಷೆ ಅಕ್ರಮದ ಬಳಿಕ ಎಫ್‌ಡಿಎ ಪರೀಕ್ಷಾ ಅಕ್ರಮಗಳು ಬಿಚ್ಚಿಕೊಳ್ಳುತ್ತಿವೆ. 'ಸರ್ಕಾರಿ ಹುದ್ದೆ ಮಾರಾಟ ಯೋಜನೆ' ಮಾತ್ರ ಈ ಸರ್ಕಾರದಲ್ಲಿ ಯಶಸ್ವಿಯಾಗಿರುವ ಯೋಜನೆ. ಈ ಸಾಧನೆಯನ್ನೂ ಭ್ರಷ್ಟೋತ್ಸವದಲ್ಲಿ ಹೇಳಿಕೊಳ್ಳುತ್ತೀರಾ' ಎಂದು ಪ್ರಶ್ನಿಸಿದೆ.

ಇಲಾಖಾ ತನಿಖೆಯಲ್ಲಿ ಮೇಲ್ನೋಟಕ್ಕೆ ಹಗರಣ ಸಾಬೀತಾಗಿದ್ದರೂ ಸರ್ಕಾರ ಉನ್ನತ ತನಿಖೆಗೆ ಹಿಂದೇಟು ಹಾಕುತ್ತಿದೆ. ಭ್ರಷ್ಟರ ರಕ್ಷಣೆಗಾಗಿ ಪರಿಶಿಷ್ಟರಿಗೆ ಅನ್ಯಾಯ ಮಾಡಲಾಗುತ್ತಿದೆ ಎಂದು ದೂರಿದೆ.

ಪ್ರವೀಣ್ ನೆಟ್ಟಾರು ಹತ್ಯೆ: ಮತ್ತಿಬ್ಬರ ಸೆರೆ

ಮಂಗಳೂರು: ಬಿಜೆಪಿಯ ಯುವ ಮೋರ್ಚಾದ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣ ಸಂಬಂಧ ಪೊಲೀಸರು ಮತ್ತಿಬ್ಬರನ್ನು ಭಾನುವಾರ ಬಂಧಿಸಿದ್ದಾರೆ.

ಸುಳ್ಯ ನಾವೂರು ನಿವಾಸಿ ಅಬೀದ್ (22), ಬೆಳ್ಳಾರೆ ಸಮೀಪದ ಗೌರಿಹೊಳೆ ನಿವಾಸಿ ನೌಫಾಲ್ (22) ಬಂಧಿತ ಆರೋಪಿಗಳು. 'ಆರೋಪಿಗಳು ಕೊಲೆ ಸಂಚು ರೂಪಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿದ್ದರು' ಎಂದು ಜಿಲ್ಲಾ ಪೊಲೀಸ್ ವರಿಷ್ಠ ಹೃಷಿಕೇಶ್ ಸೋನಾವಣೆ ತಿಳಿಸಿದರು.

'ನನ್ನ ಧ್ವನಿ ಅಡಗಿಸಲಾಗದು'

ಮೈಸೂರು: 'ನನ್ನ ಧ್ವನಿಯನ್ನು ಅಡಗಿಸಲು ಸಾಧ್ಯವಿಲ್ಲ. ಧ್ವನಿ ಎತ್ತದಿದ್ದರೆ ನಾನು ಸತ್ತು ಹೋಗುತ್ತೇನೆ'. – ಹೀಗೆಂದವರು ಚಲನಚಿತ್ರ ನಟ ಪ್ರಕಾಶ್ ರಾಜ್.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘ ಭಾನುವಾರ ಏರ್ಪಡಿಸಿದ್ದ ಸಂವಾದದಲ್ಲಿ ಅವರು, 'ಸಮಾಜದಲ್ಲಿ ಪ್ರಶ್ನಿಸುವುದು ಎಲ್ಲರ ಹೊಣೆ. ನಮ್ಮ ಹಕ್ಕು ಕೂಡ. ಅದನ್ನು ತಪ್ಪು ಎನ್ನುವುದು ಸರಿಯಲ್ಲ. ಕೇಳಿದ್ದು ತಪ್ಪಾಗಿದ್ದಲ್ಲಿ ಸರಿಪಡಿಸಿ' ಎಂದು ಸರ್ಕಾರಕ್ಕೆ ಚಾಟಿ ಬೀಸಿದರು.

'ಸಾಮಾಜಿಕ ಜಾಲತಾಣದಲ್ಲಿ 'ಜಸ್ಟ್ ಆಸ್ಕಿಂಗ್' ಮೂಲಕ ಪ್ರಶ್ನಿಸುತ್ತಲೇ ಇರುತ್ತೇನೆ. ಹೋರಾಟವೆಂದರೆ ಬೀದಿಗಿಳಿಯುವುದಷ್ಟೇ ಅಲ್ಲ. ಹಿಂದೆ ನಿಂತು ಮಾಡಬೇಕಾದ ಕೆಲಸಗಳು ಸಾಕಷ್ಟಿರುತ್ತವೆ. ಅದನ್ನು ಮಾಡುತ್ತಲೇ ಇರುತ್ತೇನೆ ಎಂದು ಪ್ರತಿಕ್ರಿಯಿಸಿದರು.

'ಕೆಲ ವರ್ಷಗಳಿಂದೀಚೆಗೆ ಜನರೇ ಪ್ರಶ್ನಿಸುತ್ತಿದ್ದಾರೆ. ಜನರು ಇನ್ನೂ ಹೆಚ್ಚು ಪ್ರಶ್ನಿಸಬಹುದು ಎನ್ನುವುದು ಆಳುವ ವರಿಗೆ ಗೊತ್ತಾದಾಕ್ಷಣ ಸಾಂಸ್ಕೃತಿಕ ಸಂಸ್ಥೆಗಳಿಗೆ ಅನುದಾನ ಕಡಿತಗೊಳಿಸುವ ಕೆಲಸಗಳಾಗುತ್ತಿವೆ' ಎನ್ನುವ ಮೂಲಕ ರಂಗಾಯಣಕ್ಕೆ ಅನುದಾನ ಕಡಿತಗೊಳಿಸಿದ್ದಕ್ಕೆ ಅಸಮಾಧಾನ ಹೊರಹಾಕಿದರು.

ಹಿಂದಿ ರಾಷ್ಟ್ರಭಾಷೆ ಅಲ್ಲ: 'ಹಿಂದಿ ರಾಷ್ಟ್ರ ಭಾಷೆ ಅಲ್ಲ. ಅದು ರಾಷ್ಟ್ರ ಭಾಷೆ ಎನ್ನುವುದಕ್ಕೆ ಆಧಾರ ಇದೆಯೇ?' ಎಂದು ಪ್ರಶ್ನಿಸಿದರು.

'ಕೈಬಿಟ್ಟಿಲ್ಲ, ಮನನೊಂದು ರಾಜೀನಾಮೆ ನೀಡಿರುವೆ'

ಬೆಂಗಳೂರು: 'ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಕಾರ್ಯವೈಖರಿ ಬಗ್ಗೆ ಮನನೊಂದು ಸದಸ್ಯ ಸ್ಥಾನಕ್ಕೆ ವರ್ಷದ ಹಿಂದೆಯೇ ರಾಜೀನಾಮೆ ನೀಡಿದ್ದೇನೆ. ಸದಸ್ಯ ಸ್ಥಾನದಿಂದ ಕೈಬಿಡಲಾಗಿದೆ ಎಂದು ನಮೂದಿಸಿರುವುದರಲ್ಲಿ ಅರ್ಥವಿಲ್ಲ' ಎಂದು ಸಾಹಿತಿ ಕಬ್ಬಿನಾಲೆ ವಸಂತ ಭಾರದ್ವಾಜ್ ತಿಳಿಸಿದ್ದಾರೆ.

'ಪ್ರಾಧಿಕಾರದ ಅಧ್ಯಕ್ಷರು ವಾಸ್ತವ ಸಂಗತಿಯನ್ನು ಮರೆಮಾಚುತ್ತಿದ್ದಾರೆ ಎಂಬುದು ಸ್ಪಷ್ಟವಾಗಿದೆ' ಎಂದಿದ್ದಾರೆ. ಸರ್ಕಾರಿ ಆದೇಶದಲ್ಲಿ ಕೈಬಿಡಲಾದ ಸದಸ್ಯರ ಹೆಸರಿನಲ್ಲಿ ಕಬ್ಬಿನಾಲೆ ವಸಂತ ಭಾರದ್ವಾಜ್ ಅವರ ಹೆಸರೂ ಇತ್ತು.

ನಿವೃತ್ತ ಐಎಎಸ್ ಅಧಿಕಾರಿಗಳ ಬದಲು ವಿದ್ವಾಂಸರ ನೇಮಿಸಲು ಒತ್ತಾಯ

ಜಾನಪದ ಪರಿಷತ್ ಚುಕ್ಕಾಣಿ ಯಾರಿಗೆ?

● ಆರ್. ಜಿತೇಂದ್ರ

ರಾಮನಗರ: ಕರ್ನಾಟಕ ಜಾನಪದ ಪರಿಷತ್ತಿಗೆ ನೂತನ ಸಾರಥಿಯ ಆಯ್ಕೆ ಪ್ರಕ್ರಿಯೆ ಚುರುಕಾಗಿದ್ದು, ಈ ಸ್ಥಾನಕ್ಕೆ ಜಾನಪದ ವಿದ್ವಾಂಸರನ್ನೇ ಪರಿಗಣಿಸಲಿ ಎಂಬ ಕೂಗು ಜೋರಾಗಿದೆ.

ನಿವೃತ್ತ ಐಎಎಸ್ ಅಧಿಕಾರಿ ಎಚ್.ಎಲ್.ನಾಗೇಗೌಡರ ಕನಸಿನ ಕೂಸಾದ ಜಾನಪದ ಲೋಕ 1994ರಲ್ಲಿ ಸ್ಥಾಪನೆಗೊಂಡಿದ್ದು, ಜನಪದ ಕಲೆ–ಕಲಾವಿದರಿಗೆ ಪೋಷಿಸುತ್ತಿದೆ. ಇದನ್ನು ಕರ್ನಾಟಕ ಜಾನಪದ ಪರಿಷತ್ತು ಹೆಸರಿನ ಟ್ರಸ್ಟ್ ನೋಡಿಕೊಳ್ಳುತ್ತಿದೆ.

ಎಚ್.ಎಲ್.ನಾಗೇಗೌಡರು, ಜಿ.ನಾರಾಯಣ ಅವರ ಬಳಿಕ ನಿವೃತ್ತ ಐಎಎಸ್ ಅಧಿಕಾರಿ ಟಿ.ತಿಮ್ಮೇಗೌಡ ಪರಿಷತ್ತಿನ ಅಧ್ಯಕ್ಷರಾಗಿ ದಶಕದ ಕಾಲ ಕಾರ್ಯನಿರ್ವಹಿಸಿದ್ದಾರೆ. ತಿಮ್ಮೇಗೌಡರು ರಾಜೀನಾಮೆ ಸಲ್ಲಿಸಿ ತಿಂಗಳು ಕಳೆದರೂ ಇನ್ನೂ ಹೊಸಬರ ನೇಮಕ ಆಗಿಲ್ಲ.

ಜೂನ್ 30ರಂದು ನಡೆದಿದ್ದ ಪರಿಷತ್ತಿನ ಆಡಳಿತ ಮಂಡಳಿ ಸಭೆಯಲ್ಲಿ ತಿಮ್ಮೇಗೌಡರು ರಾಜೀನಾಮೆ ಪ್ರಕಟಿಸಿದ್ದು, 'ಆ ಜಾಗದಲ್ಲಿ ಮತ್ತೊಬ್ಬ ನಿವೃತ್ತ ಐಎಎಸ್ ಅಧಿಕಾರಿಯನ್ನೇ ತರಬೇಕು. ಆಗ ಸರ್ಕಾರದಿಂದ ಕೆಲಸಗಳು ಆಗುತ್ತವೆ' ಎಂದು ಪ್ರತಿಪಾದಿಸಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿವೃತ್ತ ನಿರ್ದೇಶಕ ವಿಠಲಮೂರ್ತಿ ಮೊದಲಾದವರ ಹೆಸರು ಪ್ರಸ್ತಾಪಿಸಿದ್ದರು.

ಇದಕ್ಕೆ ಟ್ರಸ್ಟಿನ ಹಿರಿಯ ಸದಸ್ಯರಾದ ಹಿ.ಶಿ.ರಾಮಚಂದ್ರೇಗೌಡ ಮತ್ತಿತರರು ವಿರೋಧ ವ್ಯಕ್ತಪಡಿಸಿದ್ದು, 'ಅಧಿಕಾರಿಗಳಿಗೆ ಜನಪದದ ಗಂಧ–ಗಾಳಿ ಕಡಿಮೆ. ಹೀಗಾಗಿ ಜನಪದ ಹಿನ್ನೆಲೆ ಉಳ್ಳವರನ್ನೇ ಆರಿಸಬೇಕು' ಎಂದು ಆಗ್ರಹಿಸಿದರು. ಈ ವಿಚಾರದಲ್ಲಿ ಒಮ್ಮತ ಮೂಡದ ಕಾರಣಕ್ಕೆ ರಾಮಚಂದ್ರೇಗೌಡ, ಜಯಪ್ರಕಾಶ ಗೌಡ ತಮ್ಮ ಸದಸ್ಯ ಸ್ಥಾನಕ್ಕೆ ಈಗಾಗಲೇ ರಾಜೀನಾಮೆ ನೀಡಿದ್ದಾರೆ.

ಇದೇ 17ರಂದು ಪರಿಷತ್ತಿನ ಆಡಳಿತ ಮಂಡಳಿ ಸಭೆ ನಿಗದಿಯಾಗಿದೆ. ಅಲ್ಲಿ ತೀರ್ಮಾನ ಕೈಗೊಳ್ಳುವ ಸಾಧ್ಯತೆ ಇದ್ದು, ಹಾಲಿ ಮ್ಯಾನೇಜಿಂಗ್ ಟ್ರಸ್ಟಿ ಆದಿತ್ಯ ನಂಜರಾಜ್ ಅವರನ್ನೇ ಅಧ್ಯಕ್ಷ ಹುದ್ದೆಗೆ ಏರಿಸಲು ಮತ್ತೊಂದು ಗುಂಪು ಪ್ರಯತ್ನ ನಡೆಸಿದೆ ಎನ್ನಲಾಗಿದೆ.

ತ್ವರಿತವಾಗಿ ಸಮಸ್ಯೆ ಬಗೆಹರಿಸಿ ಜಾನಪದ ಲೋಕಕ್ಕೆ ಕಲಾಸಕ್ತಿಯುಳ್ಳ, ಸಮರ್ಥ ಸಾರಥಿಯನ್ನು ನೇಮಿಸಬೇಕು ಎನ್ನುವುದು ಜನಪದ ಆಸಕ್ತರ ಆಗ್ರಹವಾಗಿದೆ.

ಪತ್ರ ಸಮರ: 'ಮಹಾಪೋಷಕ'ರಿಗೆ ಮೊರೆ

'ಜಾನಪದ ಲೋಕ ಈಚಿನ ದಿನಗಳಲ್ಲಿ ಅನ್ಯ ಆಸಕ್ತಿಗಳಿಗೆ ಹೆಚ್ಚು ಆದ್ಯತೆ ನೀಡತೊಡಗಿದೆ. ಇದನ್ನು ಇನ್ನಷ್ಟು ಸಕ್ರಿಯಗೊಳಿಸಿ, ಜಾನಪದದ ಉಳಿವಿಗೆ ಶ್ರಮಿಸಲು ಜಾನಪದ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಹಿರಿಯರನ್ನೇ ಅಧ್ಯಕ್ಷರನ್ನಾಗಿಸಬೇಕು. ಅಧಿಕಾರಿಗಳ ಕೈಗೆ ಚುಕ್ಕಾಣಿ ಕೊಡಬಾರದು' ಎಂದು ಆಗ್ರಹಿಸಿ ಜಾನಪದ ಆಸಕ್ತರ ಗುಂಪೊಂದು ಪರಿಷತ್ತಿನ ಮಹಾಪೋಷಕರಾದ ನಿರ್ಮಲಾನಂದನಾಥ ಸ್ವಾಮೀಜಿ ಅವರಿಗೆ ಅಹವಾಲು ಸಲ್ಲಿಸಿದೆ. ಜಾನಪದ ಲೋಕದಲ್ಲಿ ನಡೆದಿದೆ ಎನ್ನಲಾದ ಅಕ್ರಮ ಕುರಿತು ದೂರಿದೆ ಎನ್ನಲಾಗಿದೆ.

ಅಧಿಕಾರಿಗಳ ಬದಲಿಗೆ ಜಾನಪದದ ಹಿನ್ನೆಲೆ ಉಳ್ಳವರನ್ನು ನೇಮಿಸಿದರೆ ಪರಿಷತ್ ಅನ್ನು ಉತ್ತಮವಾಗಿ ಮುನ್ನಡೆಸಬಹುದು
ಪ್ರೊ.ಹಿ.ಶಿ.ರಾಮಚಂದ್ರೇಗೌಡ, ಜಾನಪದ ವಿದ್ವಾಂಸ

ಟ್ರಸ್ಟಿನ ಸದಸ್ಯರ ಅಭಿಪ್ರಾಯದಂತೆ ವಿಠಲಮೂರ್ತಿ ಅವರನ್ನು ಕೇಳಿಕೊಂಡಿದ್ದು, ಅವರು ಒಪ್ಪಿಲ್ಲ. ನಿವೃತ್ತ ಐಎಎಸ್ ಅಧಿಕಾರಿಯನ್ನೇ ನೇಮಿಸಿ ಎಂದು ನಾನು ಒತ್ತಾಯಿಸಿಲ್ಲ
ಟಿ.ತಿಮ್ಮೇಗೌಡ, ನಿರ್ಗಮಿತ ಅಧ್ಯಕ್ಷ, ಕರ್ನಾಟಕ ಜಾನಪದ ಪರಿಷತ್ತು

ಇದೇ 17ರಂದು ನಡೆಯುವ ಸಭೆಯಲ್ಲಿ ಹೊಸ ಅಧ್ಯಕ್ಷರ ಆಯ್ಕೆ ತೀರ್ಮಾನ ಆಗಲಿದೆ. ಇಂತಹವರನ್ನೇ ನೇಮಕ ಮಾಡಬೇಕು ಎಂದು ನಿರ್ಧರಿಸಿಲ್ಲ
ಆದಿತ್ಯ ನಂಜರಾಜ್, ಮ್ಯಾನೇಜಿಂಗ್ ಟ್ರಸ್ಟಿ, ಕರ್ನಾಟಕ ಜಾನಪದ ಪರಿಷತ್ತು

ಆರಗ ಸೇರಿ ನಾಲ್ವರಿಗೆ ಹಂಚಿಕೆ • ಸುಪ್ರೀಂಕೋರ್ಟ್ ಆದೇಶ ಉಲ್ಲಂಘಿಸಿದ ಬಿಡಿಎ

ದುಬಾರಿ ಬೆಲೆಯ ಬದಲಿ ನಿವೇಶನ!

• ನವೀನ್ ಮಿನೇಜಸ್

ಮುಖ್ಯಾಂಶಗಳು

- 10 ಕೋಟಿಗೂ ಹೆಚ್ಚು ಮೌಲ್ಯದ ನಿವೇಶನಗಳ ಹಂಚಿಕೆ
- ಕ್ರಯಪತ್ರಗಳ ನೋಂದಣಿಯೂ ಪೂರ್ಣ
- 35 ವರ್ಷಗಳ ಹಿಂದೆ ಬಿಡಿಎ ಅಭಿವೃದ್ಧಿಪಡಿಸಿದ್ದ ಬಡಾವಣೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ಅಭಿವೃದ್ಧಿ ಹೊಂದಿದ ಬಡಾವಣೆಗಳು, ಅತಿಕ್ರಮಣದಾರ-ರಿಂದ ವಶಕ್ಕೆ ಪಡೆದ ನಿವೇಶನಗಳನ್ನು ಹರಾಜಿನ ಮೂಲಕವೇ ಮಾರಾಟ ಮಾಡಬೇಕು ಎಂಬ ಸುಪ್ರೀಂ ಕೋರ್ಟ್ ಆದೇಶವನ್ನು ಉಲ್ಲಂಘಿಸಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ), ಹಾಲಿ ಸಚಿವರು, ಮಾಜಿ ಸಂಸದರು ಸೇರಿದಂತೆ ನಾಲ್ವರಿಗೆ ರಹಸ್ಯವಾಗಿ ದುಬಾರಿ ಮೌಲ್ಯದ ಪರ್ಯಾಯ ನಿವೇಶನಗಳ-ನ್ನು ಹಂಚಿಕೆ ಮಾಡಿದೆ.

ದುಬಾರಿ ಮೌಲ್ಯದ ನಿವೇಶನಗಳನ್ನು 'ಪರ್ಯಾಯ ನಿವೇಶನ'ದ ಹೆಸರಿನಲ್ಲಿ ಹಂಚಿಕೆ ಮಾಡುವುದನ್ನು ನಿರ್ಬಂಧಿಸಿ ಸುಪ್ರೀಂ ಕೋರ್ಟ್ ಆದೇಶ ಹೊರಡಿಸಿದ ಎರಡು ತಿಂಗಳ ಬಳಿಕ ಬಿಡಿಎ ಗುಟ್ಟಾಗಿ ಈ ತೀರ್ಮಾನ ಕೈಗೊಂಡಿದೆ. ತಲಾ ₹ 10 ಕೋಟಿಗೂ ಹೆಚ್ಚು ಮೌಲ್ಯದ 50X80 ಚದರ ಅಡಿ ವಿಸ್ತೀರ್ಣದ ನಿವೇಶನಗಳನ್ನು ಹಂಚಿಕೆ ಮಾಡಿದ್ದು, ಕ್ರಯಪತ್ರಗಳ ನೋಂದಣಿಯೂ ಮುಗಿದಿದೆ.

ಹೆಬ್ಬಾಳ ಸಮೀಪದಲ್ಲಿ 35 ವರ್ಷಗಳ ಹಿಂದೆ ಬಿಡಿಎ ಅಭಿವೃದ್ಧಿಪ-ಡಿಸಿದ್ದ ಆರ್‌ಎಂವಿ ಎರಡನೇ ಹಂತದ ಬಡಾವಣೆಯಲ್ಲಿ, ಒತ್ತುವರಿಯಾಗಿದ್ದ ಜಮೀನುಗಳನ್ನು 2021ರ ಸೆಪ್ಟೆಂಬ-ರ್‌ನಲ್ಲಿ ವಶಕ್ಕೆ ಪಡೆಯಲಾಗಿತ್ತು. ಅಲ್ಲಿ ನಿರ್ಮಿಸಿದ್ದ ಈ ನಿವೇಶನಗಳ-ನ್ನು ಹಂಚಿಕೆ ಮಾಡಲಾಗಿದೆ. 'ಜಿ' ಕೋಟಾದಡಿ ಹಂಚಿಕೆಯಾಗಿದ್ದ ನಿವೇಶನಗಳಿಗೆ ಪರ್ಯಾಯವಾಗಿ ಈ ನಿವೇಶನಗಳನ್ನು ಹಂಚಿಕೆ ಮಾಡಬಹುದು' ಎಂದು 2021ರ ಡಿಸೆಂಬರ್ 28ರಂದು ಬಿಡಿಎ ಹೊರಡಿಸಿರುವ ಆದೇಶದಲ್ಲಿ ತಿಳಿಸಲಾಗಿದೆ.

ಸಹಾಯಕ ಎಂಜಿನಿಯರ್ ಅವರಿಂದ ಬಿಡಿಎ ಆಯುಕ್ತರವರೆಗೆ ಎಂಟು ಅಧಿಕಾರಿಗಳು ವಾರದೊಳಗೆ ಕಡತಕ್ಕೆ ಅನುಮೋದನೆ ನೀಡಿದ್ದಾರೆ. ಹಲವು ವರ್ಷಗಳ ಹಿಂದೆಯೇ ನಿವೇಶನ ಪಡೆದಿದ್ದ ನಾಲ್ವರಿಗೆ ಈಗ ಏಕೆ ಪರ್ಯಾಯ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ ಎಂಬುದರ ಮಾಹಿತಿ ಇಲ್ಲ.

ಆದೇಶದ ಉಲ್ಲಂಘನೆ: ಬಿಡಿಎಗೆ ಸಂಬಂಧಿಸಿದ ಪ್ರಕರಣವೊಂದರಲ್ಲಿ 2021ರ ಅಕ್ಟೋಬರ್‌ನಲ್ಲಿ ತೀರ್ಪು ನೀಡಿದ್ದ ಸುಪ್ರೀಂ ಕೋರ್ಟ್, 'ಬಿಡಿಎ ಅಭಿವೃದ್ಧಿಪಡಿಸಿದ ಬಡಾವಣೆಗಳಲ್ಲಿ ಒತ್ತುವರಿದಾರರಿಂದ ವಶಕ್ಕೆ ಪಡೆದ ಜಮೀನಿನಲ್ಲಿ ಭೂ ಬಳಕೆಯ ಅನುಮೋದನೆಯ ಅನುಸಾರ ನಿವೇಶನಗಳನ್ನು ನಿರ್ಮಿಸಲು ಯಾವುದೇ ಅಭ್ಯಂತರವಿಲ್ಲ. ಒತ್ತುವರಿದಾರರಿಂದ ವಶಕ್ಕೆ ಪಡೆದ ಜಮೀನಿನಲ್ಲಿ ನಿರ್ಮಿಸಿದ ನಿವೇಶನಗಳು, ಅಭಿವೃದ್ಧಿ ಹೊಂದಿದ ಬಡಾವಣೆಗಳಲ್ಲಿರುವ ಮಧ್ಯಂತರ ಮತ್ತು ಮೂಲೆ ನಿವೇಶನಗಳನ್ನು ಬಹಿರಂಗ ಹರಾಜಿನ ಮೂಲಕವೇ ಮಾರಾಟ ಮಾಡಬೇಕು' ಎಂದು ನಿರ್ಬಂಧ ವಿಧಿಸಿತ್ತು.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಬಿಡಿಎ ಆಯುಕ್ತ ಎಂ.ಬಿ. ರಾಜೇಶ್ ಗೌಡ, 'ಬಿಡಿಎ ನಿವೇಶನ ಹಂಚಿಕೆ ನಿಯಮಗಳ ಸೆಕ್ಷನ್ 11ಎ ಪ್ರಕಾರ ಈ ನಿವೇಶನಗಳ ಹಂಚಿಕೆ ಮಾಡಲಾಗಿದೆ. ಪರ್ಯಾಯ ನಿವೇಶನ ಪಡೆಯದ ಜಮೀನ ಮಾಲೀಕರು ಅಥವಾ ಭೂಸ್ವಾಧೀನ ಪ್ರಕ್ರಿಯೆಯ-ನ್ನು ಪ್ರಶ್ನಿಸದೇ ಇರುವ ಜಮೀನು ಮಾಲೀಕರು ಅಥವಾ ನಾಗರಿಕ ಬಳಕೆಗೆ ಮೀಸಲಾದ (ಬಿಯಿಂದ ಜಿ ಪ್ರವರ್ಗ) ನಿವೇಶನಗಳಿಗೆ ಈ ನಿಯಮ ಅನ್ವಯ-ವಾಗುತ್ತದೆ' ಎಂದರು.

'ಪರ್ಯಾಯ ನಿವೇಶನ ಹಂಚಿಕೆ ಮಾಡಿರುವ ನಾಲ್ವರಲ್ಲಿ ಮೂವರಿಗೆ ಈ ಮೊದಲು ಆರ್‌ಎಂವಿ ಬಡಾವಣೆಯಲ್ಲೇ ನಿವೇಶನ ನೀಡಲಾಗಿತ್ತು. ಗೃಹ ಸಚಿವ ಆರಗ ಜ್ಞಾನೇಂದ್ರ ಅವರಿಗೆ ಹಿಂದೆ ಎಚ್‌ಎಸ್‌ಆರ್ ಬಡಾವಣೆಯಲ್ಲಿ ನಿವೇಶನ ಹಂಚಿಕೆ ಮಾಡಲಾಗಿತ್ತು. ಆದರೆ, ಅಲ್ಲಿ ಸಮಸ್ಯೆ ಆಗಿತ್ತು. ಈ ಕಾರಣದಿಂದ ಹೆಬ್ಬಾಳದಲ್ಲಿ ಈಗ ನಿವೇಶನ ಹಂಚಿಕೆ ಮಾಡಲಾಗಿದೆ. ಎಚ್‌ಎಸ್‌ಆರ್ ಬಡಾವಣೆಯಲ್ಲಿ ಪ್ರತಿ ಚದರ ಅಡಿಗೆ ₹ 25,000 ದರವಿದ್ದರೆ, ಆರ್‌ಎಂವಿ ಬಡಾವಣೆಯಲ್ಲಿ ₹ 12,000 ಇದೆ. ಹೀಗಾಗಿ ಬಿಡಿಎಗೆ ಯಾವುದೇ ರೀತಿಯಲ್ಲೂ ನಷ್ಟವಾಗಿಲ್ಲ' ಎಂದು ಹೇಳಿದರು.

'ಮಧ್ಯಂತರ ಅರ್ಜಿ ಸಲ್ಲಿಕೆ': 'ಬಿಡಿಎ ನಿವೇಶನ ಹಂಚಿಕೆ ನಿಯಮಗಳು–1984 ಒತ್ತುವರಿದಾರರಿಂದ ವಶಕ್ಕೆ ಪಡೆದ ಜಮೀನಿನಲ್ಲಿ ನಿರ್ಮಿಸಿದ ನಿವೇಶನಗಳು ಹಾಗೂ ಅಭಿವೃದ್ಧಿಪಡಿಸಿದ ಬಡಾವಣೆಗಳಲ್ಲಿನ ಮಧ್ಯಂತರ ಮತ್ತು ಮೂಲೆ ನಿವೇಶನಗಳಿಗೆ ಅನ್ವಯವಾಗುವುದಿಲ್ಲ. ಹೊಸ ಬಡಾವಣೆಗಳಿಗೆ ಮಾತ್ರ ಈ ನಿಯಮ ಅನ್ವಯವಾಗುತ್ತದೆ' ಎಂದು ಸುಪ್ರೀಂ ಕೋರ್ಟ್ 2021ರ ಅಕ್ಟೋಬರ್ ಆದೇಶದಲ್ಲಿ ಸ್ಪಷ್ಟವಾಗಿ ಹೇಳಿತ್ತು.

ಸುಪ್ರೀಂ ಕೋರ್ಟ್ ಅಭಿಪ್ರಾಯದ ಕುರಿತು ಆಯುಕ್ತರ ಗಮನ ಸೆಳೆದಾಗ, 'ಅರ್ಹ ಪ್ರಕರಣಗಳಿದ್ದಲ್ಲಿ ಎಲ್ಲಿ ಬೇಕಾದರೂ ಪರ್ಯಾಯ ನಿವೇಶನ ಹಂಚಿಕೆ ಮಾಡಲು ಬಿಡಿಎ ಕಾಯ್ದೆಯಲ್ಲಿ ಅವಕಾಶವಿದೆ. ಈ ಕುರಿತು ಸುಪ್ರೀಂ ಕೋರ್ಟ್‌ಗೆ ಮಧ್ಯಂತರ ಅರ್ಜಿ ಸಲ್ಲಿಸ-ಲಾಗುವುದು' ಎಂದರು.

ಮಳೆ ಬಿರುಸು: ಗ್ರಾಮಗಳ ಸಂಪರ್ಕ ಕಡಿತ

ಸೊರಬದಲ್ಲಿ ಭತ್ತದ ಗದ್ದೆ ಜಲಾವೃತ • ಮಡಿಕೇರಿಯಲ್ಲಿ ಮಣ್ಣು ಕುಸಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಭಾನುವಾರ ಬಿರುಸಿನ ಮಳೆಯಾಗಿದೆ. ಹಲವೆಡೆ ಮನೆ, ಶಾಲೆಗಳ ಗೋಡೆ ಕುಸಿದು ಬಿದ್ದಿದೆ. ಸಂತ್ರಸ್ತರು ಕಾಳಜಿ ಕೇಂದ್ರದಲ್ಲಿ ಆಶ್ರಯ ಪಡೆದಿದ್ದಾರೆ. ನೂರಾರು ಎಕರೆ ಭತ್ತದ ಗದ್ದೆ ಜಲಾವೃತಗೊಂಡಿದೆ.

ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನಲ್ಲಿ ಉತ್ತಮ ಮಳೆಯಾಗಿದೆ. ಕಾರ್ಗಲ್‌ನಲ್ಲಿ ಒಂದು ಮನೆ ಕುಸಿದಿದೆ. ಸೊರಬ ತಾಲ್ಲೂಕಿನ ಆನವಟ್ಟಿಯ ಹೊಸಕೆರೆಯ ಕೋಡಿ ಒಡೆದಿದ್ದು, ಬಂದ್ನಿಕಟ್ಟೆ ಗ್ರಾಮದ 600ಕ್ಕೂ ಹೆಚ್ಚು ಎಕರೆ ಭತ್ತದ ಗದ್ದೆ ಜಲಾವೃತವಾಗಿದೆ.

ದಾವಣಗೆರೆ ಜಿಲ್ಲೆ ತ್ಯಾವಣಿಗಿ ಸಮೀಪದ ನವಿಲೇಹಾಳ್ ಗ್ರಾಮದ ರಾಜಸಾಬ್ ಅವರಿಗೆ ಸೇರಿದ ಹಸು ಹಳ್ಳದಲ್ಲಿ ಕಾಲು ಜಾರಿ ಬಿದ್ದು ಮೃತಪಟ್ಟಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಸಾಧಾರಣ ಮಳೆಯಾಗಿದೆ. ಹಾಸನ ಜಿಲ್ಲೆಯಲ್ಲಿ ಮಳೆ ಅಬ್ಬರ ಕಡಿಮೆಯಾಗಿದೆ.

ಮಡಿಕೇರಿ ತಾಲ್ಲೂಕಿನಲ್ಲಿ ಹೆಚ್ಚಾಗಿ ಮಳೆಯಾಗಿದ್ದು, ಭಾಗಮಂಡಲ–ಕರಿಕೆ, ಮಡಿಕೇರಿ–ಚೆಟ್ಟಳ್ಳಿ ರಸ್ತೆಗಳಲ್ಲಿ ಮಣ್ಣು ಕುಸಿದು ಸಂಚಾರ ಸ್ಥಗಿತಗೊಂಡಿದೆ. ನಾಪೋಕ್ಲು ಜೊತೆಗೆ ಸಂಪರ್ಕ ಕಳೆದುಕೊಂಡಿರುವ ಭಾಗಮಂಡಲ ಮಡಿಕೇರಿಯೊಂದಿಗೂ ಸಂಪರ್ಕ ಕಳೆದುಕೊಳ್ಳುವ ಭೀತಿ ಎದುರಾಗಿದೆ.

ಕರ್ಣಂಗೇರಿ ಗ್ರಾಮ, ಎಂ.ಬಾಡಗ, ಭಾಗಮಂಡಲ ಸೇರಿದಂತೆ ಹಲವೆಡೆ ಮನೆಗಳು ಕುಸಿದಿವೆ. ಜೋರು ಗಾಳಿಗೆ ಮರಗಳು ಬುಡಮೇಲಾಗಿವೆ ಮತ್ತು ವಿದ್ಯುತ್ ಕಂಬಗಳು ನೆಲಕ್ಕುರುಳಿವೆ.

ಪೊನ್ನಂಪೇಟೆ ತಾಲ್ಲೂಕಿನ ಬಿರುನಾಣಿ ಗ್ರಾಮದ ಕಾಫಿ ತೋಟದಲ್ಲಿ ಗಿಡಗಳು ಹಾಳಾಗಿವೆ. ಶಾಸಕ ಕೆ.ಜಿ. ಬೋಪಯ್ಯ ಮಳೆ ಹಾನಿ ಪ್ರದೇಶಗಳ-ನ್ನು ವೀಕ್ಷಿಸುತ್ತಿರುವಾಗ ಭಾಗಮಂಡಲ–ಕರಿಕೆ ರಸ್ತೆಯಲ್ಲಿ ಮಣ್ಣು ಕುಸಿದಿದ್ದರಿಂದ, ಒಂದೂವರೆ ತಾಸು ರಸ್ತೆಯಲ್ಲಿ ಸಿಲುಕಿದ್ದರು. ಮಣ್ಣು ತೆರವುಗೊಳಿಸಿದ ನಂತರವಷ್ಟೇ ಪ್ರಯಾಣಿಸಿದರು.



ಕುಶಾಲನಗರ ಸಮೀಪದ ಹಾರಂಗಿ ಜಲಾಶಯದ ಮುಂದಿನ ಕೆಳಸೇತುವೆ ಮುಳುಗಡೆಯಾಗಿದ್ದು, ಹಲವು ಗ್ರಾಮಗಳ ಸಂಪರ್ಕ ಕಡಿತಗೊಂಡಿದೆ

ನೀರಿನಲ್ಲಿ ಶವ ಹೊತ್ತೊಯ್ದು ಅಂತ್ಯಕ್ರಿಯೆ

ತೀರ್ಥಹಳ್ಳಿ: ತಾಲ್ಲೂಕಿನ ಆಗುಂಬೆ ಹೋಬಳಿಯ ಕೋಡ್ಲು ಗ್ರಾಮದಲ್ಲಿ ಉಕ್ಕಿ ಹರಿಯುವ ಮಾಲತಿ ನದಿಯ ನೀರಿನಲ್ಲಿಯೇ ಗ್ರಾಮಸ್ಥರು ಶನಿವಾರ ಶವವನ್ನು ಹೊತ್ತುಕೊಂಡು ಹೋಗಿ ಅಂತ್ಯಸಂಸ್ಕಾರ ನೆರವೇರಿಸಿದ್ದಾ-ರೆ. ಇದರ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಭಾನುವಾರ ಹರಿದಾಡಿದೆ.

ಗ್ರಾಮದ ಹಿರಿಯರಾದ ತಮ್ಮಯ್ಯಗೌಡ (92) ವಯೋಸಹಜ ಅನಾರೋಗ್ಯದಿಂದ ಮೃತಪಟ್ಟಿದ್ದರು. ಗ್ರಾಮದ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಸಲು ಕುಟುಂಬದವರು ಸಿದ್ಧತೆ ಮಾಡಿಕೊಂಡಿದ್ದರು. ಆದರೆ, ಭಾರಿ ಮಳೆಯಿಂದಾಗಿ ಮಾಲತಿ ನದಿ ಉಕ್ಕಿ ಹರಿದಿದ್ದು, ಸ್ಮಶಾನ ಕೂಡ ಜಲಾ-ವೃತವಾಗಿತ್ತು. ಹೀಗಾಗಿ ಗ್ರಾಮಸ್ಥರು ಎದೆಯಮಟ್ಟದವರೆಗೆ ಹರಿಯುತ್ತಿದ್ದ ನೀರಿನಲ್ಲಿಯೇ ಶವವನ್ನು ಸ್ಮಶಾನಕ್ಕೆ ಕೊಂಡೊಯ್ದು ಅಂತ್ಯಕ್ರಿಯೆ ನೆರವೇರಿಸಿದರು.

ಕುಶಾಲನಗರದಲ್ಲಿ ಕಾವೇರಿ ನದಿ ಅಪಾಯದ ಮಟ್ಟ ಮೀರಿ ಹರಿಯುತ್ತಿದ್ದು, ಹಾರಂಗಿಯ ಕೆಳ ಸೇತುವೆ ಮುಳುಗಡೆಯಾಗಿದೆ. ಹಲವು ಗ್ರಾಮಗಳಿಗೆ ಸಂಪರ್ಕ ಕಡಿತಗೊಂಡಿದೆ. ಸಿದ್ದಾಪುರದಲ್ಲಿ ಕಾವೇರಿ ನದಿ ಮೈದುಂಬಿ ಹರಿಯುತ್ತಿದ್ದು, ಕರಡಿಗೋಡು–ಚಿಕ್ಕನಹಳ್ಳಿ ಸಂಪರ್ಕ ಕಡಿತಗೊಂಡಿದೆ.

ಕಣ್ವ ನದಿ ನೀರಿನ ರಭಸಕ್ಕೆ ಚನ್ನಪಟ್ಟಣ ತಾಲ್ಲೂಕಿನ ಕೊಂಡಾ-ಪುರ-ಬಾಣಗಹಳ್ಳಿ ನಡುವಿನ ಸಂಪರ್ಕ ಸೇತುವೆ ಕೊಚ್ಚಿ ಹೋಗಿದೆ. ಕೆಲ ವರ್ಷದ ಹಿಂದಷ್ಟೇ ಈ ಸೇತುವೆ ನಿರ್ಮಾಣ ಮಾಡಲಾಗಿತ್ತು. ವಿವಿಧ ಗ್ರಾಮಗಳ ನಡುವೆ ಸಂಪರ್ಕ ಕಡಿತಗೊಂಡಿದೆ.

ಬೆಳಗಾವಿ, ವಿಜಯಪುರ, ಬೆಳಗಾವಿ, ಉತ್ತರಕನ್ನಡ, ವಿಜಯನಗರ ಸೇರಿದಂತೆ ವಿವಿಧೆಡೆ ಮಳೆಯಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಮುಂಡಳ್ಳಿ ನಂ.1 ಶಾಲೆಯ ಮಣ್ಣು ಹಾಗೂ ಕಲ್ಲಿನ ಗೋಡೆ ಕುಸಿದಿದೆ. ಇನ್ನೊಂದು ಕೊಠಡಿಗೂ ಹಾನಿಯಾಗಿದೆ. ಹೆಂಚುಗಳೂ ನೆಲಕ್ಕೆ ಬಿದ್ದು ಪುಡಿಪುಡಿಯಾಗಿವೆ.

ಹೊಸಪೇಟೆ ನಗರದಲ್ಲಿ ಬಿಟ್ಟು ಬಿಟ್ಟು ಬಿರುಸಿನ ಮಳೆಯಾಗಿದೆ. ಕಂಪ್ಲಿ–ಗಂಗಾವತಿ ಸೇತುವೆ ಮುಳುಗುವ ಭೀತಿ ಎದುರಾಗಿರುವುದರಿಂದ ದೊಡ್ಡ ವಾಹನಗಳ ಸಂಚಾರ ನಿರ್ಬಂಧಿ-ಸಲಾಗಿದೆ. ಬೆಳ್ತಂಗಡಿ ತಾಲ್ಲೂಕಿನ ಮಿತ್ತಬಾಗಿಲು ಗ್ರಾಮದ ಗುಡ್ಡೆತ್ತಿಮಾರ್ ಎಂಬಲ್ಲಿ ಮನೆಯೊಂದು ಭಾಗಶಃ ಕುಸಿದಿದೆ. ಸುಬ್ರಹ್ಮಣ್ಯ ಸಮೀಪದ ಕೊಲ್ಲಮೊಗ್ರು ಗ್ರಾಮದಲ್ಲಿ ಗುಡ್ಡ ಕುಸಿದು ಮನೆಯೊಂದು ಅಪಾಯಕ್ಕೆ ಸಿಲುಕಿದೆ.

ಮಂಗಳೂರು ತಾಲ್ಲೂಕಿನ ಬಾಳ ಗ್ರಾಮದಲ್ಲಿ ತಡೆಗೋಡೆ ಕುಸಿದು, ಮನೆ ಅಪಾಯದಲ್ಲಿದೆ. ಮೂರು ಕಾಳಜಿ ಕೇಂದ್ರಗಳಲ್ಲಿ 76 ಮಂದಿ ಆಶ್ರಯ ಪಡೆದಿದ್ದಾರೆ.

ಚಿಕ್ಕಮಗಳೂರು ಜಿಲ್ಲೆ ಕಳಸ ತಾಲ್ಲೂಕಿನ ಕವನಹಳ್ಳದ ನೇರಳೆಕೊಂಡ ಹಾಗೂ ಮೂಡಿಗೆರೆ ತಾಲ್ಲೂಕಿನ ಉದುಸೆ ಗ್ರಾಮದಲ್ಲಿ ಒಂದೊಂದು ಮನೆಗೆ ಹಾನಿಯಾಗಿದೆ. ಕಲಬುರಗಿ, ಬೀದರ್ ಜಿಲ್ಲೆಯಲ್ಲಿ ಮಳೆಯಾಗಿದೆ. ಹಲವೆಡೆ ಬೆಳೆ ಕೊಳೆಯುತ್ತಿದೆ.

ಮಳೆ ವಿವರ ಸೆಂ.ಮೀ.

ಶಿವಮೊಗ್ಗ	
ತೀರ್ಥಹಳ್ಳಿ	52
ಹೊಸನಗರ	14
ಕೊಡಗು	
ಮದೆ	19
ಗಾಳಿಬೀಡು	18
ಭಾಗಮಂಡಲ	15
ಮಡಿಕೇರಿ	10
ಬಲ್ಲಮಾವಟಿ	10
ಚೆಂಬು	10
ಉತ್ತರ ಕನ್ನಡ	
ಸಿದ್ದಾಪುರ	10.9
ಚಿಕ್ಕಮಗಳೂರು	
ಹೊಸಕೆರೆ	12.3,
ಕೊಟ್ಟಿಗೆಹಾರ	12.3
ಕಿಗ್ಗಾ	11.7
ಹಿರೇಬೈಲು	10
ಉಡುಪಿ	
ನಾಡ್ಪಾಲಿ	17

ಎರಡು ದಿನ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಮುಂದಿನ ಎರಡು ದಿನ ಗುಡುಗು ಸಹಿತ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆಯು ಮುನ್ಸೂಚನೆ ನೀಡಿದೆ. ನೈರುತ್ಯ ಮುಂಗಾರು ಕರಾವಳಿ ಮತ್ತು ದಕ್ಷಿಣ ಒಳನಾಡಿನಲ್ಲಿ ಚುರುಕಾಗಿದೆ.

ಕರಾವಳಿಯ ಎಲ್ಲ ಜಿಲ್ಲೆಗಳು ಹಾಗೂ ದಕ್ಷಿಣ ಒಳನಾಡಿನ ಚಿಕ್ಕಮಗಳೂರು ಹಾಗೂ ಕೊಡಗು ಜಿಲ್ಲೆಯಲ್ಲಿ ಎರಡು ದಿನ ಧಾರಾಕಾರ ಮಳೆಯಾಗುವ ಸಾಧ್ಯತೆಯಿದೆ. ಉತ್ತರ ಒಳನಾಡಿನ ಬೆಳಗಾವಿ, ಬೀದರ್, ಕಲಬುರ್ಗಿ ಹಾಗೂ ದಕ್ಷಿಣ ಒಳನಾಡಿನ ಹಾಸನ ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಒಂದೆರಡು ಕಡೆ ಭಾರಿ ಮಳೆಯಾಗಲಿದೆ ಎಂದು ಇಲಾಖೆ ತಿಳಿಸಿದೆ.

ಉತ್ತರ ಕನ್ನಡ, ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಗೆ ಎರಡು ದಿನ 'ಆರೆಂಜ್ ಅಲರ್ಟ್' ಘೋಷಿಸಲಾಗಿದೆ.

ಹಾಸನ, ಶಿವಮೊಗ್ಗ, ಬೆಳಗಾವಿ, ಕಲಬುರ್ಗಿ ಹಾಗೂ ಬೀದರ್ ಜಿಲ್ಲೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ.

ಕರಾವಳಿ ತೀರದಲ್ಲಿ ಬಿರುಗಾಳಿಯ ವೇಗವು ಪ್ರತಿ ಗಂಟೆಗೆ 65 ಕಿ.ಮೀ. ತಲುಪುವ ಸಾಧ್ಯತೆಯಿದೆ. ಆದ್ದರಿಂದ, ಮೀನುಗಾರರು ಸಮುದ್ರಕ್ಕೆ ತೆರಳಬಾರದು ಎಂದು ಇಲಾಖೆ ಸೂಚಿಸಿದೆ. ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಮುಂದುವರೆಯಲಿದೆ. ಒಂದೆರಡು ಬಾರಿ ಸಾಧಾರಣ ಮಳೆಯಾಗಲಿದೆ ಎಂದು ಇಲಾಖೆಯು ತಿಳಿಸಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	123.55	91,637	1,00,569
ಹಾರಂಗಿ	2,859	2,855.46	14,920	21,400
ಕಬಿನಿ	2,284	2,283.04	24,095	25,000
ಹೇಮಾವತಿ	2,922	2921.10	29,814	33,670
ಲಿಂಗನಮಕ್ಕಿ	1,819	1802.05	40,259	3601
ಸೂಪಾ (ಮೀ)	564	542.80	14,169	-
ಮಾಣಿ	594	584.02	5,979	-
ತುಂಗಭದ್ರಾ	1,633	1,631.89	1,09,214	1,09,216
ಮಲಪ್ರಭಾ	2079.50	2,071.10	6,671	294
ಘಟಪ್ರಭಾ	2,175	2,160.66	5,236	166
ಭದ್ರಾ	186	183.9	36,256	42,518
ಆಲಮಟ್ಟಿ (ಮೀ)	519.60	519.11	26,645	6,000
ನಾರಾಯಣಪುರ (ಮೀ)	492.25	491.75	10,000	4,000

* ನೆಲಮಟ್ಟದಿಂದ

'ಕಸದ ತೊಟ್ಟಿಗೆ ಮೊಬೈಲ್ ಎಸೆದ!'

ಒಂದನೇ ಪುಟದಿಂದ...

'ಅಭ್ಯರ್ಥಿಗಳಾದ ಎಚ್.ಆರ್. ಪ್ರವೀಣ್‌ಕುಮಾರ್ ಹಾಗೂ ರಚನಾ ಹನುಮಂತ ಅವರಿಂದ ಹಣ ಪಡೆದಿದ್ದ ಬಸವರಾಜ, ಅದನ್ನೇ ಮಧು ಮೂಲಕ ಎಫ್‌ಡಿಎ ಹರ್ಷನಿಗೆ ಕೊಟ್ಟು ಒಎಂಆರ್ ಪ್ರತಿ ತಿದ್ದಿಸಿದ್ದ. ಇಬ್ಬರೂ ಅಭ್ಯರ್ಥಿಗಳಿಗೆ ರ್‍ಯಾಂಕ್ ಸಹ ಬಂದಿತ್ತು.'

'ಆರೋಪಿ ಬಸವರಾಜ, ಮೊಬೈಲ್ ಫೋನ್ ಮೂಲಕ ಇತರೆ ಆರೋಪಿಗಳನ್ನು ಸಂಪರ್ಕಿಸುತ್ತಿದ್ದ. ವಾಟ್ಸ್‌ಆ್ಯಪ್ ಚಾಟಿಂಗ್ ಹಾಗೂ ಇತರೆ ಸಾಕ್ಷ್ಯಗಳು ಮೊಬೈಲ್‌ನಲ್ಲಿ-ದ್ದವು. ಪ್ರಕರಣ ದಾಖಲಾಗುತ್ತಿ-ದ್ದಂತೆ ಬೆಂಗಳೂರಿನ ದೀಪಾಂಜಲಿ ನಗರ ಮೆಟ್ರೊ ನಿಲ್ದಾಣಕ್ಕೆ ಹೊಂದಿಕೊಂಡಿರುವ ಬಿಬಿಎಂಪಿ ಕಸದ ತೊಟ್ಟಿಗೆ ಮೊಬೈಲ್ ಎಸೆದು ಸಾಕ್ಷ್ಯ ನಾಶ ಮಾಡಿದ್ದಾನೆ' ಎಂದು ಉಲ್ಲೇಖಿಸಲಾಗಿದೆ.

ಅಭ್ಯರ್ಥಿಗಳಿಂದಲೂ ಮೊಬೈಲ್ ಫೋನ್ ನಾಶ: 'ಅಕ್ರಮದಲ್ಲಿ ಭಾಗಿಯಾಗಿದ್ದ ಅಭ್ಯರ್ಥಿಗಳಾದ ಸಿ.ಎಂ.ನಾರಾಯಣ ಹಾಗೂ ಸಿ.ಎಸ್. ನಾಗೇಶ್‌ಗೌಡ ಸಹ ತಮ್ಮ ಮೊಬೈಲ್ ಫೋನ್‌ಗಳನ್ನು ನಾಶ ಮಾಡಿದ್ದಾರೆ' ಎಂಬ ಮಾಹಿತಿ ಆರೋಪ ಪಟ್ಟಿಯಲ್ಲಿದೆ.

'ಕೆಂಗೇರಿ ಹೋಬಳಿಯ ಕೆ.ಗೊ-ಲ್ಲಹಳ್ಳಿ ಬಳಿಯ ಚಿನ್ನಕುರ್ಚಿ ಗ್ರಾಮದ ನಾರಾಯಣ, ಸಿಐಡಿ ಅಧಿಕಾರಿಗಳು ಬಂಧಿಸಬಹುದೆಂಬ ಭಯದಲ್ಲಿದ್ದ. ಮೈಸೂರು ರಸ್ತೆಯ ಗೋಪಾಲನ್ ಒಲಿಂಪಿಯಾ ಮಾಲ್ ಬಳಿ ಮೊಬೈಲ್ ಫೋನ್ ಬಿಸಾಕಿ ಸಾಕ್ಷ್ಯ ನಾಶ ಮಾಡಿದ್ದಾನೆ. ನಾಗೇಶ್‌ಗೌಡ ಸಹ ಸಿಕ್ಕಿಬೀಳುವ ಭಯದಲ್ಲಿ ಇದೇ ಮಾರ್ಗ ಅನುಸರಿಸಿದ್ದಾನೆ' ಎಂದೂ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ಮುಳುಗಿದ ಬೋಟ್: ಕಾರ್ಮಿಕರ ರಕ್ಷಣೆ

ಮಂಗಳೂರು: ಮೀನುಗಾರಿಕೆಗೆ ತೆರಳಿದ್ದ ಟ್ರೋಲಿಂಗ್ ಬೋಟ್, ಇಲ್ಲಿನ ಪಣಂಬೂರು ಬಳಿ ಮುಳುಗಿದ್ದು ಅದರಲ್ಲಿದ್ದ 11 ಮಂದಿಯನ್ನು ರಕ್ಷಿಸಲಾಗಿದೆ.

ಶನಿವಾರ ಸಂಜೆ ಮಂಗಳೂರು ಧಕ್ಕೆಯಿಂದ ಹೊರಟ, ಉರ್ವ ನಿವಾಸಿ ಸುಂದರ ಪುತ್ರನ್ ಅವರ ಪುತ್ರ ಕೃಷ್ಣಕುಮಾರ್ ಮಾಲೀಕತ್ವದ ಬೋಟ್, ಪಣಂಬೂರಿನಿಂದ 90 ಮೀಟರ್ ಆಳಸಮುದ್ರದಲ್ಲಿ ಮುಳುಗಿದೆ. ಹತ್ತಿರದಲ್ಲಿ ಮತ್ತೊಂದು ಬೋಟ್ ಕೂಡ ಇತ್ತು. ಅವರು ಸಮೀಪ ತಲುಪುವಷ್ಟರ-ಲ್ಲಿ ಬೋಟ್ ಆಳಕ್ಕೆ ಸಾಗುತ್ತ, ಕೊನೆಗೆ ಒಂದು ಭಾಗ ಮಾತ್ರ ಕಾಣಿಸುತ್ತಿತ್ತು. ತಕ್ಷಣ ಅವರು ರಕ್ಷಣಾ ಕಾರ್ಯ ನಡೆಸಿದ್ದಾರೆ.

'ಹವಾಮಾನ ವೈಪರೀತ್ಯದಿಂದ ನಿಯಂತ್ರಣ ಕಳೆದುಕೊಂಡು ಬೋಟ್ ಮುಳುಗಿದೆ. ಸಮೀಪದ ಬೋಟ್‌ನವರು ತಕ್ಷಣ ಸ್ಪಂದಿಸಿದ್ದರಿಂದ ಅನಾಹುತ ತಪ್ಪಿದೆ' ಎಂದು ಮೀನುಗಾರಿಕಾ ಇಲಾಖೆಯ ಜಂಟಿ ನಿರ್ದೇಶಕ ಹರೀಶ್ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ. 'ಮುಳುಗಿದ ಬೋಟ್ ಮೇಲೆತ್ತಲು ಆಗುವುದಿಲ್ಲ. ಕರಾವಳಿ ಕಾವಲು ಪಡೆಯ ಠಾಣೆಗೆ ಮಾಹಿತಿ ನೀಡಿ ಕಾರ್ಮಿಕರೆಲ್ಲರೂ ತಮ್ಮೂರು ಆಂಧ್ರಪ್ರದೇಶಕ್ಕೆ ತೆರಳಿದ್ದಾರೆ' ಎಂದು ಬೋಟ್ ಮಾಲೀಕರು ತಿಳಿಸಿದ್ದಾರೆ. ಸೋಮವಾರದವರೆಗೆ ಮೀನುಗಾರಿಕೆಗೆ ತೆರಳಬಾರದು ಎಂದು ಮೀನುಗಾರಿಕಾ ಇಲಾಖೆ ಸೂಚಿಸಿದೆ.


‘ಡಿಜಿಟಲ್’ ತಂತ್ರಕ್ಕೆ ‘ಮಾನವಿಕ’ ಸ್ಪರ್ಶ


ವಿವಿಧ ವಲಯಗಳಲ್ಲಿ ತಂತ್ರಜ್ಞಾನದ ಶಕ್ತಿಗೆ, ಮಾನವಿಕ ವಿಜ್ಞಾನದ ಅರ್ಥಪೂರ್ಣ ಒಳನೋಟಗಳನ್ನು ಒದಗಿಸುವ ಮೂಲಕ, ಆಟೊಮೇಷನ್‌ನ ಉತ್ಕೃಷ್ಟತೆ ವೃದ್ಧಿಯಾಗುತ್ತಿದೆ. ಗ್ರಾಹಕರ ಅಪೇಕ್ಷೆಗಳು, ಆದ್ಯತೆಗಳ ಒಳನೋಟಗಳನ್ನು ಪಡೆಯಲು ಸಮಾಜಶಾಸ್ತ್ರಜ್ಞರು, ಇತಿಹಾಸಕಾರರು ಮತ್ತು ಭಾಷಾಶಾಸ್ತ್ರಜ್ಞರು ಸೇರಿದಂತೆ ಮಾನವಿಕ ವಿಷಯ ತಜ್ಞರ ಸೇವೆಯನ್ನು ಅಗಾಧವಾಗಿ ಬಳಸುತ್ತಿರುವ ಉದಾಹರಣೆಗಳಿವೆ.

ಪ್ರದೀಪ್ ವೆಂಕಟರಾಮ್


ಇಂದಿನ ದಿನ ಡಿಜಿಟಲ್ ಜಗತ್ತಿನಲ್ಲಿ ನಮ್ಮನ್ನು ನಿಬ್ಬೆರಗಾಗಿಸುವ ಅನೇಕ ಬೆಳವಣಿಗೆಗಳಾಗುತ್ತಿವೆ. ಬೇಕಾದರೆ ಒಮ್ಮೆ ಆಟೊಮೊಬೈಲ್ ಕ್ಷೇತ್ರವನ್ನು ಗಮನಿಸಿ ನೋಡಿ. ಅಲ್ಲಿ ಕಂಪನಿಗಳು ಮಾನವನ ನಡವಳಿಕೆಯನ್ನು ಗ್ರಹಿಸಿ, ಅದಕ್ಕನುಗುಣವಾಗಿ ಸುರಕ್ಷಿತ, ಸ್ವಯಂ-ಚಾಲನಾ ಕಾರುಗಳನ್ನು ನಿರ್ಮಿಸುತ್ತಿವೆ. ಇದಕ್ಕೆ ಮಾನವಿಕ ಸಿದ್ಧಾಂತಗಳನ್ನು ಅಳವಡಿಸಿಕೊಳ್ಳಲಾಗುತ್ತಿದೆ.

ಪ್ರಸ್ತುತ ಅನೇಕ ವಲಯಗಳಲ್ಲಿ ತಂತ್ರಜ್ಞಾನದ ಶಕ್ತಿಗೆ, ಮಾನವಿಕ ವಿಜ್ಞಾನದ ಅರ್ಥಪೂರ್ಣ ಒಳನೋಟಗಳನ್ನು ಒದಗಿಸುವ ಮೂಲಕ, ಆಟೊಮೇಷನ್‌ನ ಉತ್ಕೃಷ್ಟತೆ ವೃದ್ಧಿಯಾಗುತ್ತಿದೆ. ಹಾಗಾಗಿ, ಗ್ರಾಹಕರ ಅಪೇಕ್ಷೆಗಳು, ಆದ್ಯತೆಗಳು ಮತ್ತು ಪ್ರಚೋದನೆಗಳ ಒಳನೋಟಗಳನ್ನು ಪಡೆಯಲು ಸಮಾಜಶಾಸ್ತ್ರಜ್ಞರು, ಇತಿಹಾಸಕಾರರು ಮತ್ತು ಭಾಷಾಶಾಸ್ತ್ರಜ್ಞರು ಸೇರಿದಂತೆ ಮಾನವಿಕ ವಿಷಯ ತಜ್ಞರ ಸೇವೆಯನ್ನು ಅಗಾಧವಾಗಿ ಬಳಸುತ್ತಿರುವ ಉದಾಹರಣೆಗಳಿವೆ. ಹೀಗೆ, ಗ್ರಾಹಕರ ಬಗ್ಗೆ ಹೆಚ್ಚಿನ ತಿಳಿವಳಿಕೆಯೊಂದಿಗೆ ಅಭಿವೃದ್ಧಿಪಡಿಸಿದ ಉತ್ಪನ್ನಗಳು ಮತ್ತು ಸೇವೆಗಳು ಮಾರುಕಟ್ಟೆಯಲ್ಲಿ ತಮ್ಮದೇ ಆದ ವಿಶಿಷ್ಟತೆಯೊಂದಿಗೆ ದೀರ್ಘಾವಧಿಯ ಯಶಸ್ಸನ್ನು ಕಾಣಬಹುದು. ಈ ಕುತೂಹಲಕಾರಿ ಬೆಳವಣಿಗೆಗಳಿಂದ ಮಾನವಿಕ ವಿಷಯಕ್ಕೆ ಸಂಬಂಧಿಸಿದ ಉದ್ಯೋಗಗಳಿಗೊಂದು ಮರುಜೀವ ಬಂದಂತಾಗಿದೆ.





ಮಾನವಿಕ ವಿಭಾಗದ ವಿಷಯಗಳೆಂದರೆ ಚರಿತ್ರೆ, ಮನಃಶಾಸ್ತ್ರ, ತತ್ವಶಾಸ್ತ್ರ, ರಾಜಕೀಯ ವಿಜ್ಞಾನ, ಸಮಾಜ ಶಾಸ್ತ್ರ, ಸಾಹಿತ್ಯ, ಭಾಷೆ, ಕಾನೂನು ವಿಷಯಗಳು ಸೇರುತ್ತವೆ. ಇದೊಂದು ಸವಿಸ್ತಾರ ಕ್ಷೇತ್ರ. ಈ ಮಾನವಿಕ ವಿಷಯಕ್ಕೆ ಸಂಬಂಧಿಸಿದಂತೆ ಜಗತ್ತಿನ ಹೆಸರಾಂತ ಲೇಖಕ ಸ್ಕಾಟ್ ಹಾರ್ಟ್ಲೆ ರಚಿಸಿರುವ ‘ದಿ ಫಝೀ ಆ್ಯಂಡ್ ಟೆಕೀ- ವಿಲ್ ಲಿಬರಲ್ ಆರ್ಟ್ಸ್ ರೂಲ್ ದಿ ಡಿಜಿಟಲ್ ವರ್ಲ್ಡ್?’ ಎಂಬ ಪುಸ್ತಕ, ಜಗತ್ತಿನಾದ್ಯಂತ ಆರೋಗ್ಯಕಾರಿ, ಚಿಂತನಾಶೀಲ ಚರ್ಚೆಯನ್ನು ಹುಟ್ಟುಹಾಕಿದೆ.



ಹಲವಾರು ಉದ್ಯಮಗಳ ಯಶಸ್ಸಿನ ಹಿಂದೆ ತಂತ್ರಜ್ಞಾನದ ಜೊತೆಗೆ ಮಾನವಿಕ ವಿಷಯ ತಜ್ಞರ ನೆರವೂ ಇದೆ ಎನ್ನುವುದೇ ಹಾರ್ಟ್ಲೆ ಅವರ ಪ್ರಮುಖ ಸಿದ್ಧಾಂತ. ಇದಕ್ಕೆ ಫೇಸ್‌ಬುಕ್‌ನ ಸಂಸ್ಥಾಪಕ ಮಾರ್ಕ್ ಜುಕರ್‌ಬರ್ಗ್, ಸ್ಲಾಕ್‌ನ ಸ್ಟೀವರ್ಟ್ ಬಟರ್‌ಫೀಲ್ಡ್, ಅಲಿಬಾಬಾದ ಜ್ಯಾಕ್ ಮಾ, ಯೂಟ್ಯೂಬ್‌ನ ಸುಸಾನ್ ವೊಜ್ಸಿಕ್ಕಿ, ಏರ್‌ಬಿಎನ್‌ಬಿಯ ಬ್ರಿಯಾನ್ ಚೆಸ್ಕಿಯಂತಹವರು ಓದಿರುವ ವಿಷಯಗಳೂ ಕೂಡ ಸಾಕ್ಷಿಯಾಗುತ್ತವೆ. ಈ ತಂತ್ರಜ್ಞಾನ ಕ್ಷೇತ್ರದ ದಿಗ್ಗಜರು ಓದಿರುವ ವಿಷಯಗಳೆಂದರೆ, ಹಿನ್ನೆಲೆ ಭಾಷೆಗಳು, ಮಾನವಿಕ ಶಾಸ್ತ್ರ ಎಂದು ಹಾರ್ಟ್ಲೆ ಮನದಟ್ಟು ಮಾಡುತ್ತಾರೆ. ಮಾನವಿಕ ವಿಷಯಗಳ ಅಧ್ಯಯನದಿಂದ ಮಾನವನ ನಡವಳಿಕೆಯ ಹಿನ್ನೆಲೆ, ಪ್ರಚೋದನೆಯ ಬಗೆಗಿನ ಒಳನೋಟವನ್ನು ಪಡೆದು, ಗ್ರಾಹಕರ ಅಗತ್ಯಗಳಿಗೆ ಪರಿಣಾಮಕಾರಿಯಾಗಿ ಸ್ಪಂದಿಸಬಹುದು ಎನ್ನುವುದೇ ತಜ್ಞರ ಅಭಿಪ್ರಾಯ.

ಜ್ಞಾನ–ಕೌಶಲದಲ್ಲಿ ವ್ಯತ್ಯಾಸ

ಇಂದಿನ ಅತ್ಯಂತ ಬೇಡಿಕೆಯ ಉದ್ಯೋಗಗಳು ಕೆಲವು ವರ್ಷಗಳ ಹಿಂದೆ ಇರಲಿಲ್ಲ; ಒಂದು ಅಂದಾಜಿನಂತೆ, ಈಗಿರುವ ಕೆಲವು ಉದ್ಯೋಗಗಳು ಮುಂದೆ ಇರಲಾರವು. ಹೀಗಿದ್ದರೂ, ನಮ್ಮ ವಿದ್ಯಾರ್ಥಿಗಳು ಪೂರ್ವ-ನಿರ್ಧರಿತ ವೈದ್ಯಕೀಯ ಮತ್ತು ಎಂಜಿನಿಯರಿಂಗ್ ವೃತ್ತಿ ಮಾರ್ಗಗಳನ್ನೇ ಅರಸುತ್ತಿದ್ದಾರೆ. ಶೇ 80ರಷ್ಟು ಎಂಜಿನಿಯರಿಂಗ್ ಪದವೀಧರರಲ್ಲಿ ಉದ್ಯೋಗಗಳಿಗೆ ಬೇಕಾದ ಕೌಶಲಗಳಿಲ್ಲರುವುದಿಲ್ಲ ಎಂದು ಅನೇಕ ಸಮೀಕ್ಷೆಗಳು ವರದಿ ಮಾಡಿದ ನಂತರವೂ, ಎಂಜಿನಿಯರಿಂಗ್ ಪದವಿಯ ವ್ಯಾಮೋಹ ಇಂದಿಗೂ ಕುಗ್ಗಿಲ್ಲ.

ಈ ಎಲ್ಲಾ ಬೆಳವಣಿಗೆಗಳ ಮಧ್ಯೆ ವಿಶ್ವದಾದ್ಯಂತ, ಪ್ರಸಿದ್ಧ ಉದ್ಯಮಿಗಳು, ಅರ್ಥಶಾಸ್ತ್ರಜ್ಞರು ಮತ್ತು ಲೇಖಕರು ಹಾರ್ಟ್ಲೆಯನ್ನು ಬೆಂಬಲಿಸುತ್ತಿದ್ದಾರೆ. ಸಾಮಾಜಿಕ ಕೌಶಲಗಳ ಮಹತ್ವದ ಬಗ್ಗೆ ಸಂಶೋಧನೆ ನಡೆಸಿದ ಹಾರ್ವರ್ಡ್ ಅರ್ಥಶಾಸ್ತ್ರಜ್ಞ ಡೇವಿಡ್ ಡೆಮಿಂಗ್ ಹೇಳುವಂತೆ, ‘ಅಲ್ಗಾರಿದಮ್ ಆಗಿ ಪರಿವರ್ತಿಸಲು ಆಗದಿರುವುದನ್ನು ನಿಭಾಯಿಸುವ ಸಾಮರ್ಥ್ಯ, ಮತ್ತು ವಿನೂತನ ಸಮಸ್ಯೆಗಳು ಮತ್ತು ಸನ್ನಿವೇಶಗಳನ್ನು ನೀವು ಎಷ್ಟು ಚೆನ್ನಾಗಿ ನಿಭಾಯಿಸುತ್ತೀರಿ ಎನ್ನುವುದೇ ಯಶಸ್ಸನ್ನು ನಿರ್ಧರಿಸುವ ಪ್ರಮುಖ ಅಂಶ’.

ಹಾರ್ಟ್ಲೆ ಮತ್ತು ಇತರರು ವಾದಿಸುವಂತೆ, ‘ಭವಿಷ್ಯದ ಉದ್ದಿಮೆಗಳು, ತಂತ್ರಜ್ಞರು ಮತ್ತು ಮಾನವಿಕ ವಿಷಯ ತಜ್ಞರ ನಡುವಿನ ಸಹಯೋಗವಾಗಿರುತ್ತದೆ. ಇದೇ ನಿಟ್ಟಿನಲ್ಲಿ, ಮಹೀಂದ್ರ ಗ್ರೂಪ್‌ನ ಅಧ್ಯಕ್ಷ ಆನಂದ್ ಮಹೀಂದ್ರಾ ಹೇಳುತ್ತಾರೆ, ‘ಹಾರ್ಟ್ಲೆ ಇಂದಿನ ಕೋಡರ್ ಮತ್ತು ಎಂಜಿನಿಯರ್ ಯುಗದಲ್ಲಿ ಮಾನವೀಯತೆಯ ಪರವಾಗಿ ಸಕಾಲಿಕವಾದ ಮತ್ತು ಬಲವಾದ ವಾದವನ್ನು ಮಂಡಿಸುತ್ತಾರೆ. ಈ ವಾದವನ್ನು ಒಪ್ಪುವ ಇನ್ಫೊಸಿಸ್ ಮಾಜಿ ಸಿಇಒ ಮತ್ತು ಸಹ ಸಂಸ್ಥಾಪಕ ಎಸ್.ಡಿ.ಶಿಬುಲಾಲ್, ‘ತಂತ್ರಜ್ಞಾನದ ಮುಖ್ಯ ಗುರಿ ಮಾನವನ ಅಗತ್ಯಗಳನ್ನು, ಕಾಳಜಿಗಳನ್ನು ಪರಿಹರಿಸುವುದು. ಹಾಗೆ ಮಾಡುವಂತಾಗಲು, ಟೆಕ್ಕಿಯು ಮೊದಲು ಮಾನವತಾವಾದಿಯಾಗಿರಬೇಕು ಮತ್ತು ಮಾನವನ ಅಗತ್ಯಗಳನ್ನು ಅರ್ಥಮಾಡಿಕೊಳ್ಳಬೇಕು. ಲಿಬರಲ್ ಆರ್ಟ್ಸ್ ಶಿಕ್ಷಣ, ಇದಕ್ಕೆ ಅನುವು ಮಾಡುತ್ತದೆ’ ಎಂದು ಹೇಳುತ್ತಾರೆ.


ಮುಂದಿನ ಹಾದಿ

ಹೀಗೆ ಬರಲಿರುವ ಭವಿಷ್ಯದ ಉದ್ಯೋಗಗಳಿಗೆ, ಆಮೂಲಾಗ್ರವಾಗಿ ಬದಲಾದ ಜ್ಞಾನ ಮತ್ತು ಕೌಶಲಗಳ ಅಗತ್ಯ ಕಡ್ಡಾಯವೆಂದೇ ಹೇಳಬೇಕು. ಆದ್ದರಿಂದ, ವಿದ್ಯಾರ್ಥಿಗಳು ಪೂರ್ವ-ನಿರ್ಧರಿತ ಸ್ಟೆಮ್ (STEM- Science, Technology, Engineering, Mathematics) ಕೋರ್ಸ್‌ಗಳಾಚೆ ಇರುವ ಇನ್ನಿತರ ಕೋರ್ಸ್‌ಗಳು ಮತ್ತು ಸಂಬಂಧಿತ ಉದ್ಯೋಗಗಳತ್ತ ಗಮನವನ್ನು ಹರಿಸಿ, ಮಾನವಿಕ ಶಾಸ್ತ್ರ ಸೇರಿದಂತೆ ಸ್ಟೀಮ್ (STEAM- Science, Technology, Engineering, Arts and Mathematics) ಕೋರ್ಸ್‌ಗಳನ್ನು ಪರಿಗಣಿಸಿ ತಮ್ಮ ಮುಂದಿನ ಭವಿಷ್ಯಕ್ಕೊಂದು ಭದ್ರ ಬುನಾದಿಯನ್ನು ಹಾಕಿಕೊಳ್ಳಬಹುದು. ಯಾವುದೇ ಕೋರ್ಸ್‌ನೊಂದಿಗೆ, ತಮ್ಮ ಇಚ್ಛೆಯ ಅನುಸಾರ, ಬೇರೊಂದು ವಿಷಯವನ್ನು ಓದುವ ಅವಕಾಶ, ಈಗ ನೂತನ ಶಿಕ್ಷಣ ನೀತಿ(NEP)ಯ ಅನ್ವಯ ಸಾಧ್ಯವಿದೆ.

ಒಟ್ಟಾರೆ ಹೇಳುವುದಾದರೆ, ಭವಿಷ್ಯದ ಉದ್ದಿಮೆಗಳಲ್ಲಿ ತಂತ್ರಜ್ಞರ ಜೊತೆಗೆ ಮಾನವಿಕ ಶಾಸ್ತ್ರಜ್ಞರ ಸಹಕಾರ ಮತ್ತು ಸಹಯೋಗದ ಅಗತ್ಯ ಕಂಡುಬರುತ್ತಿದೆ. ಹಾಗಾಗಿ, ಈ ಬೆಳವಣಿಗೆಗಳನ್ನು ವಿದ್ಯಾರ್ಥಿಗಳು ಗುರುತಿಸಿ, ತಮ್ಮ ಸ್ವಾಭಾವಿಕ ಆಸಕ್ತಿ ಮತ್ತು ಪ್ರತಿಭೆಯಂತೆ ತಮ್ಮ ವೃತ್ತಿಜೀವನದ ಯೋಜನೆಯನ್ನು ರೂಪಿಸಿಕೊಳ್ಳಬೇಕು.

(ಲೇಖಕರು ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರರು)

ಎನ್‌ಇಪಿ: ಎಂ.ಎ, ಪಿ.ಎಚ್‌ಡಿ ಕೋರ್ಸ್‌ಗಳ ಅವಧಿ ಎಷ್ಟು?



ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್

- **ನಾಲ್ಕು ವರ್ಷದ ಪದವಿಯನ್ನು (ಎನ್‌ಇಪಿ) ಮಾಡಿದರೆ, ಎಂಎ ಮತ್ತು ಪಿಎಚ್‌ಡಿ ಕೋರ್ಸುಗಳನ್ನು ಎಷ್ಟು ವರ್ಷ ಓದಬೇಕಾಗುತ್ತದೆ?**

ಟಿ.ಎಂ.ಮಹೇಶ್, ತಿಪಟೂರು

ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಪ್ರಕಾರ ಮೂರು ವರ್ಷದ ನಂತರ ಪದವಿ ನೀಡಲಾಗುತ್ತದೆ. ನಾಲ್ಕನೇ ವರ್ಷವನ್ನು ಸಂಶೋಧನೆಗೆ ಮೀಸಲಾಗಿಟ್ಟರೆ, ಕೋರ್ಸ್ ನಂತರ ಪದವಿ (ಸಂಶೋಧನೆ) ನೀಡಲಾಗುತ್ತದೆ. ನಾಲ್ಕು ವರ್ಷದ ಪದವಿಯ ನಂತರ ಸ್ನಾತಕೋತ್ತರ ಕೋರ್ಸ್‌ಗಳು ಒಂದು ವರ್ಷದ್ದಾಗಿರುತ್ತದೆ. ಪದವಿಯ (ಸಂಶೋಧನೆ) ನಂತರ, ಸಿಜಿಪಿಎ (ಕ್ಯೂಮುಲೇಟಿವ್ ಗ್ರೇಡ್ ಪಾಯಿಂಟ್ ಆವರೇಜ್) 7.5 ಇದ್ದಲ್ಲಿ, ನೇರವಾಗಿ ಪಿಎಚ್‌ಡಿ ಮಾಡಲು ಅರ್ಹತೆ ಸಿಗುತ್ತದೆ. ಸಂಶೋಧನೆಯ ವಿಷಯವನ್ನು ಆಧರಿಸಿ, ಪಿಎಚ್‌ಡಿ ಮಾಡಲು 2 ರಿಂದ 6 ವರ್ಷ ಬೇಕಾಗಬಹುದು.

- **ನಾನು ಪಿಎಸ್‌ಐ ಆಗುವ ಆಸೆ ಹೊಂದಿದ್ದೇನೆ. ನಾನು ಪಿಎಸ್‌ಐ ಆದ ಮೇಲೆ ನನ್ನ ಜೀವನ ಶೈಲಿ ಹೇಗಿರಬಹುದು ? ನನ್ನ ಕುಟುಂಬಕ್ಕೆ ಸಮಯ ಕೊಡಲಾಗುವುದೇ? ದಿನಕ್ಕೆ ಎಷ್ಟು ಸಮಯ ಕೆಲಸ ಇರುತ್ತೆ? ನಾನು ಪಿಎಸ್‌ಐ ಆಗಲು ನನ್ನಲ್ಲಿ ಏನಿರಬೇಕು? ಸರ್, ದಯವಿಟ್ಟು ಕೆಲಸದ ಬಗ್ಗೆ ಮಾಹಿತಿ ನೀಡಿ.**

ಊರು, ಹೆಸರು ತಿಳಿಸಿಲ್ಲ.

ನಮ್ಮ ಸಮಾಜದಲ್ಲಿ ನೆಮ್ಮದಿ ಮತ್ತು ಶಾಂತಿಯ ಸ್ಥಾಪನೆಗಾಗಿ ಹಗಲಿರುಳೂ ಪೊಲೀಸ್ ಇಲಾಖೆ ಶ್ರಮಿಸುತ್ತದೆ. ಈ ನಿಟ್ಟಿನಲ್ಲಿ, ಇಲಾಖೆಯ ಉದ್ಯೋಗಿಗಳು ಸಂದರ್ಭಕ್ಕೆ ತಕ್ಕಂತೆ ಸ್ವಯಂ-ಪ್ರೇರಿತರಾಗಿ ಅಥವಾ ಮೇಲಧಿಕಾರಿಗಳ ಸೂಚನೆ/ಆದೇಶದಂತೆ ಕೆಲಸದಲ್ಲಿ ತೊಡಗಿಸಿಕೊಳ್ಳುವುದು ಅಗತ್ಯ. ಹಾಗಾಗಿ, ನಿಗದಿತ ವೇಳೆಯಲ್ಲಿಯೇ ಕೆಲಸ ಮಾಡುವ ಪರಿಪಾಠ ಎಲ್ಲಾ ಸಂದರ್ಭದಲ್ಲೂ ಕಾರ್ಯಸಾಧ್ಯವಲ್ಲ. ಆದ್ದರಿಂದ, ವೃತ್ತಿ ಮತ್ತು ವೈಯಕ್ತಿಕ ಬದುಕಿನಲ್ಲಿ ಸಮತೋಲನವನ್ನು ಸಾಧಿಸಬೇಕಾದರೆ ವೃತ್ತಿಯಲ್ಲಿ ಆಸಕ್ತಿ, ಅಭಿರುಚಿ, ಕೌಶಲಗಳ ಜೊತೆಗೆ ಕುಟುಂಬದ ಬೆಂಬಲ ಇರಬೇಕು.

ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ಆಗಲು ಯಾವುದಾದರೂ ಪದವಿಯ ಜೊತೆ ನಾಯಕತ್ವದ ಕೌಶಲ, ದಿಟ್ಟತನ, ಸಹಭಾಗಿತ್ವದ ಕೌಶಲ, ಉತ್ತಮ ಸಂವಹನ, ಪರಿಶೋಧನಾ ಕೌಶಲ, ಸಮಸ್ಯೆಗಳನ್ನು ಪರಿಹರಿಸುವ ಕೌಶಲಗಳ ಜೊತೆ ಸಕಾರಾತ್ಮಕ ಧೋರಣೆಯಿರಬೇಕು; ಹಾಗೂ ಮಾನಸಿಕ ಮತ್ತು ದೈಹಿಕ ಸದೃಢತೆಯಿರಬೇಕು. ಪ್ರಮುಖವಾಗಿ, ಈ ವೃತ್ತಿ ನಿಮಗೆ ಒಪ್ಪುತ್ತದೆಯೇ ಎಂದು ಖಚಿತವಾಗಬೇಕು. ಪಿಎಸ್‌ಐ ಕೆಲಸಕ್ಕೆ ಸೇರಿದ ನಂತರ, ನಿಮ್ಮ ಕಾರ್ಯಕ್ಷಮತೆ ಮತ್ತು ಸೇವಾ ಜೇಷ್ಠತೆಯನ್ನು ಪರಿಗಣಿಸಿ, ಮುಂದಿನ ಹುದ್ದೆಗೆ ಬಡ್ತಿಯನ್ನು ನಿರೀಕ್ಷಿಸಬಹುದು.

ಕರ್ನಾಟಕ ಪೊಲೀಸ್ ನೇಮಕಾತಿ ಪ್ರಕ್ರಿಯೆ, ಪರೀಕ್ಷೆಗಳ ವಿವರ ಮತ್ತು ವಿಷಯಸೂಚಿಗೆ ಗಮನಿಸಿ: https://prepp.in/karnataka-police-exam

- **ನಾನು ಬಿಎ (ಅರ್ಥಶಾಸ್ತ್ರ) ಓದುತ್ತಿದ್ದು, ಯುಪಿಎಸ್‌ಸಿ ಪರೀಕ್ಷೆ ಬರೆಯುವ ಆಸೆ ಇದೆ. ಕಠಿಣವಾದ ಈ ಪರೀಕ್ಷೆಯ ತಯಾರಿಗೆ, ಹೆಚ್ಚಿನ ಸಮಯ ಬೇಕಾಗುವುದರಿಂದ, ಎಂಎ (ಅರ್ಥಶಾಸ್ತ್ರ) ಮಾಡಬೇಕೆಂದಿದ್ದೇನೆ. ಅರ್ಥಶಾಸ್ತ್ರ ಕ್ಷೇತ್ರದ ಉದ್ಯೋಗಾವಕಾಶಗಳೇನು? ಈ ವಿಷಯದಲ್ಲಿ ಡಾಕ್ಟರೇಟ್ ಮಾಡಿದರೆ ಯಾವ ರೀತಿಯ ಉದ್ಯೋಗಾವಕಾಶಗಳಿವೆ?**

ವಿಕಾಸ್ ಮಂತ್ರೋಡಿ, ಹೂವಿನಹಡಗಲಿ.

ಎಂಎ (ಅರ್ಥಶಾಸ್ತ್ರ) ಕೋರ್ಸ್ ನಂತರ ಬೇಡಿಕೆಯಲ್ಲಿರುವ ಈ ಕ್ಷೇತ್ರದಲ್ಲಿ, ನಿಮ್ಮ ಆಸಕ್ತಿಯ ಅನುಸಾರ ವೃತ್ತಿಜೀವನವನ್ನು ರೂಪಿಸಿಕೊಳ್ಳಬಹುದು. ಶಿಕ್ಷಣ, ಬ್ಯಾಂಕಿಂಗ್, ಹಣಕಾಸು, ಸಂಶೋಧನೆ ಮತ್ತು ವಿಶ್ಲೇಷಣೆ, ಬಂಡವಾಳ ಹೂಡಿಕೆ, ಮಾಧ್ಯಮ, ವಿಷಯಾಭಿವೃದ್ಧಿ ಮುಂತಾದ ಕ್ಷೇತ್ರಗಳಲ್ಲಿ ಅವಕಾಶಗಳಿವೆ. ಜೊತೆಗೆ, ಯುಪಿಎಸ್‌ಸಿ/ ಕೆಪಿಎಸ್‌ಸಿ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಸರ್ಕಾರಿ ವಲಯದಲ್ಲೂ ವೃತ್ತಿಯನ್ನು ಅರಸಬಹುದು. ಡಾಕ್ಟರೇಟ್ ಮಾಡಿದರೆ, ಶಿಕ್ಷಕ ವೃತ್ತಿಯಲ್ಲಿ ಅವಕಾಶಗಳಿವೆ.

ಪ್ರಮುಖವಾಗಿ, ನೀವು ಸ್ವಯಂ-ಮೌಲ್ಯಮಾಪನ ಮಾಡಿಕೊಂಡು ಯಾವ ವೃತ್ತಿ ನಿಮಗೆ ಸರಿಹೊಂದುತ್ತದೆ ಎಂದು ನಿರ್ಧರಿಸಿ, ವೃತ್ತಿಯೋಜನೆಯನ್ನು ಮಾಡಿದರೆ, ಅದರಂತೆ ಮುಂದಿನ ಹಾದಿ ಸ್ಪಷ್ಟವಾಗುತ್ತದೆ. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/c/EducationalExpertManagementCareerConsultant

- **ನಾನು ಪದವಿಯಲ್ಲಿ ಪತ್ರಿಕೋದ್ಯಮ ಮತ್ತು ಕನ್ನಡವನ್ನು ಐಚ್ಛಿಕ ವಿಷಯಗಳನ್ನಾಗಿ ತೆಗೆದುಕೊಂಡಿದ್ದೇನೆ. ಮುಂದೆ ಏನು ಮಾಡಬಹುದು? ಯಾವ ಕೆಲಸ ಸೂಕ್ತ ಎಂದು ತಿಳಿಸಿ.**

ಅಲಿ, ದಾವಣಗೆರೆ.

ಪದವಿ ಕೋರ್ಸ್‌ನಲ್ಲಿ ಪತ್ರಿಕೋದ್ಯಮ ಓದುತ್ತಿರುವುದರಿಂದ ನಿಮಗೆ ಈ ವಲಯದಲ್ಲಿ ಆಸಕ್ತಿ, ಅಭಿರುಚಿ ಇದೆ ಎಂದು ಭಾವಿಸಿದ್ದೇನೆ. ಮಾಧ್ಯಮ ಕ್ಷೇತ್ರದಲ್ಲಿ ವೃತ್ತಿ ಜೀವನವನ್ನು ರೂಪಿಸಿಕೊಳ್ಳಲು ಪದವಿಯನ್ನು ಮಾಡುವುದರ ಜೊತೆಗೆ ವೃತ್ತಿ ಸಂಬಂಧಿತ ಕೌಶಲಗಳಾದ ಸಂವಹನ (ಓದುವಿಕೆ, ಬರವಣಿಗೆ, ಮಾತುಗಾರಿಕೆ, ನಿರೂಪಣೆ ಇತ್ಯಾದಿ), ಭಾಷಾ ಪರಿಣತಿ, ವಿಶ್ಲೇಷಾತ್ಮಕ ಕೌಶಲ, ದಿಟ್ಟತನ, ಸಮಯದ ನಿರ್ವಹಣೆ ಬೆಳೆಸಿಕೊಳ್ಳಬೇಕು. ಯಾವುದೇ ವಿಚಾರವನ್ನು ಒಪ್ಪಿಕೊಳ್ಳುವ ಮುನ್ನ ತನಿಖೆ ಅಥವಾ ಪರಿಶೋಧನೆ ಮಾಡುವ ಮನಸ್ಥಿತಿ ಇರಬೇಕು. ಇದಲ್ಲದೆ, ಬೇರೆ ವೃತ್ತಿಗಳಿಗೆ ಹೋಲಿಸಿದರೆ ಪತ್ರಕರ್ತರಿಗೆ ಹೆಚ್ಚಿನ ಸಾಮಾಜಿಕ ಕಳಕಳಿ ಮತ್ತು ಜವಾಬ್ದಾರಿಯಿರುವುದು ಸಹಜ; ಹಾಗಾಗಿ, ಪ್ರಾಮಾಣಿಕತೆ, ನಿಷ್ಠೆ, ಬದ್ಧತೆ ವ್ಯಕ್ತಿತ್ವದಲ್ಲಿ ಮೈಗೂಡಿಸಿಕೊಳ್ಳಬೇಕು. ಮುದ್ರಣ ಮಾಧ್ಯಮ (ದಿನ ಪತ್ರಿಕೆಗಳು, ನಿಯತಕಾಲಿಕೆಗಳು ಇತ್ಯಾದಿ), ಟೆಲಿವಿಷನ್, ರೇಡಿಯೊ, ಸಾಮಾಜಿಕ ಮಾಧ್ಯಮ, ವೆಬ್‌ಸೈಟ್ಸ್, ಬ್ಲಾಗ್ಸ್, ವಿಡಿಯೊ, ಪಾಡ್‌ಕಾಸ್ಟ್ ಇತ್ಯಾದಿ ವಲಯಗಳಲ್ಲಿ ಉದ್ಯೋಗಾವಕಾಶಗಳಿವೆ.

ನಿಮ್ಮ ಆಸಕ್ತಿ, ಅಭಿರುಚಿಯಂತೆ ವೃತ್ತಿ ಜೀವನವನ್ನು ರೂಪಿಸಿಕೊಳ್ಳಬಹುದು. ಹೆಚ್ಚಿನ ತಜ್ಞತೆಗಾಗಿ, ಸಂಬಂಧಿತ ವಿಷಯದಲ್ಲಿ ಡಿಪ್ಲೊಮಾ/ ಸ್ನಾತಕೋತ್ತರ ಕೋರ್ಸ್ ಮಾಡಬಹುದು.

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು **shikshana@prajavani.co.in** ಗೆ ಕಳಿಸಬಹುದು.

ಹೆಚ್ಚಿನ ಪ್ರಶ್ನೆ ಗಳಿಗೆ prajavani.net ನೋಡಿ

ಔಷಧಿಯ ಗುಣಗಳ ಕೀಟಭಕ್ಷಕ ಶಿಲೀಂಧ್ರ

ಕಾರ್ಡಿಸೆಪ್ಸ್

ಹತ್ತನೇ ತರಗತಿ ಮತ್ತು ಪಿಯುಸಿ ವಿಜ್ಞಾನ ವಿಷಯಗಳಲ್ಲಿ ಶಿಲೀಂಧ್ರಗಳ ಕುರಿತ ಪ್ರಸ್ತಾಪವಿದೆ. ಅಂಥ ಶಿಲೀಂಧ್ರಗಳ ಕುರಿತ ವಿಶೇಷ ಮಾಹಿತಿ ಈ ಅಂಕಣದಲ್ಲಿದೆ



ಡಾ ಎಸ್. ಶಿಶುಪಾಲ

ಶಿಲೀಂಧ್ರಗಳು ವಿಶಿಷ್ಟ ಜೀವಿಗಳು. ಭೂಮಿಯಲ್ಲಿನ ಜೈವಿಕ ಭೂರಸಾಯನ ಚಕ್ರವನ್ನು ನಿರ್ವಹಿಸುವಲ್ಲಿ ಶಿಲೀಂಧ್ರಗಳ ಪಾತ್ರ ಮಹತ್ವದ್ದು. ಪರಿಸರದಲ್ಲಿ ಉತ್ಪಾದನೆಯಾಗುವ ಸಾವಯವ ವಸ್ತುಗಳನ್ನು ಅಂದರೆ ನೆಲದಲ್ಲಿರುವ ಎಲೆಯಾಗಲಿ ಅಥವಾ ಸತ್ತ ಪ್ರಾಣಿಯ ಕಳೇಬರವನ್ನಾಗಲಿ ಸಂಪೂರ್ಣವಾಗಿ ಜೀರ್ಣಿಸುವ ಕೆಲಸ ಶಿಲೀಂಧ್ರಗಳದ್ದು. ಇವುಗಳನ್ನು ಪೂತಿ ಜೀವಿಗಳು (Saprophytes), ಸಸ್ಯ-ಪ್ರಾಣಿಗಳಿಗೆ ರೋಗಕಾರಕಗಳು (Pathogens) ಮತ್ತು ಸಹಜೀವಿಗಳಾಗಿ (Symbionts) ವಿಂಗಡಿಸಲಾಗಿದೆ. ಮಾನವ ಶಿಲೀಂಧ್ರಗಳನ್ನು ಮದ್ಯ, ಬ್ರೆಡ್, ಚೀಸ್. ಕಿಣ್ವಗಳು, ಪ್ರತಿಜೀವಕ (Antibiotics) ಮುಂತಾದವುಗಳ ತಯಾರಿಕೆಯಲ್ಲಿ ಬಳಸುತ್ತಿದ್ದಾನೆ. ಆದರೆ ಕೀಟಭಕ್ಷಕ ಶಿಲೀಂಧ್ರಗಳಿವೆ ಎಂದರೆ ಆಶ್ಚರ್ಯವಾಗಬಹುದಲ್ಲವೇ?

ಕೀಟಭಕ್ಷಕ ಶಿಲೀಂಧ್ರಗಳು

ಈ ರೀತಿಯ ಶಿಲೀಂಧ್ರಗಳು ದುಂಬಿ, ಮಿಡತೆ, ಚಿಟ್ಟೆ, ಪತಂಗ, ಸೊಳ್ಳೆ, ಕಣಜ, ಜೇಡ ಮುಂತಾದ ಕೀಟಗಳ ದೇಹವನ್ನು ಪ್ರವೇಶಿಸಿ ಸಂತಾನಾಭಿವೃದ್ಧಿ ಮಾಡಿ ಅವುಗಳ ಸಾವಿಗೆ ಕಾರಣಾಗುವುವು. ಕೀಟಗಳ ಸಂಖ್ಯೆಯನ್ನು ಹತೋಟಿಯಲ್ಲಿಡಲು ಇದೊಂದು ಜೈವಿಕ ನಿಯಂತ್ರಣ ಕ್ರಮ. ಇಂತಹ ಶಿಲೀಂಧ್ರಗಳನ್ನು ಕೀಟರೋಗಕಾರಕ ಶಿಲೀಂಧ್ರಗಳೆಂದು (Entomopathogenic fungi) ವಿಗಂಡಿಸಲಾಗಿದೆ. ಈ ಶಿಲೀಂಧ್ರಗಳನ್ನು ಮಾನವ ಜೈವಿಕ ಕೀಟನಾಶಕವಾಗಿ (Biopesticide) ಕೃಷಿಯಲ್ಲಿ ಬಳಸಿಕೊಳ್ಳುತ್ತಿದ್ದಾನೆ. ಇದರಿಂದ ರಾಸಾಯನಿಕ ಕೀಟನಾಶಕಗಳಿಂದಾಗುವ ದುಷ್ಪರಿಣಾಮಗಳನ್ನು ತಡೆಗಟ್ಟಬಹುದು.

ಈ ಗುಂಪಿಗೆ ಸೇರಿರುವ ಒಂದು ಸದಸ್ಯನೆಂದರೆ ಕಾರ್ಡಿಸೆಪ್ಸ್ (Cordyceps). ಹಿಮಾಲಯ ಪರ್ವತ ಶ್ರೇಣಿಗಳ ತಪ್ಪಲಿನಲ್ಲಿರುವ ಭಾರತ, ನೇಪಾಳ, ಟಿಬೆಟ್, ಚೀನಾ, ಭೂತಾನ್ ಮುಂತಾದ ದೇಶಗಳಲ್ಲಿ ಕಂಡು ಬರುವ ಈ ವಿಶೇಷ ಅಣಬೆಯನ್ನು ಈಗ ಔಷಧಿಯ ರೂಪದಲ್ಲಿ ಬಳಸಲಾಗುತ್ತಿದೆ. ಕರ್ನಾಟಕದ ಪಶ್ಚಿಮಘಟ್ಟಗಳಲ್ಲಿಯೂ ಈ ಅಣಬೆಗಳು ಇರುವ ಬಗ್ಗೆ ಮಾಹಿತಿಯಿದೆ. ಗಾಳಿಯಿಂದ ಬರುವ ಕಾರ್ಡಿಸೆಪ್ಸ್ ಬೀಜಕಣಗಳು ತಮ್ಮ ಅತಿಥೇಯ ಕೀಟಗಳ ಮೇಲೆ ಬಿದ್ದು ಮೊಳಕೆಯೊಡೆಯುತ್ತವೆ. ಇಂತಹ ಸೋಂಕು ತಗುಲಿದ ಕೀಟಗಳು ಚಳಿಗಾಲದಲ್ಲಿ ಶಿಶಿರಸುಪ್ತಿ ಅಥವಾ ಚಳಿನಿದ್ದೆ (Hibernation) ಗೊಳಗಾಗುತ್ತವೆ. ಸೋಂಕಿತ ಕೀಟದ ದೇಹದಲ್ಲಿ ಶಿಲೀಂಧ್ರದ ಎಳೆಗಳು ಬೆಳೆದು ಕೀಟದ ದೇಹವನ್ನು ಮಮ್ಮಿಯಾಗಿಸುತ್ತವೆ (ಚಿತ್ರ 1 a). ನಂತರ 15 ರಿಂದ 20 ದಿನಗಳಲ್ಲಿ ಸೋಂಕಿತ ಕೀಟವನ್ನು ಸಂಪೂರ್ಣವಾಗಿ ಆವರಿಸುವ ಶಿಲೀಂಧ್ರವು ಅದರ ಮೆದುಳನ್ನು ನಿಯಂತ್ರಿಸುತ್ತದೆ. ನಡೆಯಲಾಗದ ಕೀಟಗಳ ದೇಹದಿಂದ ಅಣಬೆ ಹುಟ್ಟುತ್ತದೆ (ಚಿತ್ರ-1 b).

(ಮಾಹಿತಿ ಮೂಲ: ವಿವಿಧ ಸಂಶೋಧನಾ ಲೇಖನಗಳಿಂದ)

ಲೇಖಕರು: ದಾವಣಗೆರೆ ವಿಶ್ವವಿದ್ಯಾಲಯದ ಸೂಕ್ಷ್ಮ ಜೀವಿಶಾಸ್ತ್ರ ವಿಭಾಗದ ಪ್ರಾಧ್ಯಾಪಕರು.



ಚಿತ್ರ 1: ಕಾರ್ಡಿಸೆಪ್ಸ್ ಅಣಬೆ
(a) ಕೀಟದ ದೇಹದಲ್ಲಿ ವ್ಯಾಪಿಸಿ ಮಮ್ಮಿಯನ್ನಾಗಿಸಿರುವುದು.
(b) ಮಣ್ಣಿನಲ್ಲಿ ಬಿದ್ದ ಕೀಟದ ದೇಹದಿಂದ ಅಣಬೆ ಹುಟ್ಟಿರುವುದು.
(c) ಜೈವಿಕ ತಂತ್ರಜ್ಞಾನ ಸಂಸ್ಥೆಯ ಪ್ರಯೋಗಾಲಯದಲ್ಲಿ ಬೆಳೆಸಿರುವುದು.

ಚಿತ್ರ ಕೃಪೆ: ಹೊಲ್ಗರ್ ಕ್ರಿಸ್ಟ್

ಕಾರ್ಡಿಸೆಪ್ಸ್ ಔಷಧಿಯ ಗುಣಗಳು

ಈ ಅಣಬೆಯನ್ನು ಹೃದಯ, ಪಿತ್ತಕೋಶ ಮತ್ತು ಮೂತ್ರಕೋಶ ಸಂಬಂಧಿ ಕಾಯಿಲೆಗಳನ್ನು ಗುಣಪಡಿಸಲು ಬಳಸಲಾಗುತ್ತಿದೆ. ಕಾರ್ಡಿಸೆಪ್ಸ್ ಮಿಲಿಟಾರಿಸ್ ಎಂಬ ಪ್ರಭೇದವನ್ನು ಔಷಧಿಗಳ ತಯಾರಿಕೆಯಲ್ಲಿ ಹೆಚ್ಚಾಗಿ ಬಳಸಲಾಗುತ್ತಿದೆ. ಈ ಅಣಬೆಯಲ್ಲಿ ಕಾರ್ಡಿಮಿನ್, ಲೊವಸ್ಟಾಟಿನ್, ರ್‍ಗೊಸ್ಟಿರಾಲ್, ಮೈರಿಯೊಸಿನ್, ಮೆಲನಿನ್, ಪೆನ್ಟೊಸ್ಟಾಟಿನ್, ಸೈಕ್ಲೊಸ್ಪೊರಿನ್ ಮುಂತಾದ ಔಷಧೀಯ ಗುಣಗಳ ರಾಸಾಯನಿಕಗಳನ್ನು ವಿಜ್ಞಾನಿಗಳು ಪತ್ತೆಹಚ್ಚಿದ್ದಾರೆ. ಈ ರಾಸಾಯನಿಕಗಳು ಉರಿಯೂತ ತಡೆಗಟ್ಟಲು, ದೇಹದ ಪ್ರತಿರೋಧಕ ಶಕ್ತಿ ಹೆಚ್ಚಿಸಲು, ದೇಹದಲ್ಲಿ ಕೊಬ್ಬಿನ ಶೇಖರಣೆಯನ್ನು ತಗ್ಗಿಸಲು, ಪ್ರತಿಜೀವಕಗಳಾಗಿ, ಮಧುಮೇಹವನ್ನು ತಡೆಗಟ್ಟಲು, ಕ್ಯಾನ್ಸರ್ ಜೀವಕೋಶಗಳ ಬೆಳವಣಿಗೆ ತಡೆಯಲು, ರಕ್ತ ಶುದ್ಧಿಗಾಗಿ, ಮೂತ್ರಕೋಶದ ಆರೋಗ್ಯ, ಪಿತ್ತಕೋಶದ ರಕ್ಷಣೆ, ಕ್ರೀಡಾಪಟುಗಳ ಸಾಮರ್ಥ್ಯ ವೃದ್ಧಿ ಮುಂತಾದವುಗಳಿಗೆ ಉಪಯೋಗಿಸಲಾಗುತ್ತಿದೆ.

ಜೈವಿಕ ತಂತ್ರಜ್ಞಾನ ಕಂಪನಿಗಳು ಈ ಅಣಬೆಯನ್ನು ಗಾಜಿನ ಬಾಟಲಿಗಳಲ್ಲಿ ಬೆಳೆಸುವ ತಂತ್ರಜ್ಞಾನವನ್ನು ಕಂಡುಹಿಡಿದಿದ್ದಾರೆ. ಕಾರ್ಡಿಸೆಪ್ಸ್ ಆಧಾರಿತ ಪೇಯಗಳು, ಪುಡಿಗಳು, ಮಾತ್ರೆಗಳು ಮಾರುಕಟ್ಟೆಯಲ್ಲಿ ಈಗಾಗಲೇ ಲಭ್ಯವಿವೆ. ಮಹತ್ತರವಾದ ಔಷಧಿಯ ಗುಣಗಳ ಆಗರವಾಗಿರುವ ಕಾರ್ಡಿಸೆಪ್ಸ್ ಅಣಬೆಯನ್ನು ಅಗತ್ಯಕ್ಕೆ ತಕ್ಕಂತೆ ಬಳಸಿಕೊಳ್ಳುವುದರಲ್ಲಿ ಮಾನವನ ಜಾಣತನ ಅಡಗಿದೆ.

ವಿದ್ಯಾರ್ಥಿ ವೇತನ ಕೈಪಿಡಿ

- **ಸಕ್ಷಮ್ ಸ್ಕಾಲರ್‌ಶಿಪ್ ಪ್ರೋಗ್ರಾಂ ಫಾರ್ ಡ್ರೈವರ್ಸ್ ಚಿಲ್ಡ್ರನ್**

ವಿವರ : ‘ಮಹೀಂದ್ರಾ ಫೈನಾನ್ಸ್ ಆಂಧ್ರಪ್ರದೇಶ, ತಮಿಳುನಾಡು, ಕೇರಳ ಮತ್ತು ತೆಲಂಗಾಣಕ್ಕೆ ಸೇರಿದ ವಿದ್ಯಾರ್ಥಿಗಳಿಂದ ‘ವಾಹನ ಚಾಲಕರ ಮಕ್ಕಳಿಗಾಗಿ ಸಕ್ಷಮ್ ವಿದ್ಯಾರ್ಥಿವೇತನ ಕಾರ್ಯಕ್ರಮ’ಕ್ಕಾಗಿ ಅರ್ಜಿಗಳನ್ನು ಆಹ್ವಾನಿಸುತ್ತದೆ. 1ನೇ ತರಗತಿಯಿಂದ ಸ್ನಾತಕೋತ್ತರ ಹಂತದವರೆಗೆ ವಿದ್ಯಾಭ್ಯಾಸ ಮಾಡುತ್ತಿರುವ, ಚಾಲನಾ ಪರವಾನಗಿ ಹೊಂದಿರುವ ಚಾಲಕರ ಮಕ್ಕಳಿಗೆ ಆರ್ಥಿಕ ನೆರವು ನೀಡಲು ಈ ಕಾರ್ಯಕ್ರಮ ರೂಪಿಸಲಾಗಿದೆ. (ಎಲ್ಲಾ ಲಘು ಮೋಟಾರು ವಾಹನಗಳು ಮತ್ತು ಸಣ್ಣ ವಾಣಿಜ್ಯ ವಾಹನಗಳಾದ ಟ್ಯಾಕ್ಸಿ, ಜೀಪ್, ಕಾರು ಮತ್ತು ಡೆಲಿವರಿ ವ್ಯಾನ್‌ಗಳಾದ ಪಿಕಪ್, ಮ್ಯಾಜಿಕ್, ಸ್ಕೂಲ್ ವ್ಯಾನ್, ಇತ್ಯಾದಿ ವಾಹನ ಚಾಲಕರಿಗೆ ಈ ಕಾರ್ಯಕ್ರಮ ಅನ್ವಯಿಸುತ್ತದೆ)

ಅರ್ಹತೆ: ಅರ್ಜಿದಾರರು ಪ್ರಸ್ತುತ ಆಂಧ್ರಪ್ರದೇಶ, ತಮಿಳುನಾಡು, ಕೇರಳ ಮತ್ತು ತೆಲಂಗಾಣ ರಾಜ್ಯಗಳಲ್ಲಿ 1 ನೇ ತರಗತಿಯಿಂದ ಸ್ನಾತಕೋತ್ತರ ಮಟ್ಟದಲ್ಲಿ ಓದುತ್ತಿರಬೇಕು. 9 ನೇ ತರಗತಿಯಿಂದ ಮೇಲ್ಪಟ್ಟ ತರಗತಿಗಳಲ್ಲಿ ಅಧ್ಯಯನ ಮಾಡುತ್ತಿರುವ ಅಭ್ಯರ್ಥಿಗಳು ಹಿಂದಿನ ಅಂತಿಮ ಪರೀಕ್ಷೆಯಲ್ಲಿ ಶೇ 60 ಅಥವಾ ಹೆಚ್ಚಿನ ಅಂಕಗಳನ್ನು ಗಳಿಸಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯ ₹ 4 ಲಕ್ಷ ಮೀರಿರಬಾರದು.

ಆರ್ಥಿಕ ನೆರವು: 1 ವರ್ಷಕ್ಕೆ ₹ 5,000 ದಿಂದ ₹ 20,000 ವರೆಗಿನ ವಿದ್ಯಾರ್ಥಿವೇತನ

ಅರ್ಜಿ ಸಲ್ಲಿಸಲು ಕೊನೆ ದಿನ: 31-08-2022

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ : www.b4s.in/praja/SKSP1

- **ಸೆನ್ಸೊಡೈನ್ ಐಡಿಎ ಶೈನಿಂಗ್ ಸ್ಟಾರ್ ಸ್ಕಾಲರ್‌ಶಿಪ್ ಪ್ರೋಗ್ರಾಂ**

ವಿವರ : ಗ್ಲಾಕ್ಸೊ ಸ್ಮಿತ್ ಕ್ಲೈನ್ ಕನ್ಸ್ಯೂಮರ್ ಹೆಲ್ತ್‌ಕೇರ್ (ಹ್ಯಾಲಿಯನ್ ಗ್ರೂಪ್ ಆಫ್ ಕಂಪನೀಸ್), ಭಾರತದಾದ್ಯಂತ ಪ್ರತಿಭಾನ್ವಿತ ಮತ್ತು ದಂತ ವೈದ್ಯಕೀಯ ಪದವಿ (ಬಿಡಿಎಸ್) ವಿದ್ಯಾರ್ಥಿಗಳಿಗೆ ನೆರವಾಗುವುದಕ್ಕಾಗಿ ’ಸೆನ್ಸೊಡೈನ್ ಐಡಿಎ ಶೈನಿಂಗ್ ಸ್ಟಾರ್ ಸ್ಕಾಲರ್‌ಶಿಪ್ ಪ್ರೋಗ್ರಾಂ’ ರೂಪಿಸಿದೆ.



ಅರ್ಹತೆ: ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಕಾಲೇಜುಗಳಲ್ಲಿ ಮೊದಲ ವರ್ಷದ ದಂತ ವೈದ್ಯಕೀಯ ಪದವಿಗೆ ಸೇರಿರುವ (ಬಿಡಿಎಸ್) ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿದಾರರು ತಮ್ಮ ಎಸ್ಸೆಸ್ಸೆಲ್ಸಿ(ಹೈಯರ್ ಸೆಕೆಂಡರಿ ಶಿಕ್ಷಣದಲ್ಲಿ) ಶೇ 60 ಅಂಕಗಳನ್ನು ಪಡೆದಿರಬೇಕು. ಪದವಿ ಕೋರ್ಸ್‌ನ 4 ವರ್ಷಗಳ ಅವಧಿಗೂ ಶಿಷ್ಯವೇತನ ಬಯಸುವವರು, ಪ್ರತಿ ಸೆಮಿಸ್ಟರ್/ ವರ್ಷದ ಪರೀಕ್ಷೆಯಲ್ಲಿ ಶೇ 60 ಅಂಕವನ್ನು ಪಡೆದಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ₹8 ಲಕ್ಷ ಮೀರಿರಬಾರದು.

ಆರ್ಥಿಕ ನೆರವು: ವಾರ್ಷಿಕ ರೂ.1,05,000, 4 ವರ್ಷಗಳವರೆಗೆ

ಅರ್ಜಿ ಸಲ್ಲಿಸಲು ಕೊನೆ ದಿನ: 31-08-2022

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗೆ: www.b4s.in/praja/SSPPS1




ಸ್ವಾತಂತ್ರ್ಯೋತ್ಸವದ ಅಂಗವಾಗಿ ಲಾಲ್‌ಬಾಗ್ ಗಾಜಿನ ಮನೆಯಲ್ಲಿ ಡಾ.ರಾಜ್‌ಕುಮಾರ್ ಮತ್ತು ಪುನೀತ್ ರಾಜ್‌ಕುಮಾರ್ ಅವರ ಸ್ಮರಣಾರ್ಥ ಆಯೋಜಿಸಿರುವ ಫಲಪುಷ್ಪ ಪ್ರದರ್ಶನವನ್ನು ವೀಕ್ಷಿಸಲು ಭಾನುವಾರ ಬಂದ ಜನ ಸಾಗರ. 5,322 ಮಕ್ಕಳು ಸೇರಿದಂತೆ 43,056 ಮಂದಿ ಭೇಟಿ ನೀಡಿದ್ದರು. ಒಟ್ಟು ₹29,62,855 ಹಣ ಸಂಗ್ರಹವಾಗಿದೆ. – ಪ್ರಜಾವಾಣಿ ಚಿತ್ರಗಳು/ ಎಸ್.ಕೆ. ದಿನೇಶ್

ನೂತನ ಎಸ್‌.ಪಿಯಾಗಿ ಮಲ್ಲಿಕಾರ್ಜುನ ಅಧಿಕಾರ ಸ್ವೀಕಾರ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಬೆಂಗಳೂರು ಗ್ರಾಮಾಂತರ ಜಿಲ್ಲಾ ಎಸ್‌.ಪಿ ಕಚೇರಿಯಲ್ಲಿ ಭಾನುವಾರ ನೂತನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ಮಲ್ಲಿಕಾರ್ಜುನ ಬಾಲದಂಡಿ ಅವರು, ನಿರ್ಗಮಿತ ಎಸ್.ಪಿ. ಕೆ. ವಂಶಿಕೃಷ್ಣ ಅವರಿಂದ ಅಧಿಕಾರ ಸ್ವೀಕರಿಸಿದರು.

ವಂಶಿಕೃಷ್ಣ ಅವರ ಸ್ಥಾನಕ್ಕೆ ಬೆಂಗಳೂರು ನಗರ ಗುಪ್ತಚರ ವಿಭಾಗದಲ್ಲಿ ಪೊಲೀಸ್ ಅಧೀಕ್ಷಕರಾಗಿದ್ದ ಮಲ್ಲಿಕಾರ್ಜುನ ಬಾಲದಂಡಿ ಅವರನ್ನು ನೇಮಿಸಲಾಗಿದೆ. ಈ ಹಿಂದೆ ಅವರು ಬೆಂಗಳೂರು ಗ್ರಾಮಾಂತರ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದರು.

ಬಾಗಲೂರು ಬಳಿ ಘಟನೆ • ಮಳಿಗೆ ಮಾಲೀಕ ಸೇರಿ ಇಬ್ಬರ ಬಂಧನ

ಕಳ್ಳನೆಂದುಕೊಂಡು ಕಾರ್ಮಿಕನ ಕೊಂದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳ್ಳತನಕ್ಕೆ ಬಂದಿರಬಹುದೆಂದು ಭಾವಿಸಿ ಕಾರ್ಮಿಕ ಅಮರನಾಥ್ ಮಹತೋ (51) ಎಂಬುವರನ್ನು ಕೊಲೆ ಮಾಡಲಾಗಿದ್ದು, ಈ ಸಂಬಂಧ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಕರುಣಾಕರನ್ (67) ಹಾಗೂ ಇವರ ತಮ್ಮ ಶ್ರೀನಿವಾಸ್ (33) ಬಂಧಿತರು. ಪ್ರಮುಖ ಆರೋಪಿಯಾದ ಇನ್ನೊಬ್ಬ ತಮ್ಮ ಗಣೇಶ್ (27) ತಲೆಮರೆಸಿಕೊಂಡಿದ್ದಾನೆ' ಎಂದು ಪೊಲೀಸರು ಹೇಳಿದರು.

'ಮೃತ ಅಮರನಾಥ್, ಬಿಹಾರದವರು. 20 ವರ್ಷಗಳ ಹಿಂದೆಯೇ ಕುಟುಂಬ ಸಮೇತ ಬೆಂಗಳೂರಿಗೆ ಬಂದಿದ್ದರು. ಗಾರೆ ಕೆಲಸ ಮಾಡುತ್ತಿದ್ದ ಅಮರನಾಥ್, ಯಲಹಂಕದ ಮಾರುತಿನಗರದಲ್ಲಿ ನೆಲೆಸಿದ್ದರು. ಇವರ ಕೊಲೆ ಸಂಬಂಧ ಮಗ ದೂರು ನೀಡಿದ್ದಾರೆ. ಅದರನ್ವಯ ಪ್ರಕರಣ ದಾಖಲಿಸಿಕೊಂಡು ಇಬ್ಬರನ್ನು ಬಂಧಿಸಲಾಗಿದೆ' ಎಂದು ತಿಳಿಸಿದರು.

ಮುಖ್ಯಾಂಶಗಳು
- ಅಮರನಾಥ್ ಮಹತೋ ಎಂಬಾತ ಕೊಲೆಯಾದವ
- ತಲೆಮರೆಸಿಕೊಂಡಿರುವ ಪ್ರಮುಖ ಆರೋಪಿ ಗಣೇಶ್
- ಪದೇ ಪದೇ ಕಳ್ಳತನ; ಕಾದು ಕುಳಿತು ಹತ್ಯೆ ಮಾಡಿದ ಆರೋಪಿಗಳು

ಕಾದು ಕುಳಿತು ಹೊಡೆದರು: 'ಆರೋಪಿ ಕರುಣಾಕರನ್, ದ್ವಾರಕಾನಗರದಲ್ಲಿ 'ಮಂಜುನಾಥ್ ಎಂಜಿನಿಯರ್ ವರ್ಕ್ಸ್' ಹೆಸರಿನ ಮಳಿಗೆ ಇಟ್ಟುಕೊಂಡಿದ್ದಾನೆ. ಈತನ ಅಂಗಡಿಯಲ್ಲಿ ಪದೇ ಪದೇ ಕಳ್ಳತನ ಆಗುತ್ತಿತ್ತು. ಇದರಿಂದ ನಷ್ಟ ಅನುಭವಿಸಿದ್ದ ಈತ, ಸಹೋದರರ ಜೊತೆ ಸೇರಿ ಕಳ್ಳನನ್ನು ಹಿಡಿಯಲು ಮುಂದಾಗಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಶುಕ್ರವಾರ (ಆಗಸ್ಟ್ 5) ರಾತ್ರಿ ಮಳಿಗೆಗೆ ಬೀಗ ಹಾಕಿ ಮನೆಗೆ ಹೋಗಿದ್ದ ಕರುಣಾಕರನ್ ಹಾಗೂ ಸಹೋದರರು, ಶನಿವಾರ ನಸುಕಿನಲ್ಲಿ ಮಳಿಗೆ ಬಳಿ ಬಂದಿದ್ದರು. ಯಾರಾದರೂ ಕಳ್ಳರು ಬರುತ್ತಾರೆಯೇ ಎಂಬುದನ್ನು ಕಾಯುತ್ತ ದೂರದಲ್ಲೇ ಅಡಗಿ ಕುಳಿತಿದ್ದರು. ಅದೇ ಸಂದರ್ಭದಲ್ಲೇ ಅಮರನಾಥ್, ಮಳಿಗೆ ಬಳಿ ಬಂದಿದ್ದರು.'

'ಅಮರನಾಥ್ ಕಳ್ಳತನಕ್ಕೆ ಬಂದಿರಬಹುದೆಂದು ಭಾವಿಸಿದ್ದ ಆರೋಪಿಗಳು, ಸುತ್ತುವರಿದಿದ್ದರು. ನಂತರ, ದೊಣ್ಣೆಗಳಿಂದ ಹೊಡೆದಿದ್ದರು. ತೀವ್ರ ಗಾಯಗೊಂಡಿದ್ದ ಅಮರನಾಥ್ ಅವರನ್ನು ಆರೋಪಿಗಳೇ ಯಲಹಂಕ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದಿದ್ದರು. ಆದರೆ, ಮಾರ್ಗಮಧ್ಯೆಯೇ ಕಾರ್ಮಿಕ ಮೃತಪಟ್ಟಿದ್ದರು' ಎಂದೂ ತಿಳಿಸಿವೆ.

ಪೊಲೀಸರಿಂದ ತಪ್ಪಿಸಿಕೊಳ್ಳಲು ನಾಟಕ: 'ಕೊಲೆ ಆರೋಪ ತಮ್ಮ ಮೇಲೆ ಬಾರದಂತೆ ನಾಟಕವಾಡಿದ್ದ ಆರೋಪಿಗಳು, 'ರಸ್ತೆಯಲ್ಲಿ ಬಿದ್ದಿದ್ದ ವ್ಯಕ್ತಿಯನ್ನು ಆಸ್ಪತ್ರೆಗೆ ತಂದು ಸೇರಿಸಿದ್ದೇವೆ' ಎಂಬುದಾಗಿ ವೈದ್ಯರಿಗೆ ಹೇಳಿದ್ದರು' ಎಂದು ಮೂಲಗಳು ವಿವರಿಸಿವೆ.

'ಮೃತದೇಹ ಆಸ್ಪತ್ರೆಯಲ್ಲೇ ಬಿಟ್ಟು ಆರೋಪಿಗಳು ಪರಾರಿಯಾಗಿದ್ದರು. ಅಮರನಾಥ್ ಅವರ ಮಗ, ಕೊಲೆ ಆರೋಪದಡಿ ದೂರು ನೀಡಿದ್ದರು. ತನಿಖೆ ಕೈಗೊಂಡಾಗ ಆರೋಪಿಗಳ ಕೃತ್ಯ ಬಯಲಾಯಿತು. ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದಾಗ ತಪ್ಪೊಪ್ಪಿಕೊಂಡರು. ಇನ್ನೊಬ್ಬ ಆರೋಪಿ ಗಣೇಶ್ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ' ಎಂದು ಮೂಲಗಳು ಹೇಳಿವೆ.

ಸುದ್ದಿ 2 ನಿಮಿಷ

ಡ್ರಗ್ಸ್ ಪಾರ್ಟಿ: ಸಿದ್ಧಾಂತ್ ಕಪೂರ್‌ಗೆ ಮತ್ತೊಮ್ಮೆ ನೋಟಿಸ್

ಬೆಂಗಳೂರು: ಟ್ರಿನಿಟಿ ವೃತ್ತದಲ್ಲಿರುವ ದಿ ಪಾರ್ಕ್ ಹೋಟೆಲ್‌ನಲ್ಲಿ ಇತ್ತೀಚೆಗೆ ನಡೆದಿದ್ದ ಡ್ರಗ್ಸ್ ಪಾರ್ಟಿ ಪ್ರಕರಣ ಸಂಬಂಧ ಆರೋಪಿ ಸಿದ್ಧಾಂತ್ ಕಪೂರ್ ಅವರಿಗೆ ಪೊಲೀಸರು ಮತ್ತೊಮ್ಮೆ ನೋಟಿಸ್ ನೀಡಿದ್ದಾರೆ.

ಜೂನ್ 12ರಂದು ರಾತ್ರಿ ಹೋಟೆಲ್‌ನ ಬಾರ್ ಮೇಲೆ ದಾಳಿ ಮಾಡಿದ್ದ ಪೊಲೀಸರು, ಡಿಸ್ಕ್ ಜಾಕಿ (ಡಿ.ಜೆ) ಆಗಿದ್ದ ಬಾಲಿವುಡ್ ನಟ ಸಿದ್ಧಾಂತ್ ಕಪೂರ್ ಸೇರಿದಂತೆ ಐವರನ್ನು ಬಂಧಿಸಿದ್ದರು. ಅವರ ಹೇಳಿಕೆ ಪಡೆದು, ಠಾಣೆ ಜಾಮೀನು ಮೇಲೆ ಬಿಡುಗಡೆ ಮಾಡಿದ್ದರು.

'ಇದೀಗ ಸಿದ್ಧಾಂತ್ ಅವರಿಗೆ ಎರಡನೇ ಬಾರಿ ನೋಟಿಸ್ ನೀಡಿರುವ ಪೊಲೀಸರು, ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದ್ದಾರೆ. ನೋಟಿಸ್‌ಗೆ ಪ್ರತಿಕ್ರಿಯಿಸಿರುವ ಸಿದ್ಧಾಂತ್, ಆಗಸ್ಟ್ 15ರ ನಂತರ ವಿಚಾರಣೆಗೆ ಬರುವುದಾಗಿ ಕಾಲಾವಕಾಶ ಕೋರಿದ್ದಾರೆ.

'ಡ್ರಗ್ಸ್ ಪಾರ್ಟಿ ಸಂಬಂಧ ತನಿಖೆ ಮುಂದುವರಿದಿದೆ. ಕೆಲ ಮಾಹಿತಿಗಳ ಸ್ಪಷ್ಟನೆ ಪಡೆಯಲು ಸಿದ್ಧಾಂತ್ ಅವರ ವಿಚಾರಣೆ ನಡೆಸಬೇಕಿದೆ. ಹೀಗಾಗಿ, ನೋಟಿಸ್ ಕಳುಹಿಸಲಾಗಿದೆ. ಅವರು ಹಾಜರಾದ ನಂತರ ವಿಚಾರಣೆ ನಡೆಸಿ ಮುಂದಿನ ಕ್ರಮ ಜರುಗಿಸಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಹ್ಯಾಂಡಲ್ ಲಾಕ್ ಮುರಿದು ಕಳ್ಳತನ: ಇಬ್ಬರ ಬಂಧನ



ಬೆಂಗಳೂರು: ಸಾರ್ವಜನಿಕ ಸ್ಥಳ ಹಾಗೂ ಮನೆ ಮುಂದೆ ನಿಲ್ಲಿಸುತ್ತಿದ್ದ ವಾಹನಗಳನ್ನು ಕದಿಯುತ್ತಿದ್ದ ಇಬ್ಬರು ಆರೋಪಿಗಳನ್ನು ಜ್ಞಾನಭಾರತಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಉತ್ತರಹಳ್ಳಿಯ ಭರತ್ ಅಲಿಯಾಸ್ ಕಳ್ಳ ಭರತ್ (20) ಹಾಗೂ ಬಾಗೇಪಲ್ಲಿ ತಾಲ್ಲೂಕಿನ ಪ್ರಸನ್ನಕುಮಾರ್ ಅಲಿಯಾಸ್ ಗಬ್ಬರ್ (26) ಬಂಧಿತರು. ಇವರಿಂದ ₹ 5.95 ಲಕ್ಷ ಮೌಲ್ಯದ 6 ದ್ವಿಚಕ್ರ ವಾಹನ ಹಾಗೂ ಬೊಲೆರೊ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ನಗರದಲ್ಲಿ ರಾತ್ರಿ ಸಂಚರಿಸುತ್ತಿದ್ದ ಆರೋಪಿಗಳು, ವಾಹನಗಳನ್ನು ಗುರುತಿಸಿ ಹ್ಯಾಂಡಲ್ ಲಾಕ್ ಮುರಿದು ಕಳ್ಳತನ ಮಾಡುತ್ತಿದ್ದರು. ಇವುಗಳನ್ನು ಮಾರಾಟ ಮಾಡಿ, ಹಣ ಸಂಪಾದಿಸುತ್ತಿದ್ದರು. ಅದರಲ್ಲೇ ಐಷಾರಾಮಿ ಜೀವನ ನಡೆಸುತ್ತಿದ್ದರು' ಎಂದೂ ತಿಳಿಸಿದರು.

'ಮಾಗಡಿ ರಸ್ತೆ, ಬಂಡೆಪಾಳ್ಯ, ಕೋಡಿಗೆಹಳ್ಳಿ ಹಾಗೂ ಬಿಡದಿ ಠಾಣೆ ವ್ಯಾಪ್ತಿಯಲ್ಲೂ ಆರೋಪಿಗಳು ವಾಹನ ಕದ್ದಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದೂ ಹೇಳಿದರು.

'ಬಡವರಿಗೆ ಲಭಿಸದ ಶುದ್ಧ ನೀರು'

ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾ. ಎಂ.ಎನ್‌.ವೆಂಕಟಾಚಲಯ್ಯ ಬೇಸರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಂತ್ರಜ್ಞಾನ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆಗಳು ನಡೆದಿದ್ದರೂ ದೇಶದ ಬಡವರಿಗೆ ಇನ್ನೂ ಶುದ್ಧ ಕುಡಿಯುವ ನೀರು ಲಭಿಸುತ್ತಿಲ್ಲ' ಎಂದು ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ ಬೇಸರ ವ್ಯಕ್ತಪಡಿಸಿದರು.

ನಗರದ ಪರಿಮಳ ಗೆಳೆಯರ ಬಳಗದ 47ನೇ ವಾರ್ಷಿಕೋತ್ಸವ ಹಾಗೂ ಲೇಖಕ ಡಾ.ಎಸ್.ಜಯಸಿಂಹ ಅವರ 'ಕನಕದಾಸ ದರ್ಶನ' (ಕನಕದಾಸರ ಜೀವನ ಸಾಧನೆ, ಕೃತಿಗಳ ಪರಿಚಯ ಮತ್ತು ಸಂಗ್ರಹ) ಕೃತಿ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

'ರಾಷ್ಟ್ರದ ಆಗುಹೋಗುಗಳನ್ನು ಹಲವು ವರ್ಷದಿಂದ ನಾನು ಕಂಡಿದ್ದೇನೆ. ತಂತ್ರಜ್ಞಾನ ಕ್ಷೇತ್ರವು ಸಾಕಷ್ಟು ಬೆಳೆದಿದೆ. ಹಳ್ಳಿಗಾಡಿನ ಜನರಿಗೆ ಸುಲಭವಾಗಿ ಮೊಬೈಲ್ ಹಾಗೂ ಇಂಟರ್‌ನೆಟ್ ಸೌಲಭ್ಯಗಳು ಲಭಿಸುತ್ತಿವೆ. ಆದರೆ, ಶುದ್ಧ ನೀರು ಮಾತ್ರ ಮರೀಚಿಕೆ ಆಗಿದೆ. ರಾಜಕಾರಣಿಗಳು ಈ ಬಗ್ಗೆ ಇಚ್ಛಾಶಕ್ತಿ ತೋರಬೇಕು. ಪ್ರತಿಯೊಬ್ಬರಿಗೂ ಶುದ್ಧ ನೀರು ಲಭಿಸುವಂತೆ ವ್ಯವಸ್ಥೆ ಆಗಬೇಕು' ಎಂದು ಸಲಹೆ ನೀಡಿದರು.



ಬೆಂಗಳೂರಿನಲ್ಲಿ ಭಾನುವಾರ ಪರಿಮಳ ಗೆಳೆಯರ ಬಳಗದಿಂದ ನಡೆದ ಕಾರ್ಯಕ್ರಮದಲ್ಲಿ ಡಾ.ಎಸ್‌.ಜಯಸಿಂಹ ಅವರ 'ಕನಕದಾಸ ದರ್ಶನ' ಕೃತಿಯನ್ನು ಉಡುಪಿಯ ಪಲಿಮಾರು ಮಠಾಧೀಶ ವಿದ್ಯಾಧೀಶತೀರ್ಥ ಸ್ವಾಮೀಜಿ ಬಿಡುಗಡೆ ಮಾಡಿದರು. ನಿವೃತ್ತ ಲೋಕಾಯುಕ್ತ ಎನ್‌.ಸಂತೋಷ್ ಹೆಗ್ಡೆ, ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಂ.ಎನ್‌. ವೆಂಕಟಾಚಲಯ್ಯ, ಲೇಖಕ ಡಾ.ಎಸ್‌.ಜಯಸಿಂಹ, ಸುವಿದ್ಯೇಂದ್ರತೀರ್ಥ ಸ್ವಾಮೀಜಿ ಹಾಜರಿದ್ದರು – ಪ್ರಜಾವಾಣಿ ಚಿತ್ರ

ಪರಿಮಳ ಗೆಳೆಯರ ಬಳಗದ ಕಾರ್ಯ ಚಟುವಟಿಕೆಯನ್ನು ಹತ್ತಿರದಿಂದ ನೋಡಿದ್ದೇನೆ. ಒಳ್ಳೆಯ ಕೆಲಸ ಮಾಡುತ್ತಿದೆ. ಕನಕದಾಸ ದರ್ಶನ ಕೃತಿ ಉತ್ತಮವಾಗಿದೆ ಎಂದು ಬಣ್ಣಿಸಿದರು.

ಉಡುಪಿಯ ಪಲಿಮಾರು ಮಠದ ವಿದ್ಯಾಧೀಶತೀರ್ಥ ಸ್ವಾಮೀಜಿ ಮಾತನಾಡಿ, 'ರಾಘವೇಂದ್ರ ತೀರ್ಥರ ಆರಾಧನೆಯ ಪರ್ವಕಾಲ ಇದು. ಪ್ರತಿ ಮನೆಗಳಲ್ಲಿ, ಮಠಗಳಲ್ಲಿ ಆರಾಧನೆ ಮಾಡಲಾಗುತ್ತಿದೆ. ಗಾಯನ ಸಮಾಜದಲ್ಲಿನ ರಾಘವೇಂದ್ರರ ಆರಾಧನೆಯು ಅತ್ಯಂತ ಪ್ರಸ್ತುತವಾದದ್ದು. ರಾಘವೇಂದ್ರ ತೀರ್ಥರು ಸಕಲರ ಶ್ರೇಯಸ್ಸು ಬಯಸುತ್ತಿದ್ದರು' ಎಂದರು.

'ಆಪತ್ತಿನ ಕಾಲದಲ್ಲಿ ನೆರವು ನೀಡುವುದೇ ನಿಜವಾದ ಸಾಮಾಜಿಕ ಕೆಲಸ. ರಾಜಕೀಯ, ಸಿನಿಮಾ... ಹೀಗೆ ನಾನಾ ಕೇತ್ರದಲ್ಲಿ ಗುರು ರಾಘವೇಂದ್ರರನ್ನು ಸದಾ ಸ್ಮರಿಸುತ್ತೇವೆ. ಪರಿಮಳ ಗೆಳೆಯರ ಬಳಗವು ರಾಯರ ಸಂದೇಶಗಳನ್ನು ಸಾರುವ ಕೆಲಸ ಮಾಡುತ್ತಿದೆ' ಎಂದು ಹೇಳಿದರು.

'ಲೇಖಕ ಜಯಸಿಂಹ ಅವರು 102ನೇ ಕೃತಿ ಇದಾಗಿದೆ. ಕನ್ನಡವನ್ನು ಉಳಿಸಿ ಬೆಳೆಸಿದ ಕೀರ್ತಿ ದಾಸ ಪರಂಪರೆಗೆ ಸಲ್ಲಬೇಕು' ಎಂದು ಹೇಳಿದರು.

ಸುವಿದ್ಯೇಂದ್ರತೀರ್ಥ ಸ್ವಾಮೀಜಿ, ನಿವೃತ್ತ ಲೋಕಾಯುಕ್ತ ಎನ್.ಸಂತೋಷ್ ಹೆಗ್ಡೆ ಹಾಜರಿದ್ದರು. ಇದೇ ವೇಳೆ ವಿವಿಧ ಸಾಧಕರಿಗೆ ಪರಿಮಳ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕುಂಬಾರ ನಿಗಮ ಸ್ಥಾಪನೆಗೆ ಕ್ರಮ: ಸಚಿವ ಸೋಮಣ್ಣ

ಬೆಂಗಳೂರು: 'ಕುಂಬಾರ ಸಮುದಾಯದ ಸಮಗ್ರ ಅಭಿವೃದ್ಧಿಗೆ ಪ್ರತ್ಯೇಕ ಅಭಿವೃದ್ಧಿ ನಿಗಮ ಸ್ಥಾಪಿಸಲು ಕ್ರಮಕೈಗೊಳ್ಳಲಾಗುವುದು' ಎಂದು ವಸತಿ ಸಚಿವ ವಿ.ಸೋಮಣ್ಣ ಭರವಸೆ ನೀಡಿದರು.

ನಗರದಲ್ಲಿ ಕುಂಬಾರರ ಸಂಘ ಭಾನುವಾರ ಆಯೋಜಿಸಿದ್ದ 'ಬಿ.ವಿ. ರಾಮಚಂದ್ರಪ್ಪ ಸಭಾಂಗಣ ಹಾಗೂ ನೂತನ ಗ್ರಂಥಾಲಯ ಉದ್ಘಾಟಿಸಿ ಅವರು ಮಾತನಾಡಿದರು.

'ಪ್ರತ್ಯೇಕ ನಿಗಮ ಸೇರಿದಂತೆ ಕುಂಬಾರರ ಎಲ್ಲ ಬೇಡಿಕೆಗಳನ್ನು ಮುಖ್ಯಮಂತ್ರಿಯವರ ಗಮನಕ್ಕೆ ತಂದು ಈಡೇರಿಸಲು ಪ್ರಯತ್ನಿಸಲಾಗುವುದು' ಎಂದು ತಿಳಿಸಿದರು.

'ಹಿಂದುಳಿದ ವರ್ಗಗಳಲ್ಲಿ ಬರುವ ಕುಂಬಾರ ಸಮುದಾಯ ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಅತ್ಯಂತ ಸಂಘಟಿತವಾಗಿ ಮುಖ್ಯವಾಹಿನಿಗೆ ಬರಬೇಕಿದೆ. ರಾಜಕೀಯವಾಗಿ ಸಾಮಾಜಿಕವಾಗಿ ಸಿಗಬೇಕಾದ ಎಲ್ಲಾ ಸೌಲಭ್ಯಗಳನ್ನು ಪಡೆಯಲು ಸೂಕ್ತ ವ್ಯವಸ್ಥೆ ಕಲ್ಪಿಸಲು ಆದ್ಯತೆ ಕಲ್ಪಿಸಲಾಗುವುದು. ತಲಘಟ್ಟಪುರದ ನ್ಯಾಯಾಂಗ ಬಡಾವಣೆಯಲ್ಲಿ ಮಂಜೂರಾಗಿರುವ ನಿವೇಶನದಲ್ಲಿ ವಿದ್ಯಾರ್ಥಿನಿಯರ ವಸತಿನಿಲಯ ಹಾಗೂ ಐಟಿಐ ಕಾಲೇಜು ನಿರ್ಮಿಸಲು ಸರ್ಕಾರದಿಂದ ಅನುದಾನ ಒದಗಿಸಲಾಗುವುದು' ಎಂದು ಹೇಳಿದರು.

'ಕೃತಜ್ಞತೆಗೆ ಇನ್ನೊಂದು ಹೆಸರು ಕುಂಬಾರರು. ಆದರೆ ಸಮುದಾಯದಲ್ಲಿ ಒಗ್ಗಟ್ಟು ಇಲ್ಲದಿರುವುದರಿಂದ ಅಭಿವೃದ್ಧಿಯಾಗಿಲ್ಲ. ಸಮುದಾಯದ ವ್ಯಕ್ತಿಗಳು ಬೆಳೆಯುತ್ತಿರುವ ಸಂದರ್ಭದಲ್ಲಿ ಕಾಲು ಎಳೆಯುವ ಕೆಲಸ ಮಾಡಬಾರದು' ಎಂದು ಹೇಳಿದರು.


'ಎರಡು ತಿಂಗಳಲ್ಲಿ ಚಿತ್ರದುರ್ಗದ ಕುಂಬಾರ ಗುರುಪೀಠದ ಬಸವಗುಂಡಯ್ಯ ಸ್ವಾಮೀಜಿ ಅವರಿಗೆ ಹೊಸ ವಾಹನದ ವ್ಯವಸ್ಥೆ ಮಾಡಿ ಕೊಡಲಾಗುವುದು. ರಾಜ್ಯದಲ್ಲಿರುವ ಕುಂಬಾರ ಸಮುದಾಯದ ಪ್ರತಿ ಮನೆಗೂ ತೆರಳಿ ಜಾಗೃತಿ ಮೂಡಿಸುವ ಕೆಲಸ ಮಾಡಬೇಕು' ಎಂದು ಸಲಹೆ ನೀಡಿದರು.

ಕುಂಬಾರರ ಸಂಘದ ಕಾರ್ಯದರ್ಶಿ ಎಸ್. ಗೋವಿಂದ್, 'ವಿಧಾನಸಭೆ ಚುನಾವಣೆಗೆ ಇನ್ನೂ ಎಂಟು ತಿಂಗಳು ಬಾಕಿ ಇದ್ದು, ಸರ್ವಜ್ಞ ಅಭಿವೃದ್ಧಿ ಪ್ರಾಧಿಕಾರಕ್ಕೆ ನಮ್ಮದೇ ಸಮುದಾಯದವರನ್ನು ನೇಮಿಸಬೇಕು' ಎಂದು ಮನವಿ ಮಾಡಿದರು.

ಚಿತ್ರದುರ್ಗದ ಕುಂಬಾರ ಗುರುಪೀಠದ ಬಸವಗುಂಡಯ್ಯ ಸ್ವಾಮೀಜಿ ನೇತೃತ್ವ ವಹಿಸಿದ್ದರು. ಸಂಘದ ಅಧ್ಯಕ್ಷ ಆರ್.ಶ್ರೀನಿವಾಸ್, ಗಂಗಯೆಲ್ಲಯ್ಯ, ಧನರಾಜ್, ಪ್ರತಿಭಾ ಧನರಾಜ್ ಇದ್ದರು.



ಕುಂಬಾರರ ಸಂಘ ಭಾನುವಾರ ಆಯೋಜಿಸಿದ್ದ 'ನೂತನ ಆಡಳಿತ ಮಂಡಳಿಯ ಪದಗ್ರಹಣ, ಬಿ.ವಿ. ರಾಮಚಂದ್ರಪ್ಪ ಸಭಾಂಗಣ ಹಾಗೂ ನೂತನ ಗ್ರಂಥಾಲಯ ಉದ್ಘಾಟನಾ ಕಾರ್ಯಕ್ರಮವನ್ನು ಸಚಿವ.ವಿ. ಸೋಮಣ್ಣ ಮಡಿಕೆ ತಯಾರಿಸುವ ಮೂಲಕ ಚಾಲನೆ ನೀಡಿದರು. ಚಿತ್ರದುರ್ಗದ ಕುಂಬಾರ ಗುರುಪೀಠದ ಬಸವಗುಂಡಯ್ಯ ಸ್ವಾಮೀಜಿ ಇದ್ದಾರೆ – ಪ್ರಜಾವಾಣಿ ಚಿತ್ರ



ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ಅವರು 'ಹನ್ನೊಂದನೇ ಅವತಾರ' ಕೃತಿ ಬಿಡುಗಡೆ ಮಾಡಿದರು. ಡಾ.ಆರ್‌.ಕೆ. ಸರೋಜಾ, ಚಿತ್ರದುರ್ಗದ ಕುಂಬಾರ ಗುರುಪೀಠದ ಬಸವಗುಂಡಯ್ಯ ಸ್ವಾಮೀಜಿ, ಸಾಹಿತಿ ಕುಂ. ವೀರಭದ್ರಪ್ಪ ಹಾಗೂ ಲೇಖಕ ಡಾ. ವಿಜಯ ರಾಘವೇಂದ್ರ ಇದ್ದಾರೆ

ವೃತ್ತಿ ಆಧಾರಿತ ಕೆಲಸಕ್ಕೆ ಮೀಸಲಾತಿ ಕಲ್ಪಿಸಿ: ಕುಂ. ವೀರಭದ್ರಪ್ಪ ಆಗ್ರಹ

ಬೆಂಗಳೂರು: 'ಕುಂಬಾರಿಕೆ ಸೇರಿ ವಿವಿಧ ವೃತ್ತಿ ಆಧಾರಿತ ಕಸುಬುಗಳಲ್ಲಿ ಅನುಭವವುಳ್ಳವರಿಗೆ ಸಂಬಂಧಪಟ್ಟ ಉದ್ಯೋಗಗಳಲ್ಲಿ ಸರ್ಕಾರ ಮೀಸಲಾತಿ ಒದಗಿಸಬೇಕು' ಎಂದು ಸಾಹಿತಿ ಕುಂ. ವೀರಭದ್ರಪ್ಪ ಆಗ್ರಹಿಸಿದರು.

ಡಾ. ವಿಜಯ ರಾಘವೇಂದ್ರ ಪ್ರತಿಷ್ಠಾನ ಉದ್ಘಾಟನೆ, 'ಹನ್ನೊಂದನೇ ಅವತಾರ' ಕಥಾ ಸಂಕಲನ ಬಿಡುಗಡೆ, 'ವಿಜಯಶ್ರೀ' ಮತ್ತು 'ವಿಜಯ ರತ್ನ' ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

'ವಿವಿಧ ಕ್ಷೇತ್ರ ಮತ್ತು ಕಸುಬುಗಳಲ್ಲಿ ಅನುಭವುಳ್ಳವರಿಗೆ ಆದ್ಯತೆ ಸಿಗಬೇಕು. ಆಗ ಆಯಾ ಕೆಲಸಗಳಲ್ಲಿ ನಾವಿನ್ಯತೆ ಕಂಡುಕೊಳ್ಳಬಹುದು. ಈ ಸಮಾಜದಲ್ಲಿ ಉತ್ಪಾದಕ ಮತ್ತು ಅನುತ್ಪಾದಕ ಎಂಬ ಎರಡು ರೀತಿಯ ಸಮುದಾಯಗಳಿವೆ. ಅನುತ್ಪಾದಕ ವರ್ಗ ಬೆವರು ಹರಿಸದೆ ಕೆಲಸ ನಿರ್ವಹಿಸಿದರೆ, ಉತ್ಪಾದಕ ವರ್ಗ ಶ್ರಮ ವಹಿಸಿ ದುಡಿಯಲಿದೆ. ಐಎಎಸ್, ಐಪಿಎಸ್ ಸೇರಿ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಹೆಚ್ಚಿನ ಜನರು ಶ್ರಮಿಕ ವರ್ಗದಿಂದಲೇ ಬರುತ್ತಿದ್ದಾರೆ' ಎಂದು ಹೇಳಿದರು.

ವಿಕಿರಣ ಶಾಸ್ತ್ರ ತಜ್ಞೆ ಡಾ.ಆರ್.ಕೆ. ಸರೋಜಾ, 'ವೈದ್ಯಕೀಯ ಕ್ಷೇತ್ರದಲ್ಲಿ ವೃತ್ತಿಪರತೆ ಹೊರತಾಗಿ ಸಾಹಿತ್ಯ ಕ್ಷೇತ್ರಕ್ಕೆ ಕಾಲಿಡುವವರ ಸಂಖ್ಯೆ ತೀರಾ ಕಡಿಮೆ. ಆದರೆ, ಕಳೆದ 2-3 ದಶಕಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವೈದ್ಯರು ಸಾಹಿತ್ಯ ಕ್ಷೇತ್ರಕ್ಕೆ ಬರುತ್ತಿರುವುದು ಉತ್ತಮ ಬೆಳವಣಿಗೆ. ಮನೋವೈದ್ಯರಾದ ಡಾ.ಸಿ.ಆರ್. ಚಂದ್ರಶೇಖರ್, ಡಾ.ಎಂ. ಶಿವರಾಮ್ ಸೇರಿ ಹಲವು ವೈದ್ಯರು ಸಾಹಿತ್ಯ ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇದರಿಂದ ರೋಗಿಗಳು ಮತ್ತು ಜನಸಾಮಾನ್ಯರಿಗೆ ರೋಗಗಳ ಅರಿವು ಹಾಗೂ ಮಾಹಿತಿ ನೀಡಲು ಸಾಧ್ಯವಾಗುತ್ತಿದೆ' ಎಂದು ತಿಳಿಸಿದರು.



ಬೆಂಗಳೂರಿನಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ 2022ನೇ ಸಾಲಿನ ರಾಜ್ಯಮಟ್ಟದ ನೇಕಾರರ ಪ್ರಶಸ್ತಿಗಳನ್ನು ಚಿಕ್ಕೋಡಿಯ ಶಂಕರ ಸಣ್ಣಕ್ಕಿ, ಸದಲಗಾದ ಸಚೀನ ಬಾಹುಸಾಬ ತೇರದಾಳೆ, ಮೊಳಕಾಲ್ಮುರಿನ ಡಿ.ಎಸ್‌.ಮಲ್ಲಿಕಾರ್ಜುನ್, ಕೊಳ್ಳೆಗಾಲದ ಪಿ.ಶ್ರೀನಿವಾಸ್, ಬೀಳಗಿಯ ಪಡಿಯಪ್ಪ ಗೋಕಾವಿ ಅವರಿಗೆ ಪ್ರದಾನ ಮಾಡಲಾಯಿತು. ಹೆಚ್ಚುವರಿ ಆಯುಕ್ತ ಸಿ.ಎಸ್‌.ಯೋಗೇಶ್, ಕೈಮಗ್ಗ ಅಭಿವೃದ್ಧಿ ಆಯುಕ್ತ ಎಚ್‌.ಎಂ.ಕುಮಾರ್, ಸಚಿವ ಶಂಕರ ಪಾಟೀಲ ಮುನೇನಕೊಪ್ಪ, ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಗುತ್ತಿಗನೂರು ವಿರೂಪಾಕ್ಷಗೌಡ ಇದ್ದರು – ಪ್ರಜಾವಾಣಿ ಚಿತ್ರ

ಕಾರ್ಯಕರ್ತರ ಘರ್ಷಣೆ

ಪ್ರಜಾವಾಣಿ ವಾರ್ತೆ

ಚಿಂತಾಮಣಿ: ತಾಲ್ಲೂಕಿನ ಮೂಗಲಮರಿ ಗ್ರಾಮದಲ್ಲಿ ಶನಿವಾರ ಕಾಂಗ್ರೆಸ್ ಮತ್ತು ಜೆಡಿಎಸ್ ಕಾರ್ಯಕರ್ತರ ನಡುವೆ ನಡೆದ ಘರ್ಷಣೆಯಲ್ಲಿ ಎಂಟು ಮಂದಿ ಗಾಯಗೊಂಡಿದ್ದು, ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ನಗರದಲ್ಲಿ ಕಾಂಗ್ರೆಸ್ ಬೃಹತ್ ಬೈಕ್ ರ‍್ಯಾಲಿ ನಡೆಯುತ್ತಿದ್ದಾಗ ಈ ದುರ್ಘಟನೆ ನಡೆದಿದೆ.

ಕೈಮಗ್ಗ ನೇಕಾರರಿಗೆ ಪ್ರಶಸ್ತಿ ಪ್ರದಾನ

ಬೆಂಗಳೂರು: ನಗರದಲ್ಲಿ 8ನೇ ರಾಷ್ಟ್ರೀಯ ಕೈಮಗ್ಗ ದಿನಾಚರಣೆಯ ಅಂಗವಾಗಿ ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೈಮಗ್ಗ ನೇಕಾರರಿಗೆ ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ ಮಾಡಲಾಯಿತು.

ರೇಷ್ಮೆ ಕೈಮಗ್ಗ ಕ್ಷೇತ್ರದಲ್ಲಿ ಮೊಳಕಾಲ್ಮುರಿನ ಡಿ.ಎಸ್. ಮಲ್ಲಿಕಾರ್ಜುನ (ಪ್ರಥಮ – ರೇಷ್ಮೆ ಸೀರೆಯಲ್ಲಿ ರೈತರ ಸುಗ್ಗಿ ಚಿತ್ರಣ), ಕೊಳ್ಳೆಗಾಲದ ಪಿ.ಶ್ರೀನಿವಾಸ್ (ದ್ವಿತೀಯ – ರೇಷ್ಮೆ ವಸ್ತ್ರದಲ್ಲಿ ಪುನೀತ್ ರಾಜ್‌ಕುಮಾರ್ ಅವರ ಭಾವಚಿತ್ರ), ಹತ್ತಿ ಕೈಮಗ್ಗ ಕ್ಷೇತ್ರದಲ್ಲಿ ಚಿಕ್ಕೋಡಿಯ ಸಚೀನ ಬಾಹುಸಾಬ ತೇರದಾಳೆ (ಪ್ರಥಮ – ಕಾಟನ್ ಸೀರೆಯಲ್ಲಿ ಭಾರತದ ನಕ್ಷೆ), ಬೀಳಗಿಯ ಪಡಿಯಪ್ಪ ಗೋಕಾವಿ (ದ್ವಿತೀಯ – ಕೊಂಡಿ ತಂತ್ರಜ್ಞಾನದೊಂದಿಗೆ ಇಳಕಲ್ ಮಾದರಿ ಸೀರೆ), ಉಣ್ಣೆ ಕೈಮಗ್ಗ ಕ್ಷೇತ್ರದಲ್ಲಿ ಚಿಕ್ಕೋಡಿಯ ಶಂಕರ ಸಣ್ಣಕ್ಕಿ (ಪ್ರಥಮ – ಉಣ್ಣೆ ನಿಶಾಣಿ- ಧ್ವಜ) ಅವರಿಗೆ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ಬಳಿಕ ಮಾತನಾಡಿದ ಸಚಿವ ಶಂಕರ ಪಾಟೀಲ ಮುನೇನಕೊಪ್ಪ, 'ಕೈಮಗ್ಗ ಉತ್ಪನ್ನಗಳನ್ನು ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಖರೀದಿ ಮಾಡಿ ಬಳಸುವ ಮೂಲಕ ಕೈಮಗ್ಗ ನೇಕಾರರನ್ನು ಪ್ರೋತ್ಸಾಹಿಸಬೇಕು' ಎಂದು ಕೋರಿದರು.

ಕಲ್ಲಿದ್ದಲು ಆಮದು ತಗ್ಗಿಸಲು ಸ್ಥಾಯಿ ಸಮಿತಿ ಸಲಹೆ

ನವದೆಹಲಿ: ಕಲ್ಲಿದ್ದಲು ಆಮದು ಪ್ರಮಾಣವನ್ನು ಕಡಿಮೆ ಮಾಡಿ, ದೇಶೀಯ ಉತ್ಪಾದನೆಯನ್ನು ಹೆಚ್ಚಿಸುವಂತೆ ಸರ್ಕಾರಕ್ಕೆ ಸಂಸದೀಯ ಸ್ಥಾಯಿ ಸಮಿತಿ ಸಲಹೆ ನೀಡಿದೆ.

ಇಂಧನದ ಮೇಲಿನ ಸ್ಥಾಯಿ ಸಮಿತಿ ಸಂಸತ್ತಿಗೆ ತನ್ನ ವರದಿಯನ್ನು ಸಲ್ಲಿಸಿದ್ದು, ರಾಜ್ಯಗಳ ಉಷ್ಣ ವಿದ್ಯುತ್ ಸ್ಥಾವರಗಳಿಗೆ ಹೊಸದಾಗಿ ಹಂಚಿಕೆಯಾದ ಕಲ್ಲಿದ್ದಲು ಘಟಕಗಳಲ್ಲಿ ನಿಧಾನಗತಿಯಲ್ಲಿ ಕಲ್ಲಿದ್ದಲು ಉತ್ಪಾದನೆಯಾಗುತ್ತಿದೆ ಎಂದು ಅದು ಅಸಮಾಧಾನ ವ್ಯಕ್ತಪಡಿಸಿದೆ.

ಇಂಧನ ಮತ್ತು ಕಲ್ಲಿದ್ದಲು ಸಚಿವಾಲಯದ ಪ್ರಯತ್ನದಿಂದಾಗಿ 2020–21ರಲ್ಲಿ ಕಲ್ಲಿದ್ದಲು ಆಮದು ಶೇ 56ರಷ್ಟು ಕಡಿಮೆಯಾಗಿದೆ. ಆದಾಗ್ಯೂ, 2021ರಲ್ಲಿ ಆಮದು ಮಾಡಿಕೊಂಡ ಕಲ್ಲಿದ್ದಲಿನ ಅಂತರರಾಷ್ಟ್ರೀಯ ಬೆಲೆ ಏರಿದ ಕಾರಣ ಆಮದು ಕಲ್ಲಿದ್ದಲು ಆಧಾರಿತ ವಿದ್ಯುತ್ ಸ್ಥಾವರಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿತು. ಇದರಿಂದಾಗಿ ದೇಶೀಯ ಕಲ್ಲಿದ್ದಲಿಗೆ ಬೇಡಿಕೆ ಹೆಚ್ಚಾಯಿತು ಮತ್ತು ವಿದ್ಯುತ್ ಸ್ಥಾವರಗಳಲ್ಲಿ ದೇಶೀಯ ಕಲ್ಲಿದ್ದಲು ದಾಸ್ತಾನು ಕಡಿಮೆಯಾಯಿತು ಎಂದು ವರದಿ ಹೇಳಿದೆ.

'ಕೆಲವು ಸ್ಥಾವರಗಳನ್ನು ಆಮದು ಮಾಡಿದ ಕಲ್ಲಿದ್ದಲಿನ ಬಳಕೆಗಾಗಿ ವಿನ್ಯಾಸಗೊಳಿಸಲಾಗಿದೆ ಎಂದು ಸಚಿವಾಲಯ ಆಮದಿಗೆ ಕಾರಣ ತಿಳಿಸಿದೆ. ಇದನ್ನು ಸಮಿತಿಯು ಪರಿಗಣಿಸುತ್ತದೆ. ಆದರೆ ದೇಶದ ಬೇಡಿಕೆಯನ್ನು ಪೂರೈಸಲು ಸಾಕಷ್ಟು ಕಲ್ಲಿದ್ದಲು ನಿಕ್ಷೇಪಗಳನ್ನು ಹೊಂದಿರುವುದರಿಂದ ಹಂತ ಹಂತವಾಗಿ ಆಮದನ್ನು ಕಡಿಮೆ ಮಾಡಬೇಕು' ಎಂದು ಸಮಿತಿ ಸಲಹೆ ನೀಡಿದೆ.

ರಂಗಕರ್ಮಿ ಸಿ.ಕೆ.ಗುಂಡಣ್ಣ ಅಭಿನಂದನಾ ಸಮಾರಂಭದಲ್ಲಿ ಆತಂಕ ವ್ಯಕ್ತಪಡಿಸಿದ ಸಾಹಿತಿ

ಜಾತಿ, ಧರ್ಮದ ಹೆಸರಿನಲ್ಲಿ ಘರ್ಷಣೆ: ಮರುಳಸಿದ್ದಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹನೀಯರು ಜನಿಸಿದ್ದ ನಾಡಿನಲ್ಲಿ ಜಾತಿ ಹಾಗೂ ಧರ್ಮದ ಹೆಸರಿನಲ್ಲಿ ಘರ್ಷಣೆಗಳು ನಡೆಯುತ್ತಿವೆ. ಈ ಪರಿಸ್ಥಿತಿ ಕಂಡು ಇಳಿವಯಸ್ಸಿನಲ್ಲಿ ನಾವು ಸಂಕಟ ಪಡುತ್ತಿದ್ದೇವೆ' ಎಂದು ಸಾಹಿತಿ ಡಾ.ಕೆ.ಮರುಳಸಿದ್ದಪ್ಪ ಹೇಳಿದರು.

ರಂಗಮಂಡಲ ಹಾಗೂ ಸಿವಗಂಗ ಟ್ರಸ್ಟ್ ಭಾನುವಾರ ನಗರದಲ್ಲಿ ಆಯೋಜಿಸಿದ್ದ ರಂಗಕರ್ಮಿ ಸಿ.ಕೆ. ಗುಂಡಣ್ಣ ಅವರ 70ನೇ ವರ್ಷದ ಸಂಭ್ರಮ ಹಾಗೂ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.



ನಗರದಲ್ಲಿ ಭಾನುವಾರ ಆಯೋಜಿಸಿದ್ದ ರಂಗಕರ್ಮಿ ಸಿ.ಕೆ.ಗುಂಡಣ್ಣ ಅವರ ಅಭಿನಂದನಾ ಸಮಾರಂಭವನ್ನು ಸಿನಿಮಾ ನಿರ್ದೇಶಕ ಎಂ.ಎಸ್‌.ಸತ್ಯು ಉದ್ಘಾಟಿಸಿದರು. (ಎಡದಿಂದ) ಮಲ್ಲಿಕಾರ್ಜುನಸ್ವಾಮಿ ಮಹಾಮನೆ, ಸಿ.ಕೆ.ಗುಂಡಣ್ಣ, ಶ್ರೀನಿವಾಸ ಜಿ. ಕಪ್ಪಣ್ಣ, ಡಾ.ಕೆ.ಮರುಳ ಸಿದ್ದಪ್ಪ, ಪ್ರೊ.ಎಸ್‌.ಜಿ.ಸಿದ್ದರಾಮಯ್ಯ ಇದ್ದರು

'ಪಂಪ, ಬಸವಣ್ಣ, ಕುವೆಂಪು ಅವರನ್ನು ಕಂಡ ನಾಡು ಇದು. ಆದರೆ, ಇಂದು ಸಂಘರ್ಷದ ಪರಿಸ್ಥಿತಿ ಸೃಷ್ಟಿಯಾಗಿದೆ. ಹುಳಿ ಹಿಂಡುವ ಕೆಲಸಗಳು ನಡೆಯುತ್ತಿವೆ. ಪ್ರಧಾನಿ ನೆಹರೂ ಅವರ ಆಡಳಿತದ ಕಾಲದಲ್ಲಿ ಸುಂದರ ಭಾರತ ಕಂಡಿದ್ದೆವು. ಆರಂಭದ ದಿನಗಳಲ್ಲಿ ಇಂದಿರಾ ಗಾಂಧಿ ಅವರೂ ಉತ್ತಮವಾದ ಕೆಲಸಗಳನ್ನೇ ಮಾಡಿದ್ದರು. ಕ್ರಮೇಣ ಸರ್ವಾಧಿಕಾರಿ ಧೋರಣೆ ತಳೆದರು. ಈಗಿನ ಆಡಳಿತವು ಅದರ ಮೇಲೆ ದೊಡ್ಡ ಮಹಲ್ ನಿರ್ಮಿಸುತ್ತಿದೆ' ಎಂದು ಆತಂಕ ವ್ಯಕ್ತಪಡಿಸಿದರು.

'ರಂಗಭೂಮಿ, ಸಾಹಿತ್ಯವು ಒಂದುಗೂಡಿಸುವ ಕೆಲಸ ಮಾಡಲಿದೆ. ಪ್ರೀತಿ, ಸ್ನೇಹ ಬೆಳೆಸುತ್ತದೆ. ರಂಗಭೂಮಿ ಹಾಗೂ ಸಂಘಟನೆಯಲ್ಲಿ ಗುಂಡಣ್ಣ ಅವರು ಕ್ರಿಯಾಶೀಲ ವ್ಯಕ್ತಿ. ಸಮುದಾಯದ ಗುಂಡಣ್ಣ ಎಂದೇ ಕರೆಯುತ್ತಿದ್ದೆವು. ರಂಗಭೂಮಿಯ ಮೂಲಕ ನಾಡು ಕಟ್ಟುವ ಕೆಲಸ ಮಾಡಿದ್ದಾರೆ' ಎಂದರು.

ಸಾಹಿತಿ ಪ್ರೊ.ಎಸ್.ಜಿ.ಸಿದ್ದರಾಮಯ್ಯ ಮಾತನಾಡಿ, 'ಮೂರು ವರ್ಷದಲ್ಲಿ 12 ಲಕ್ಷ ಮಕ್ಕಳು ಶಾಲೆಗಳಿಂದ ಹೊರಗೆ ಉಳಿದಿದ್ದಾರೆ. ಅವರ ಬಗ್ಗೆ ಯಾರಿಗೂ ಚಿಂತೆ ಇಲ್ಲ. ಶಾಲಾ ಪಠ್ಯ ಪರಿಷ್ಕರಣೆಯಲ್ಲಿ ಮಹನೀಯರ ಕುರಿತ ಪಠ್ಯವನ್ನೇ ಕೈಬಿಡಲಾಯಿತು. ಸಮಾಜದಿಂದ ನಿರೀಕ್ಷಿತ ಮಟ್ಟದಲ್ಲಿ ಪ್ರತಿರೋಧ ವ್ಯಕ್ತವಾಗಲಿಲ್ಲ. ಮಕ್ಕಳ ಮನಸ್ಸು ಕಲುಷಿತಗೊಂಡರೆ ನೂರಾರು ವರ್ಷ ಉಳಿಯುತ್ತದೆ' ಎಂದು ಎಚ್ಚರಿಸಿದರು.

'ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ವಾತಾವರಣ ಕಲುಷಿತಗೊಳ್ಳುತ್ತಿದೆ. ಕೆಲವರು ಮಾತ್ರ ಧ್ವನಿಯೆತ್ತಿದ್ದಾರೆ. ಉಳಿದವರು ಮೌನ ವಹಿಸಿದ್ದಾರೆ. ಮೌನ ಒಳ್ಳೆಯದಲ್ಲ' ಎಂದು ಎಚ್ಚರಿಸಿದರು.

ರಂಗಕರ್ಮಿ, ಸಿನಿಮಾ ನಿರ್ದೇಶಕ ಎಂ.ಎಸ್.ಸತ್ಯು ಮಾತನಾಡಿ, ಸಮುದಾಯ ಸಂಘಟನೆಯ ಮೂಲಕ ಗುಂಡಣ್ಣ ಸಾಕಷ್ಟು ಹೋರಾಟ ಮಾಡಿದ್ದಾರೆ. ಅವರ ಹೋರಾಟದ ಶಕ್ತಿ ಅದ್ಭುತ ಎಂದು ಬಣ್ಣಿಸಿದರು.

ರಂಗಕರ್ಮಿ ಶ್ರೀನಿವಾಸ ಜಿ. ಕಪ್ಪಣ್ಣ ಮಾತನಾಡಿ, ವ್ಯವಸ್ಥೆಯನ್ನು ಪ್ರಶ್ನಿಸಿದರೆ ಹೊರಹಾಕುವ ಕೆಲಸ ನಡೆಯುತ್ತಿದೆ. ಎರಡು ತಿಂಗಳ ಅವಧಿಗೆ ವಿವಿಧ ಅಕಾಡೆಮಿಗಳಿಗೆ ಸದಸ್ಯರನ್ನು ನೇಮಕ ಮಾಡಲಾಗಿದೆ. ಕೆಲವರು ಅದನ್ನೂ ಒಪ್ಪಿಕೊಂಡಿದ್ದಾರೆ ಎಂದು ಹೇಳಿದರು.

ಇದೇ ವೇಳೆ ಸಿ.ಕೆ.ಗುಂಡಣ್ಣ ಅವರನ್ನು ಅಭಿನಂದಿಸಲಾಯಿತು. ಗಾಯಕ ಪಿಚ್ಚಳ್ಳಿ ಶ್ರೀನಿವಾಸ್, ಆರ್. ಭೀಮಸೇನ ಇದ್ದರು.

ಸರ್ಕಾರದ ಬಳಿ ಭಾಷಾ ನೀತಿ ಇಲ್ಲ: ಪುರುಷೋತ್ತಮ ಬಿಳಿಮಲೆ

ಪ್ರಜಾವಾಣಿ ವಾರ್ತೆ



ತೀರ್ಥಹಳ್ಳಿ: 'ಸರ್ಕಾರದ ಬಳಿ ಸರಿಯಾದ ಭಾಷಾ ನೀತಿಯೇ ಇಲ್ಲ. ನಮ್ಮ ಭಾಷೆ ಸಾವಿಗೆ ನಾವೇ ಸಾಕ್ಷಿಯಾಗಬಾರದು. ಈ ಬಗ್ಗೆ ಕುವೆಂಪು ವಿಚಾರ ಕೇಂದ್ರೀಕರಿಸಿ ಚಳವಳಿ ರೂಪಿಸುವ ಅಗತ್ಯ ಇದೆ' ಎಂದು ಜಾನಪದ ವಿದ್ವಾಂಸ ಪುರುಷೋತ್ತಮ ಬಿಳಿಮಲೆ ಪ್ರತಿಪಾದಿಸಿದರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು, ಶಿವಮೊಗ್ಗ ಅಹರ್ನಿಶಿ ಪ್ರಕಾಶನ ಆಶ್ರಯದಲ್ಲಿ ಭಾನುವಾರ ಆಯೋಜಿಸಿದ್ದ 'ಕುವೆಂಪು ಚಿಂತನೆಯ ಪ್ರಸ್ತುತತೆ' ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

'ಸಂವಿಧಾನದ 8ನೇ ಪರಿಚ್ಛೇದದಲ್ಲಿ 22 ಭಾಷೆಗಳಿದ್ದು, ಕನ್ನಡ ಕೊನೆಯ ಸ್ಥಾನ ಪಡೆದಿರುವುದು ಆತಂಕಕಾರಿ. ಭಾರತದಲ್ಲಿ ಶೇ 66ರಷ್ಟು ಜನ ಹಿಂದಿ ಬಳಸುತ್ತಾರೆ. ಕನ್ನಡ ಶೇ 3.75ಕ್ಕೆ ಸೀಮಿತಗೊಂಡಿದೆ. ಹಿಂದಿ ಹೇರಿಕೆಯ ಪರಿಣಾಮ ಬ್ಯಾಂಕ್ ನೌಕರರೊಂದಿಗೆ ಗ್ರಾಮೀಣರು ವ್ಯವಹರಿಸದಂತೆ ಆಗಿದೆ' ಎಂದು ಕಳವಳ ವ್ಯಕ್ತಪಡಿಸಿದರು.

'1871ರಲ್ಲಿ ರಾಜ್ಯದಲ್ಲಿ ಕೊರಗ ಭಾಷೆ ಮಾತನಾಡುವವರು 55 ಸಾವಿರ ಜನರಿದ್ದರು. ಈಗ 3 ಸಾವಿರಕ್ಕೆ ಬಂದಿದೆ. ಈ ಭಾಷೆಗೆ ಕೊಡುವ ಅನುದಾನ ನಿಲ್ಲಿಸುವ ಆದೇಶ ಬಂದಿರುವುದು ದುರಂತ' ಎಂದರು.

15ರ ಬಳಿಕ ಮುಖ್ಯಮಂತ್ರಿ ಬದಲಾವಣೆ: ತಂಗಡಗಿ

ಹುಲಿಗಿ (ಕೊಪ್ಪಳ): 'ಆಗಸ್ಟ್ 15ರ ಬಳಿಕ ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆಯಾಗಲಿದ್ದಾರೆ. ನಾನು ನುಡಿದ ಭವಿಷ್ಯ ನಿಜವಾಗಲಿದೆ' ಎಂದು ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಶಿವರಾಜ ತಂಗಡಗಿ ಹೇಳಿದರು.

ಹುಲಿಗಿಯಲ್ಲಿ ಭಾನುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು 'ಬಸವರಾಜ ಬೊಮ್ಮಾಯಿ ಅಧಿಕಾರ ವಹಿಸಿಕೊಂಡ ಬಳಿಕ ರಾಜ್ಯಕ್ಕೆ ಹೊಸ ಮುಖ್ಯಮಂತ್ರಿ ಬರುತ್ತಾರೆ ಎಂದು ಹಿಂದೆ ಹೇಳಿದ್ದೆ, ಆ ಕಾಲ ಈಗ ಸನ್ನಿಹಿತವಾಗಿದೆ' ಎಂದರು.

'ಸಿದ್ದರಾಮಯ್ಯ ಅವರ 75ನೇ ಜನ್ಮದಿನದ ಕಾರ್ಯಕ್ರಮದ ಬಳಿಕ ಕಾಂಗ್ರೆಸ್ ಮೂರು ಹೋಳಾಗಲಿದೆ ಎಂದು ಅನೇಕರು ಮಾತನಾಡಿದ್ದರು. ಆದರೆ, ಪಕ್ಷಕ್ಕೆ ಈಗ ಮೂರು ಪಟ್ಟು ಶಕ್ತಿ ಬಂದಿದೆ. ಮುಂಬರುವ ಚುನಾವಣೆಯಲ್ಲಿ ಪಕ್ಷ 150ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಗೆಲ್ಲಲಿದೆ' ಎಂದರು.

'ಚುನಾವಣೆ ಹತ್ತಿರ ಬಂದಾಗ ಬಿಜೆಪಿ ನಾಯಕರು ಪರಿಶಿಷ್ಟ ಮುಖ್ಯಮಂತ್ರಿ ಬಗ್ಗೆ ಮಾತನಾಡುತ್ತಾರೆ. ಬಿಜೆಪಿಗೆ ಪರಿಶಿಷ್ಟರ ಮತಗಳಷ್ಟೇ ಬೇಕು. ಚುನಾವಣೆ ಬಂದಾಗ ಈ ವಿಷಯ ತೇಲಿ ಬಿಟ್ಟು ಮತಬ್ಯಾಂಕ್ ರಾಜಕಾರಣ ಮಾಡುತ್ತದೆ' ಎಂದು ಆರೋಪಿಸಿದರು.

'ದೆಹಲಿಯ ಜಾಮಾ ಮಸೀದಿ ದೇಶದ ಅತಿದೊಡ್ಡ ಮಸೀದಿಯಲ್ಲ'

ನವದೆಹಲಿ (ಪಿಟಿಐ): 'ದೆಹಲಿಯಲ್ಲಿರುವ ಜಾಮಾ ಮಸೀದಿಯು ದೇಶದ ಅತಿದೊಡ್ಡ ಮಸೀದಿಯಲ್ಲ' ಎಂದು ಹಲವು ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ.

'ನಗರದಲ್ಲಿ ಅಳವಡಿಸಲಾಗಿರುವ ಹಲವು ಹೋರ್ಡಿಂಗ್‌ಗಳು ಹಾಗೂ ದೆಹಲಿ ಪ್ರವಾಸೋದ್ಯಮದ ವೆಬ್‌ಸೈಟ್‌ನಲ್ಲಿ ಜಾಮಾ ಮಸೀದಿಯನ್ನು ಅತಿದೊಡ್ಡ ಮಸೀದಿ ಎಂದು ಸಂಬೋಧಿಸಲಾಗಿದೆ. ಆದರೆ ಈ ಶ್ರೇಯವು ಭೋಪಾಲ್‌ನಲ್ಲಿರುವ ತಾಜ್-ಉಲ್-ಮಸೀದಿಗೆ ಸೇರಬೇಕು' ಎಂದು ಇತಿಹಾಸಕಾರರು ಹೇಳಿದ್ದಾರೆ.

ಜಾಮಾ ಮಸೀದಿಯನ್ನು 1656ರಲ್ಲಿ ಮೊಘಲ್ ದೊರೆ ಶಹಜಹಾನ್ ಕಟ್ಟಿಸಿದ್ದರು. ತಾಜ್ ಉಲ್ ಮಸೀದಿಯನ್ನು ಶಹಜಹಾನ್ ಬೇಗಂ ಅವರ ಕಾಲಾವಧಿಯಲ್ಲಿ (1868 ರಿಂದ 1901) ನಿರ್ಮಿಸಲಾಗಿತ್ತು.

'ದೆಹಲಿ ಸರ್ಕಾರವದೇ, ಜಾಮಾ ಮಸೀದಿಯು ಭಾರತದ ಅತಿದೊಡ್ಡ ಮಸೀದಿಯಲ್ಲ. ಈ ಶ್ರೇಯ ಭೋಪಾಲ್‌ನ ತಾಜ್ ಉಲ್ ಮಸೀದಿಗೆ ಸಲ್ಲುತ್ತದೆ ಎಂದು ಹೇಳಿದೆ' ಎಂದು ದೆಹಲಿಯ ಇತಿಹಾಸಕಾರ ಸೊಹೈಲ್ ಹಶ್ಮಿ ಇತ್ತೀಚೆಗೆ ಫೇಸ್‌ಬುಕ್‌ನಲ್ಲಿ ಬರೆದುಕೊಂಡಿದ್ದರು.

ದಾರುಲ್ ಉಲೂಮ್‌ನ ಪ್ರೊ.ಹಸನ್ ಖಾನ್ ಅವರು ಸೊಹೈಲ್ ಅವರ ಹೇಳಿಕೆಗೆ ಸಹಮತ ವ್ಯಕ್ತಪಡಿಸಿದ್ದಾರೆ.

ಕುಂದು ಕೊರತೆ | ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in. ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

'ಹದಗೆಟ್ಟ ರಸ್ತೆ'

ವಿದ್ಯಾಮಾನ್ಯ ನಗರದ ಸಮೀಪದಲ್ಲಿರುವ ಅಂದ್ರಹಳ್ಳಿ ಮುಖರಸ್ತೆ ಸಂಪೂರ್ಣ ಹದಗೆಟ್ಟಿದೆ. ಮಳೆ ಬಂದರೆ ಈ ಮಾರ್ಗದಲ್ಲಿ ಸಂಚರಿಸುವುದು ಸಾಹಸವೇ ಸರಿ. ಪ್ರತಿನಿತ್ಯ ಸಾವಿರಾರೂ ಮಂದಿ ಪ್ರಯಾಣಿಸುವ ಈ ರಸ್ತೆಗೆ ಡಾಂಬರೀಕರಣವೇ ಆಗಿಲ್ಲ. ಇದರಿಂದ ಮಳೆ ಬಂದರೆ ಕೆಸರು ಗದ್ದೆಯಾಗಿ ಮಾರ್ಪಡುತ್ತದೆ. ಬೇಸಿಗೆ ಕಾಲದಲ್ಲಿ ದೂಳಿನ ಮಜ್ಜನವಾಗುತ್ತದೆ. ಇದರಿಂದ ಹಲವಾರು ಅಪಘಾತಗಳು ಸಂಭವಿಸಿವೆ. ಜೀವ ಕೈಯಲ್ಲಿ ಹಿಡಿದುಕೊಂಡುವ ಸಂಚರಿಸುವ ಪರಿಸ್ಥಿತಿ ಎದುರಾಗಿದೆ. ರಸ್ತೆ ದುರಸ್ತಿಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಜನಪ್ರತಿನಿಧಿಗಳಿಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ರಸ್ತೆ ದುರಸ್ತಿಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಆಕಾಶ್, ರಾಜೇಶ್, ಸ್ಥಳೀಯ ನಿವಾಸಿಗಳು



ವಿದ್ಯಾಮಾನ್ಯ ನಗರದ ಸಮೀಪದಲ್ಲಿರುವ ಅಂದ್ರಹಳ್ಳಿ ಮುಖರಸ್ತೆ ಸಂಪೂರ್ಣ ಹದಗೆಟ್ಟಿದೆ

'ಗುಜರಿ ವಾಹನ ತೆರವುಗೊಳಿಸಿ'

ನಗರದ ಮಲ್ಲೇಶ್ವರದ ಕೆ.ಸಿ. ಜನರಲ್ ಆಸ್ಪತ್ರೆ ಹಾಗೂ ರಾಜಾಜಿನಗರಕ್ಕೆ ಸಂಪರ್ಕ ಕಲ್ಪಿಸುವ ಕೆಳ ಸೇತುವೆ ಮಲ್ಲೇಶ್ವರ ಸಂಚಾರ ಪೊಲೀಸರ ಠಾಣೆಯ ಗುಜರಿ ವಾಹನಗಳ ಪಾರ್ಕಿಂಗ್ ಆಗಿ ಮಾರ್ಪಟ್ಟಿದೆ. ರಸ್ತೆಯ ಎರಡೂ ಬದಿಗಳಲ್ಲಿ ಅಪಘಾತಕ್ಕೀಡಾದ ವಾಹನಗಳನ್ನು ನಿಲ್ಲಿಸಲಾಗಿದೆ. ಇದರಿಂದ ಅಪಘಾತಗಳ ಸಂಭವಿಸುವ ಸಾಧ್ಯತೆಗಳಿದ್ದು ಕೂಡಲೇ ಅವುಗಳನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುಕೂಲ ಕಲ್ಪಿಸಬೇಕು.

ಶಿವಪ್ರಸಾದ್, ಸ್ಥಳೀಯ ನಿವಾಸಿ



ಮಲ್ಲೇಶ್ವರದ ಕೆಳ ಸೇತುವೆಯಲ್ಲಿ ಸಂಚಾರ ಪೊಲೀಸರ ಠಾಣೆಯ ಗುಜರಿ ವಾಹನಗಳನ್ನು ಪಾರ್ಕಿಂಗ್ ಮಾಡಿರುವುದು

ಸಂಚಾರಕ್ಕೆ ಅಡ್ಡಿಯಾದ ವಾಹನಗಳು!

ಗಂಗಾನಗರದ ಮುಖ್ಯ ರಸ್ತೆಯಲ್ಲೇ ವಾಹನಗಳನ್ನು ಪಾರ್ಕಿಂಗ್ ಮಾಡುತ್ತಿರುವುದರಿಂದ ಸುಗಮ ಸಂಚಾರಕ್ಕೆ ಅಡ್ಡಿಯಾಗಿದೆ. ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ರಸ್ತೆಯಿಂದ ಆರ್.ಟಿ. ನಗರದ ಮಾರ್ಗದವರೆಗಿನ ರಸ್ತೆಯಲ್ಲಿ ವಾಹನಗಳನ್ನು ನಿಲ್ಲಿಸಲಾಗುತ್ತಿದೆ. ವಿಮಾನ ನಿಲ್ದಾಣ ರಸ್ತೆಗೆ ಮತ್ತು ಆರ್.ಟಿ. ನಗರಕ್ಕೆ ಮತ್ತು ಹಲವು ಶಾಲೆಗಳಿಗೆ ಹಾಗೂ ನಗರಕ್ಕೆ ತೆರಳಲು ಇದು ಪ್ರಮುಖ ಮಾರ್ಗವಾಗಿದೆ. ಕೆಲವರು ತಮ್ಮ ಹಳೆಯ ವಾಹನಗಳನ್ನು ಸಹ ಹಲವು ವರ್ಷಗಳಿಂದ ಇಲ್ಲಿಯೇ ನಿಲ್ಲಿಸಿದ್ದಾರೆ. ಈ ಮಾರ್ಗದಲ್ಲೇ ಬೇಕರಿ, ಹೋಟೆಲ್‌ಗಳು ಸೇರಿದಂತೆ ಹಲವು ಅಂಗಡಿಗಳಿವೆ. ದಟ್ಟಣೆ ಸಮಯದಲ್ಲಿ ಈ ಮಾರ್ಗದಲ್ಲಿ ಸಾಗುವುದು ಸಮಸ್ಯೆಯಾಗುತ್ತಿರುವುದರಿಂದ ವಾಹನಗಳನ್ನು ತೆರವುಗೊಳಿಸಲು ಸಂಬಂಧಪಟ್ಟವರು ಕ್ರಮಕೈಗೊಳ್ಳಬೇಕು.

ಸುರೇಶ್, ಗಂಗಾನಗರ

ಮಲ್ಲೇಶಪಾಳ್ಯ: ಶೌಚಾಲಯ ತೆರೆಯಿರಿ

ಮಲ್ಲೇಶಪಾಳ್ಯ ಬಸ್ ನಿಲ್ದಾಣದಲ್ಲಿರುವ ಶೌಚಾಲಯ ಸಂಕೀರ್ಣ ನಿರ್ವಹಣೆ ಇಲ್ಲದೆ, ಗಬ್ಬೆದ್ದು ನಾರುತ್ತಿದೆ. ಒಂದು ತಿಂಗಳಿನಿಂದ ಶೌಚಾಲಯ ಮುಚ್ಚಲಾಗಿದೆ. ಇದರಿಂದ ನಿಲ್ದಾಣಕ್ಕೆ ಬರುವ ಪ್ರಯಾಣಿಕರಿಗೆ ಸಮಸ್ಯೆಯಾಗಿದೆ. ಕೆಲವರು ಸಾರ್ವಜನಿಕ ಸ್ಥಳದಲ್ಲೇ ಮೂತ್ರ ವಿಸರ್ಜನೆ ಮಾಡುತ್ತಿರುವುದರಿಂದ ಈ ಪ್ರದೇಶ ದುರ್ನಾತ ಬೀರುತ್ತಿದೆ.

ಸಾರ್ವಜನಿಕ ಶೌಚಾಲಯದ ಮುಂಭಾಗದಲ್ಲಿ ಡಾ.ರಾಜ್ ಕುಮಾರ್ ಅವರ ಬಯಲು ರಂಗ ಮಂದಿ ಮತ್ತು ಬಿಬಿಎಂಪಿ ಓಪನ್ ಜಿಮ್ ಇದೆ. ಮಕ್ಕಳು, ವಾಯು ವಿಹಾರಿಗಳು , ಮಹಿಳೆಯರು, ವಿದ್ಯಾರ್ಥಿಗಳು ಮೂಗು ಮುಚ್ಚಿಕೊಂಡು ಓಡಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಬಸ್ ನಿಲ್ದಾಣದ ಅಧಿಕಾರಿಗಳಿಗೆ ದೂರು ನೀಡಿದ್ದರೂ ಕಂಡು ಕಾಣದಂತೆ ಮೌನವಾಗಿದ್ದಾರೆ. ಶೌಚಾಲಯ ಸ್ವಚ್ಛಗೊಳಿಸಿ ಸಾರ್ವಜನಿಕರ ಬಳಕೆಗೆ ಅನುಕೂಲ ಮಾಡಿಕೊಡಬೇಕು. ಈ ಕುರಿತು ಹಲವು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜವಾಗಿಲ್ಲ.

ಎಸ್. ವೆಂಕಟಸ್ವಾಮಿ, ಮಲ್ಲೇಶಪಾಳ್ಯದ ನಿವಾಸಿ



ಮಲ್ಲೇಶಪಾಳ್ಯದಲ್ಲಿರುವ ಸಾರ್ವಜನಿಕ ಶೌಚಾಲಯ ಮುಚ್ಚಿರುವುದು

'ರಸ್ತೆ ಗುಂಡಿ ಮುಚ್ಚಿ'

ಹೊಸ ತಿಪ್ಪಸಂದ್ರದ 4ನೇ ಮುಖ್ಯರಸ್ತೆಯ 6ನೇ ಕ್ರಾಸ್ ಬಳಿಯ ರಸ್ತೆಯಲ್ಲಿ ಗುಂಡಿಗಳು ಬಿದ್ದಿದೆ. ಈ ಮಾರ್ಗದಲ್ಲಿ ಪ್ರತಿನಿತ್ಯ ಸಾವಿರಾರೂ ವಾಹನಗಳು ಸಂಚರಿಸುತ್ತವೆ. ಮಳೆಗಾಲದಲ್ಲಿ ಗುಂಡಿಗಳಲ್ಲಿ ನೀರು ನಿಂತು ರಸ್ತೆ ಯಾವುದು, ಗುಂಡಿ ಯಾವುದು ಎಂಬುದು ಗೊತ್ತಾಗುವುದಿಲ್ಲ. ಇದರಿಂದ ಪ್ರತಿದಿನ ಅಪಘಾತಗಳು ಸಂಭವಿಸುತ್ತಿವೆ. ಕೇವಲ ತೇಪೆ ಹಾಕುವ ಕೆಲಸ ಮಾತ್ರ ಮಾಡಲಾಗುತ್ತಿದೆ. ಅಧಿಕಾರಿಗಳಿಗೆ ಸಮಸ್ಯೆಗಳ ಬಗ್ಗೆ ತಿಳಿಸಿದ್ದರೂ ನಿರ್ಲಕ್ಷ್ಯವಹಿಸಿದ್ದಾರೆ. ಈಗಲಾದರೂ ಇತ್ತ ಗಮನಹರಿಸಿ ವಾಹನ ಸವಾರರಿಗೆ ಆಗುತ್ತಿರುವ ಅನನುಕೂಲ ಸರಿಪಡಿಸಬೇಕು.

ನವೀನಕುಮಾರ್.ಎಂ. ಸಿಂಹ, ಸ್ಥಳೀಯ ನಿವಾಸಿ



ಹೊಸ ತಿಪ್ಪಸಂದ್ರ ಬಡಾವಣೆಯ 4ನೇ ಮುಖ್ಯರಸ್ತೆಯ 6ನೇ ಕ್ರಾಸ್‌ನ ರಸ್ತೆಯಲ್ಲಿ ಗುಂಡಿ ಬಿದ್ದಿರುವುದು

'ರಸ್ತೆ ದುರಸ್ತಿಗೊಳಿಸಿ'

ಎಚ್‌ಎಂಟಿ ಬಡಾವಣೆಯ ನಾಗಸಂದ್ರದ ಮುಖರಸ್ತೆ ಸಂಪೂರ್ಣ ಹದಗೆಟ್ಟಿದೆ. ಮಳೆ ಬಂದರೆ ರಸ್ತೆಯಲ್ಲ ಕೆಸರು ಗದ್ದೆಯಾಗಿ ಮಾರ್ಪಡುತ್ತದೆ. ಅಲ್ಲದೇ ರಸ್ತೆಯುದ್ದಕ್ಕೂ ಬಿದ್ದಿರುವ ದೊಡ್ಡ ಗುಂಡಿಗಳು ಅಪಾಯಕ್ಕೆ ಆಹ್ವಾನ ನೀಡುತ್ತಿವೆ. ಮೂರು ತಿಂಗಳ ಹಿಂದೆ ರಸ್ತೆ ಕಾಮಗಾರಿ ನಡೆದಿತ್ತು. ಕಳಪೆ ಕಾಮಗಾರಿಯ ಕಾರಣದಿಂದ ರಸ್ತೆಯಲ್ಲಿ ಮತ್ತೆ ಗುಂಡಿ ಬಿದ್ದಿದೆ. ಮಳೆಗಾಲದಲ್ಲಿ ಗುಂಡಿಗಳಲ್ಲಿ ನೀರು ನಿಲ್ಲುವುದರಿಂದ ರಸ್ತೆ ಯಾವುದು ಗುಂಡಿ ಯಾವುದೂ ಎಂದು ಹುಡುಕುವಂತಹ ಪರಿಸ್ಥಿತಿ ನಿರ್ಮಾಣವಾಗಿ. ಹಲವಾರು ಅಪಘಾತಗಳು ಸಂಭವಿಸುವ ನಿದರ್ಶನಗಳಿವೆ. ರಸ್ತೆ ದುರಸ್ತಿಗೊಳಿಸುವಂತೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಕೂಡಲೇ ರಸ್ತೆ ದುರಸ್ತಿಗೊಳಿಸಿಬೇಕು.

ರೇಣುಕ.ಕೆ. ಬಿ., ಸ್ಥಳೀಯ ನಿವಾಸಿ



ಎಚ್.ಎಂ.ಟಿ ಬಡಾವಣೆಯ ನಾಗಸಂದ್ರ ಮುಖ್ಯರಸ್ತೆ ಹಾಳಾಗಿದೆ.

ಚಿತ್ರಾವಳಿ



ಜಯಕರ್ನಾಟಕ ಜನಪರ ವೇದಿಕೆ ವತಿಯಿಂದ ಯಲಹಂಕ ತಾಲ್ಲೂಕಿನ ಕೋಡಗಲಹಟ್ಟಿ ಗ್ರಾಮದ ಕೆರೆ ಆವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿವಿಧ ಬಗೆಯ ಸಸಿಗಳನ್ನು ನೆಡಲಾಯಿತು. ವೇದಿಕೆಯ ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಜೆ.ಶ್ರೀನಿವಾಸ್, ತಾಲ್ಲೂಕು ಪಂಚಾಯಿತಿ ಮಾಜಿ ಉಪಾಧ್ಯಕ್ಷೆ ಸುಜಾತ ಶ್ರೀನಿವಾಸ್ ಇದ್ದರು.



ಸ್ವಾತಂತ್ರ್ಯದ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ದೇಶಾದ್ಯಂತ ನಡೆಯಲಿರುವ ಹರ್ ಘರ್ ತಿರಂಗಾ ಅಭಿಯಾನದ ಅಂಗವಾಗಿ ಬಿಜೆಪಿ ರಾಜ್ಯಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಚಲನಚಿತ್ರ ನಟ ಸುದೀಪ್ ಅವರನ್ನು ಭೇಟಿ ಮಾಡಿ ಅವರಿಗೆ ತ್ರಿವರ್ಣ ಧ್ವಜ ನೀಡಿ, ಅಭಿಯಾನಕ್ಕೆ ಬೆಂಬಲ ಕೋರಿದರು.



ಬ್ಯಾಟರಾಯನಪುರ ಕ್ಷೇತ್ರವ್ಯಾಪ್ತಿಯ ಬಂಡಿಕೊಡಿಗೇಹಳ್ಳಿ ಗ್ರಾಮಪಂಚಾಯಿತಿ ವತಿಯಿಂದ ಆಯೋಜಿಸಿದ್ದ ಗ್ರಾಮಸಭೆಯಲ್ಲಿ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮಾಡಲಾಯಿತು. ಗ್ರಾಮ ಪಂಚಾಯಿತಿ ಅಧ್ಯಕ್ಷ ಎನ್. ಜಗದೀಶ್, ಉಪಾಧ್ಯಕ್ಷೆ ಚೈತ್ರ ರಾಜಶೇಖರ್, ಪಿಡಿಒ ಪ್ರಾಣೇಶ್ ಕುಮಾರ್ ಇದ್ದರು.



ಪೀಣ್ಯದಾಸರಹಳ್ಳಿ ಸಮೀಪದ ಪೀಣ್ಯ 2ನೇ ಹಂತದಲ್ಲಿ 75 ನೇ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಪ್ರಯುಕ್ತ ಡಾ.ಶ್ಯಾಮ್ ಪ್ರಸಾದ್ ಮುಖರ್ಜಿ ಹೆಸರಿನ ನೂತನ ಬಿಜೆಪಿ ಕಾರ್ಯಾಲಯ ಹಾಗೂ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಸಂಸದ ಡಿ.ವಿ. ಸದಾನಂದಗೌಡ ಅವರು ಉದ್ಘಾಟಿಸಿದರು. ಮಾಜಿ ಶಾಸಕ ಎಸ್. ಮುನಿರಾಜು, ದಾಸರಹಳ್ಳಿ ಬಿಜೆಪಿ ಮಂಡಲ ಅಧ್ಯಕ್ಷ ಎನ್. ಲೋಕೇಶ್, ಶೆಟ್ಟಿಹಳ್ಳಿ ಸುರೇಶ್ , ಬಿಬಿಎಂಪಿ ಮಾಜಿ ಸದಸ್ಯ ಗಂಗಾಧರ್, ಟಿ.ಎಸ್. ಗಂಗರಾಜು, ಸಪ್ತಗಿರಿ ಆನಂದ್, ಪಿ.ಎಚ್. ರಾಜು, ಟಿ. ಶಿವಕುಮಾರ್ ಇದ್ದರು.



ವಾಕಥಾನ್

ಸ್ವಾತಂತ್ರ್ಯ ಅಮೃತಮಹೋತ್ಸವದ ಪ್ರಯುಕ್ತ ಚಿಕ್ಕಪೇಟೆ ಶಾಸಕ ಉದಯ ಗರುಡಾಚಾರ್ ಅವರು ನಗರದಲ್ಲಿ ಭಾನುವಾರ ಆಯೋಜಿಸಿದ್ದ ವಾಕಥಾನ್‌ನಲ್ಲಿ ಸಾರ್ವಜನಿಕರು ರಾಷ್ಟ್ರಧ್ವಜ ಹಿಡಿದು ಸಂಭ್ರಮಿಸಿದರು – ಪ್ರಜಾವಾಣಿ ಚಿತ್ರ

ಸಿದ್ದರಾಮಯ್ಯ– ಡಿಕೆಶಿಯದ್ದು ಧೃತರಾಷ್ಟ್ರನ ಆಲಿಂಗನ: ಅಶೋಕ

ಪ್ರಜಾವಾಣಿ ವಾರ್ತೆ

ಮದ್ದೂರು: 'ದಾವಣಗೆರೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮತ್ತು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಲಿಂಗನವು ಧೃತರಾಷ್ಟ್ರನ ಆಲಿಂಗನವಿದ್ದಂತೆ' ಎಂದು ಕಂದಾಯ ಸಚಿವ ಆರ್. ಅಶೋಕ ವ್ಯಂಗ್ಯವಾಡಿದರು.

ಇಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಹುಲ್ ಗಾಂಧಿ ಸನ್ನೆ ಮಾಡಿದ ನಂತರ ಆಲಿಂಗನ ಮಾಡಿಕೊಂಡಿದ್ದಾರೆ' ಎಂದು ಟೀಕಿಸಿದರು.

'ಶಿವಕುಮಾರ್, ಈ ಹಿಂದೆ ವಿಧಾನಸಭೆಯಲ್ಲಿ ಸುಮ್ಮನಿದ್ದ ಎಚ್.ಡಿ.ಕುಮಾರಸ್ವಾಮಿ ಅವರ ಕೈಹಿಡಿದು ಎತ್ತಿ ಜೋಡೆತ್ತು ಜೋಡೆತ್ತು ಎಂದಿದ್ದರು. ನಂತರ ಆ ಸಂಬಂಧಕ್ಕೆ ಕಾವೇರಿ ನದಿಯಲ್ಲಿ ಎಳ್ಳು ನೀರು ಬಿಟ್ಟರು. ಈಗ ಸಿದ್ದರಾಮಯ್ಯ ಅವರನ್ನು ಆಲಿಂಗಿಸಿಕೊಂಡಿದ್ದಾರೆ. ಈ ಸಂಬಂಧಕ್ಕೆ ಯಾವ ನದಿಗೆ ಎಳ್ಳು ನೀರು ಬಿಡುತ್ತಾರೋ ಗೊತ್ತಿಲ್ಲ' ಎಂದು ವ್ಯಂಗ್ಯವಾಡಿದರು.

ಬಿಜೆಪಿ ಹಾಗೂ ಆರ್‌ಎಸ್‌ಎಸ್ ಬಗ್ಗೆ ಮಾತನಾಡಲು ಸಿದ್ದರಾಮಯ್ಯ ಅವರಿಗೆ ನೈತಿಕತೆ ಇಲ್ಲ ಎಂದರು. ಅಲ್ಲದೇ, ಪಾಕಿಸ್ತಾನ, ಚೀನಾ ಹಾಗೂ ಶತ್ರು ರಾಷ್ಟ್ರಗಳ ವಿರುದ್ಧ ಹೋರಾಡುವ ಮೂಲಕ ದೇಶ ರಕ್ಷಣೆಗೆ ಬಿಜೆಪಿ ಕಟಿಬದ್ಧವಾಗಿದೆ' ಎಂದು ಅಶೋಕ ಅವರು ಹೇಳಿದರು.

ಅಪಘಾತ– ಒಂದೇ ಕುಟುಂಬದ ನಾಲ್ವರಿಗೆ ಗಾಯ

ಶಿಡ್ಲಘಟ್ಟ: ನಗರ ಹೊರವಲಯದ ಹಂಡಿಗನಾಳ ಬಳಿ ಬೈಕಿಗೆ ಕಾರು ಡಿಕ್ಕಿ ಹೊಡೆದು ನಾಲ್ವರು ಗಂಭೀರ ಗಾಯಗೊಂಡಿದ್ದಾರೆ.

ತಾಲ್ಲೂಕಿನ ಎ.ಹುಣಸೇನಹಳ್ಳಿಯ ಗ್ರಾಮದ ಮುನಿರಾಜು ತನ್ನ ಪತ್ನಿ ಮತ್ತು ಮಕ್ಕಳೊಂದಿಗೆ ಬೈಕ್‌ನಲ್ಲಿ ಚಿಕ್ಕಬಳ್ಳಾಪುರ ಕಡೆಯಿಂದ ಶಿಡ್ಲಘಟ್ಟ ಕಡೆಗೆ ಬರುವ ವೇಳೆ ಎದುರಿನಿಂದ ಬಂದ ಕಾರು ಡಿಕ್ಕಿ ಹೊಡೆದಿದೆ. ಮುನಿರಾಜು ಗಂಭೀರ ಗಾಯಗೊಂಡಿದ್ದು, ಚಿಕಿತ್ಸೆಗಾಗಿ ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ರವಾನಿಸಲಾಗಿದೆ. ಮುನಿರಾಜು ಪತ್ನಿ ನಯನ, ಮಕ್ಕಳಾದ ನಿಕಿಲ್, ನಿಹಾಗ್ ಶಿಡ್ಲಘಟ್ಟ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅಪಘಾತವಾದ ಕೂಡಲೇ ಕಾರು ನಿಲ್ಲಿಸದೆ ಚಾಲಕ ಪರಾರಿಯಾಗಿದ್ದಾನೆ ಎಂದು ಪ್ರತ್ಯಕ್ಷ ದರ್ಶಿಗಳು ತಿಳಿಸಿದ್ದಾರೆ.

ಮೂಲಸೌಕರ್ಯ ಒದಗಿಸದ ಇಲಾಖೆ: ವಿಚಾರಣೆ ಆರಂಭಿಸಿದ ಲೋಕಾಯುಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಲಾರ ನಗರದಲ್ಲಿ ಅಲ್ಲಿನ ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿರ್ಮಿಸಿರುವ ದೇವರಾಜ ಅರಸು ಬಡಾವಣೆಗೆ 28 ವರ್ಷಗಳಾದರೂ ಅಗತ್ಯ ಮೂಲಸೌಕರ್ಯ ಒದಗಿಸಲು ವಿಫಲವಾಗಿರುವ ನಗರಾಭಿವೃದ್ಧಿ ಇಲಾಖೆ ಅಧಿಕಾರಿಗಳ ವಿರುದ್ಧ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ಆರಂಭಿಸಿದ್ದಾರೆ.

ರಾಷ್ಟ್ರೀಯ ಹೆದ್ದಾರಿ–75 ರಲ್ಲಿರುವ ಟಮಕ ಗ್ರಾಮದಲ್ಲಿ 121 ಎಕರೆ 3 ಗುಂಟೆ ವಿಸ್ತೀರ್ಣದಲ್ಲಿ 1994–95ರಲ್ಲಿ ನಿರ್ಮಿಸಿರುವ ಬಡಾವಣೆಗೆ ಈವರೆಗೂ ಸರಿಯಾದ ಮೂಲಸೌಕರ್ಯ ಒದಗಿಸಿಲ್ಲ ಎಂದು ಅಲ್ಲಿನ ನಿವಾಸಿಗಳು ಅಹವಾಲು ಸಲ್ಲಿಸಿದ್ದರು. ಈ ಕುರಿತು ಲೋಕಾಯುಕ್ತ ಪೊಲೀಸ್ ವಿಭಾಗದಿಂದ ತನಿಖಾ ವರದಿ ಪಡೆದಿರುವ ಲೋಕಾಯುಕ್ತರು, ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಮತ್ತು ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರ ವಿರುದ್ಧ ಪ್ರಕರಣ ದಾಖಲು ಮಾಡಿದ್ದಾರೆ.

'ದೇವರಾಜ ಅರಸು ಬಡಾವಣೆಯಲ್ಲಿ 1,426 ನಿವೇಶನಗಳನ್ನು ಹಂಚಿಕೆ ಮಾಡಲಾಗಿತ್ತು. ಇನ್ನೂ ಕೆಲವು ಮಧ್ಯಂತರ, ಮೂಲೆ ಮತ್ತು ಅನಿಯಮಿತ ನಿವೇಶನಗಳನ್ನು ಮಾರಾಟ ಮಾಡಲಾಗುತ್ತಿದೆ. ಬಡಾವಣೆಯಲ್ಲಿ ನಿರ್ಮಾಣ ಮಾಡಿರುವ 148 ಮನೆಗಳಿಗೆ ಕುಡಿಯುವ ನೀರು, ಸುಸಜ್ಜಿತ ರಸ್ತೆ, ವಿದ್ಯುತ್ ಸಂಪರ್ಕ, ಚರಂಡಿ, ಒಳಚರಂಡಿ, ಘನತ್ಯಾಜ್ಯ ವಿಲೇವಾರಿಗೆ ಸೌಲಭ್ಯ ಕಲ್ಪಿಸಿಲ್ಲ' ಎಂದು ಪೊಲೀಸರು ತನಿಖಾ ವರದಿ ಸಲ್ಲಿಸಿದ್ದರು.

ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ₹77.74 ಕೋಟಿ ಆದಾಯವಿದ್ದು, ಒಬ್ಬ ದ್ವಿತೀಯ ದರ್ಜೆ ಸಹಾಯಕ ಮಾತ್ರ ಕಾಯಂ ಸಿಬ್ಬಂದಿಯಾಗಿದ್ದಾರೆ. ಉಳಿದ ಯಾವುದೇ ಅಧಿಕಾರಿ ಮತ್ತು ಸಿಬ್ಬಂದಿ ಇಲ್ಲದ ಕಾರಣ ಹಣ ವೆಚ್ಚ ಮಾಡಲು ಹಾಗೂ ಕಾಮಗಾರಿಗಳನ್ನು ಕೈಗೊಳ್ಳಲು ಆಗುತ್ತಿಲ್ಲ. ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾಗಿ ಪ್ರಭಾರ ಹೊಂದಿರುವ ಅಧಿಕಾರಿಗಳೂ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ ಎಂದು ವರದಿಯಲ್ಲಿ ತಿಳಿಸಿದ್ದರು. ಈ ವರದಿ ಆಧಾರದಲ್ಲಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿರುವ ಲೋಕಾಯುಕ್ತರು, ವಿಚಾರಣೆ ಆರಂಭಿಸಿದ್ದಾರೆ. ಬಡಾವಣೆಯ ನಿವಾಸಿಗಳಿಗೆ ಮೂಲಸೌಕರ್ಯ ಒದಗಿಸದ ಕುರಿತು ತನಿಖಾ ವರದಿಯಲ್ಲಿನ ಅಂಶಗಳಿಗೆ ಉತ್ತರ ನೀಡುವಂತೆ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಹಾಗೂ ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಿದ್ದಾರೆ.

ಸಾವಿನಲ್ಲೂ ಒಂದಾದ ದಂಪತಿ

ಬಸವಾಪಟ್ಟಣ: ಸಮೀಪದ ಚಿರಡೋಣಿಯ ರೈತ ಹನುಮಂತಪ್ಪ (98) ಮತ್ತು ಅವರ ಪತ್ನಿ ಜಯಮ್ಮ (82) ಅವರು ಭಾನುವಾರ ಕೇವಲ ಒಂದೂವರೆ ಗಂಟೆಯ ಅವಧಿಯಲ್ಲಿ ನಿಧನರಾಗಿದ್ದು, ವೃದ್ಧ ದಂಪತಿ ಸಾವಿನಲ್ಲೂ ಒಂದಾಗಿದ್ದಾರೆ.

ಬೆಳಿಗ್ಗೆ 8.30ರಲ್ಲಿ ಜಯಮ್ಮ ವಯೋಸಹಜವಾಗಿ ನಿಧನರಾದರು. ಪತ್ನಿಯ ಅಗಲಿಕೆಯನ್ನು ಸಹಿಸಲಾರದೇ ಬೆಳಿಗ್ಗೆ 10ಕ್ಕೆ ಹನುಮಂತಪ್ಪ ಹೃದಯಾಘಾತದಿಂದ ನಿಧನರಾದರು. 'ಇವರು ಸ್ವಭಾವತಃ ಉತ್ತಮ ಗುಣ, ನಡತೆ ಹೊಂದಿದ್ದರು' ಎಂದು ಗ್ರಾಮಸ್ಥರು ತಿಳಿಸಿದರು. ದಂಪತಿಗೆ ನಾಲ್ವರು ಪುತ್ರಿಯರು, ಒಬ್ಬ ಪುತ್ರ ಇದ್ದಾರೆ. ಅಂತ್ಯಕ್ರಿಯೆ ಭಾನುವಾರ ನಡೆಯಿತು.

ಶ್ರೀರಂಗಪಟ್ಟಣಕ್ಕೆ 'ಟಿಪ್ಪು ಸುಲ್ತಾನ್ ನಗರ' ಹೆಸರಿಡಿ

'ಟಿಪ್ಪು ಸುಲ್ತಾನ್ ಇತಿಹಾಸದ ಅನಾವರಣ' ಕಾರ್ಯಕ್ರಮದಲ್ಲಿ ಲಲಿತಾ ನಾಯಕ್ ಆಗ್ರಹ

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): 'ಟಿಪ್ಪು ಸುಲ್ತಾನ್ ಬ್ರಿಟಿಷರ ವಿರುದ್ಧ ಹೋರಾಡಿ ಪ್ರಾಣಾರ್ಪಣೆ ಮಾಡಿದ್ದಾರೆ. ಹೀಗಾಗಿ, ಶ್ರೀರಂಗಪಟ್ಟಣಕ್ಕೆ ಟಿಪ್ಪು ಸುಲ್ತಾನ್ ನಗರ ಎಂದು ಮರುನಾಮಕರಣ ಮಾಡಬೇಕು' ಎಂದು ಲೇಖಕಿ ಬಿ.ಟಿ.ಲಲಿತಾ ನಾಯಕ್ ಆಗ್ರಹಿಸಿದರು.

ಸಮೀಪದ ಟಿಪ್ಪು ಸಮಾಧಿ ಸ್ಥಳದ ಎದುರು ಕರ್ನಾಟಕ ಟಿಪ್ಪು ಸುಲ್ತಾನ್ ಸೌಹಾರ್ದ ವೇದಿಕೆ ಭಾನುವಾರ ಏರ್ಪಡಿಸಿದ್ದ 'ಟಿಪ್ಪು ಸುಲ್ತಾನ್ ಇತಿಹಾಸದ ಅನಾವರಣ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಲವು ಪಟ್ಟಣ ಮತ್ತು ನಗರಗಳ ಹೆಸರುಗಳನ್ನು ಬದಲಿಸುತ್ತಿವೆ. ಟಿಪ್ಪು ಸುಲ್ತಾನ್ ಸಮಾಜ ಸುಧಾರಣೆಗೆ ವಿಶೇಷ ಕೊಡುಗೆ ನೀಡಿದ್ದಾರೆ. ಮಹಿಳೆಯರು, ರೈತರು, ಹಿಂದುಳಿದ ವರ್ಗದವರು ಸ್ವಾಭಿಮಾನದಿಂದ ಬದುಕುವಂತೆ ಮಾಡಿದ್ದಾರೆ. ಅವರು ಸಮಾಜ ವಿಜ್ಞಾನಿಯೂ ಹೌದು. ಹಾಗಾಗಿ ಅವರ ರಾಜಧಾನಿಯಾಗಿದ್ದ ಈ ಊರಿಗೆ ಟಿಪ್ಪು ಸುಲ್ತಾನ್ ನಗರ ಎಂದು ಹೆಸರಿಡಬೇಕು' ಎಂದು ಒತ್ತಾಯಿಸಿದರು.


'ಟಿಪ್ಪುವಿನಂತಹ ನಿಜವಾದ ಮೇರು ವ್ಯಕ್ತಿಗಳನ್ನು ಮೂಲೆ ಗುಂಪು ಮಾಡುತ್ತಿರುವ ಸರ್ಕಾರಗಳು ಯುವಕರನ್ನು ಗುಲಾಮರನ್ನಾಗಿ ಮಾಡುವ ಅಗ್ನಿಪಥ ಯೋಜನೆ, ಗೋಹತ್ಯೆ ನಿಷೇಧ ಕಾಯ್ದೆ ಜಾರಿಗೊಳಿಸಲು ಮುಂದಾಗಿವೆ' ಎಂದು ಆರೋಪಿಸಿದರು.

ಎಸ್‌ಡಿಪಿಐ ರಾಜ್ಯ ಘಟಕದ ಅಧ್ಯಕ್ಷ ಅಬ್ದುಲ್ ಮಜೀದ್ ಮಾತನಾಡಿ, 'ಟಿಪ್ಪು ಸುಲ್ತಾನ್ ದೇಶದ್ರೋಹಿ, ಕನ್ನಡ ಮತ್ತು ಹಿಂದೂ ವಿರೋಧಿ ಎಂದು ಅಪಪ್ರಚಾರ ಮಾಡಲಾಗುತ್ತಿದೆ. ಇತಿಹಾಸ ತಿರುಚಿ ಹೇಳಲಾಗುತ್ತಿದೆ. ಆದರೆ, ಸತ್ಯ ಸತ್ಯವೇ. ರೈತರಿಗೆ ಭೂಮಿ ಹಂಚಿಕೆ, ಕೃಷಿ ಸಾಲ, ಮದ್ಯಪಾನ ನಿಷೇಧ, ಹಿಂದೂ ದೇವಾಲಯ ಮತ್ತು ಮಠಗಳಿಗೆ ದಾನ ದತ್ತಿಗಳು ಸೇರಿದಂತೆ ಟಿಪ್ಪುವಿನ ಅನೇಕ ಕಾರ್ಯಕ್ರಮಗಳು ಜನ ಮೆಚ್ಚುಗೆ ಗಳಿಸಿವೆ. ಅಂತಹ ವೀರನನ್ನು ಸಮಾಜ ಹಳದಿ ಕಣ್ಣಿನಿಂದ ನೋಡಬಾರದು' ಎಂದರು.

ಪಿಎಫ್‌ಐ ಸಂಘಟನೆಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮಹಮದ್ ಶಕೀರ್ ಮಾತನಾಡಿ, 'ಟಿಪ್ಪು ಮುಸ್ಲಿಂ ಎಂಬ ಒಂದೇ ಕಾರಣಕ್ಕೆ ಬಿಜೆಪಿ ಸರ್ಕಾರ ಮತ್ತು ಕೆಲವು ಸಂಘಟನೆಗಳು ಅವರನ್ನು ಖಳನಾಯಕರಂತೆ ಬಿಂಬಿಸುತ್ತಿವೆ' ಎಂದು ದೂರಿದರು.

ಟಿಪ್ಪು ಸುಲ್ತಾನ್ ಆಡಳಿತ ಮತ್ತು ಸಾಧನೆ ಕುರಿತ ಚಿತ್ರಗಳ ಪ್ರದರ್ಶನ ಏರ್ಪಡಿಸಲಾಗಿತ್ತು.

ಟಿಪ್ಪು ಸುಲ್ತಾನ್ ಸೌಹಾರ್ದ ವೇದಿಕೆ ಅಧ್ಯಕ್ಷ ತಬ್ರೇಜ್ ಸೇಟ್, ಉಪಾಧ್ಯಕ್ಷ ಡಾ.ಚನ್ನಕೇಶವಮೂರ್ತಿ, ಗಾಂಧಿವಾದಿ ಡಾ.ಬಿ. ಸುಜಯಕುಮಾರ್, ಮಹಮದ್ ನದೀಮ್, ದಲಿತ ಸಂಘರ್ಷ ಸಮಿತಿಯ ಚೋರನಹಳ್ಳಿ ಶಿವಣ್ಣ, ವಕೀಲರಾದ ಸಿ.ಎಸ್. ವೆಂಕಟೇಶ್, ಬಸವರಾಜು. ಬಿ.ಟಿ. ವಿಶ್ವನಾಥ್, ಟಿಪ್ಪು ವಕ್ಫ್ ಎಸ್ಟೇಟ್ ಕಾರ್ಯದರ್ಶಿ ಮಹಮದ್ ಇರ್ಫಾನ್, ಮಜರ್ ಪಾಷ ಇದ್ದರು.



❦ ಸುಭಾಷಿತ ❦
ಸ್ವಂತ ಪರಿಶ್ರಮದಿಂದ ದುಡಿಯುವ ಯಾರೂ ತಮ್ಮ ಆತ್ಮಾಭಿಮಾನವನ್ನು ಕಳೆದುಕೊಳ್ಳುವುದಿಲ್ಲ.
– ಜಾರ್ಜ್ ಬರ್ನಾರ್ಡ್ ಶಾ

ಕೋವಿಡ್ ಪೂರ್ವದ ಮಟ್ಟಕ್ಕೆ ರೆಪೊ ನಿಯಂತ್ರಣಕ್ಕೆ ಬರುವುದೇ ಹಣದುಬ್ಬರ?

ದೇಶದಲ್ಲಿ ಹಣದುಬ್ಬರ ದರವು 'ಸ್ವೀಕಾರಾರ್ಹ ಅಲ್ಲದಷ್ಟು ಅತಿಯಾಗಿದೆ' ಎಂದು ಹೇಳಿರುವ ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿಯು (ಎಂಪಿಸಿ) ರೆಪೊ ದರವನ್ನು ಶುಕ್ರವಾರ ಶೇಕಡ 0.50ರಷ್ಟು ಹೆಚ್ಚಿಸಿದೆ. ಇದು ನಿರೀಕ್ಷಿತವೇ ಆಗಿತ್ತು. ಬ್ಯಾಂಕ್‌ಗಳಿಗೆ ಆರ್‌ಬಿಐ ನೀಡುವ ಹಣಕ್ಕೆ ವಿಧಿಸುವ ಬಡ್ಡಿ ದರ (ರೆಪೊ ದರ) ಈಗ ಕೋವಿಡ್ ಪೂರ್ವದ ಮಟ್ಟವನ್ನು ಮೀರಿದೆ. 2019ರ ಆಗಸ್ಟ್‌ನಲ್ಲಿ ರೆಪೊ ದರವು ಶೇಕಡ 5.40ರಷ್ಟು ಇತ್ತು. ಶುಕ್ರವಾರದ ಏರಿಕೆಯ ನಂತರ ದರವು ಮತ್ತೆ ಈ ಮಟ್ಟವನ್ನು ತಲುಪಿದೆ. ರೆಪೊ ದರವನ್ನು ಆರ್‌ಬಿಐ ಶೇ 0.35ರಿಂದ ಶೇ 0.50ರವರೆಗೆ ಹೆಚ್ಚಳ ಮಾಡಬಹುದು ಎಂದು ಮಾರುಕಟ್ಟೆ ತಜ್ಞರು ಮೊದಲೇ ಅಂದಾಜು ಮಾಡಿದ್ದರು. ಹೀಗಾಗಿ, ಆರ್‌ಬಿಐ ತೀರ್ಮಾನವು ದೇಶದ ಹಣಕಾಸು ಮಾರುಕಟ್ಟೆಗಳ ಮೇಲೆ ಅನಿರೀಕ್ಷಿತ ಪರಿಣಾಮವನ್ನೇನೂ ಬೀರಿದಂತಿಲ್ಲ. ರೆಪೊ ದರವನ್ನು ಆರ್‌ಬಿಐ ನಿರ್ಧರಿಸುವುದು ಚಿಲ್ಲರೆ ಹಣದುಬ್ಬರದ ಪ್ರಮಾಣವನ್ನು ಆಧರಿಸಿ. ಅದು ಗರಿಷ್ಠ ಮಟ್ಟವನ್ನು ತಲುಪಿ ಆಗಿದೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ. ಮುಂದಿನ ದಿನಗಳಲ್ಲಿ ಹಣದುಬ್ಬರ ಪ್ರಮಾಣವು ತುಸು ಇಳಿಕೆ ಆಗಬಹುದಾದರೂ, ಖುದ್ದು ಆರ್‌ಬಿಐ ಅಂದಾಜು ಮಾಡಿರುವ ಪ್ರಕಾರ ಅದು ಗರಿಷ್ಠ ಮಿತಿಯೊಳಗೆ ಬರುವ ಸಾಧ್ಯತೆ ಇಲ್ಲ.



ರೆಪೊ ದರ ಏರಿಕೆಯು ಹಬ್ಬಗಳ ಋತುವಿನಲ್ಲಿ ವಾಹನ ಮತ್ತು ಮನೆ ಖರೀದಿಯ ಮೇಲೆ ಯಾವ ಬಗೆಯ ಪರಿಣಾಮ ಬೀರಬಹುದು ಎಂಬುದು ಗಮನಿಸಬೇಕಾದ ಅಂಶ

ಪ್ರಸಕ್ತ ಹಣಕಾಸು ವರ್ಷದಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 6.7ರಷ್ಟು ಇರಲಿದೆ ಎಂದು ಆರ್‌ಬಿಐ ಅಂದಾಜಿಸಿದೆ. ಹಣಕಾಸಿನ ನೀತಿಯನ್ನು ಬಿಗಿಗೊಳಿಸಿ, ರೆಪೊ ದರವನ್ನು ಇನ್ನಷ್ಟು ಹೆಚ್ಚಿಸುವ ಅಗತ್ಯ ಎದುರಾಗಬಹುದು ಎಂಬುದರ ಸೂಚನೆಯನ್ನು ಈ ಅಂದಾಜು ನೀಡುತ್ತಿದೆ.

ದೇಶದಲ್ಲಿ ಕೋವಿಡ್ ಹರಡುವುದನ್ನು ನಿಯಂತ್ರಿಸುವ ಉದ್ದೇಶದಿಂದ ಲಾಕ್‌ಡೌನ್ ಜಾರಿಗೊಳಿಸಿದ ನಂತರ ರೆಪೊ ದರವನ್ನು ಆರ್‌ಬಿಐ ಭಾರಿ ಪ್ರಮಾಣದಲ್ಲಿ ಇಳಿಕೆ ಮಾಡಿತು. ಇದರಿಂದಾಗಿ ವ್ಯವಸ್ಥೆಯಲ್ಲಿ ನಗದು ಲಭ್ಯತೆ ಜಾಸ್ತಿಯಾಯಿತು, ಹಣದುಬ್ಬರ ಹೆಚ್ಚಾಗಲು ಎಡೆಮಾಡಿಕೊಟ್ಟಿತು ಎಂಬ ವಾದ ಇದೆ. ಆದರೆ, ಈ ವಾದವನ್ನು ದಾಸ್ ಒಪ್ಪಿಲ್ಲ. ಹಿಂದೆ ಮಾಡಿರುವ ರೆಪೊ ದರ ಇಳಿಕೆಗೂ ಹಣದುಬ್ಬರಕ್ಕೂ ಸಂಬಂಧ ಇಲ್ಲ. ಪೂರೈಕೆ ವ್ಯವಸ್ಥೆಯಲ್ಲಿನ ಸಮಸ್ಯೆಗಳು ಹಾಗೂ ಅಂತರರಾಷ್ಟ್ರೀಯ ವಿದ್ಯಮಾನಗಳ ಕಾರಣದಿಂದಾಗಿ ಹಣದುಬ್ಬರ ಹೆಚ್ಚಾಗಿದೆ ಎಂದು ದಾಸ್ ಹೇಳಿದ್ದಾರೆ. ಈ ಮಾತಿನಲ್ಲಿ ಒಂದಿಷ್ಟು ಸತ್ಯ ಖಂಡಿತ ಇದೆ. ಲಾಕ್‌ಡೌನ್ ಜಾರಿಗೆ ಬಂದ ನಂತರ ಪೂರೈಕೆ ವ್ಯವಸ್ಥೆಯಲ್ಲಿ ಏರುಪೇರು ಆಗಿದೆ. ಅದು ಹಣದುಬ್ಬರ ಹೆಚ್ಚಳಕ್ಕೆ ದಾರಿಮಾಡಿಕೊಟ್ಟಿದೆ. ರಷ್ಯಾ-ಉಕ್ರೇನ್ ಯುದ್ಧ ಕೂಡ ದೇಶದಲ್ಲಿ ಹಲವು ಅಗತ್ಯ ವಸ್ತುಗಳ ಬೆಲೆ ಏರಿಕೆಗೆ ನೇರವಾಗಿ ಕಾರಣವಾಗಿದೆ. ಈಚಿನ ದಿನಗಳಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ದೊಡ್ಡ ಮಟ್ಟದಲ್ಲಿ ಕುಸಿತ ಕಂಡಿರುವುದು ಕೂಡ ಹಣದುಬ್ಬರ ಹೆಚ್ಚಾಗಲು ಕಾರಣವಾಗಿದೆ. ಈ ಎಲ್ಲವುಗಳಿಂದಾಗಿ ಆಗಿರುವ ಹಣದುಬ್ಬರ ಹೆಚ್ಚಳವನ್ನು ರೆಪೊ ದರ ಏರಿಕೆಯ ಮೂಲಕ ನಿಯಂತ್ರಣಕ್ಕೆ ತರಲು ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೆ ಎಂಬ ಪ್ರಶ್ನೆ ಇದೆ. ಅಕ್ಟೋಬರ್‌ನಲ್ಲಿ ನಡೆಯಬೇಕಿರುವ ಎಂಪಿಸಿ ಸಭೆಯಲ್ಲಿಯೂ ರೆಪೊ ದರವನ್ನು ಮತ್ತೆ ಏರಿಸುವ ಸಾಧ್ಯತೆ ಇದೆ ಎಂಬ ಸೂಚನೆಯನ್ನು ಆರ್‌ಬಿಐ ನೀಡಿರುವ ಹಿನ್ನೆಲೆಯಲ್ಲಿ ಈ ಪ್ರಶ್ನೆ ಹೆಚ್ಚು ಪ್ರಸ್ತುತವಾಗುತ್ತದೆ.

ಶ್ರಾವಣ ಬಂತೆಂದರೆ ದೇಶದಲ್ಲಿ ಹಬ್ಬಗಳ ಋತು ಶುರುವಾಗುತ್ತದೆ. ಈ ಅವಧಿಯಲ್ಲಿ ಮನೆ ಖರೀದಿ, ವಾಹನ ಖರೀದಿ, ಆಭರಣ ಖರೀದಿ ಭರದಿಂದ ನಡೆಯುತ್ತವೆ. ಮನೆ ಮತ್ತು ವಾಹನ ಖರೀದಿಗೂ ಬ್ಯಾಂಕ್ ಸಾಲದ ಮೇಲಿನ ಬಡ್ಡಿ ದರಕ್ಕೂ ನೇರ ಸಂಬಂಧ ಇದೆ. ರೆಪೊ ದರ ಏರಿಕೆಯ ಪರಿಣಾಮವಾಗಿ ಸಾಲದ ಬಡ್ಡಿ ದರ ಏರಿಕೆ ಸಹಜವಾಗಿಯೇ ಆಗುತ್ತದೆ. ಇದು ಹಬ್ಬಗಳ ಋತುವಿನಲ್ಲಿ ವಾಹನ ಮತ್ತು ಮನೆ ಖರೀದಿಯ ಮೇಲೆ ಯಾವ ಬಗೆಯ ಪರಿಣಾಮ ಬೀರಬಹುದು ಎಂಬುದು ಈಗ ಗಮನಿಸಬೇಕಾದ ಅಂಶ. ಬಡ್ಡಿ ದರ ಏರಿಕೆಯು ಮನೆ ಮತ್ತು ವಾಹನ ಖರೀದಿಯ ಮೇಲೆ ನಕಾರಾತ್ಮಕ ಪರಿಣಾಮ ಬೀರಲಿಕ್ಕಿಲ್ಲ ಎಂಬ ವಾದ ಇದೆ. ಆದರೆ, ರೆಪೊ ದರ ಏರಿಕೆಯು ಹಬ್ಬದ ಋತುವಿನಲ್ಲಿ ಬರುವ ಬೇಡಿಕೆಗಳನ್ನು ತಗ್ಗಿಸಲಿದೆ ಎಂಬ ಆತಂಕವನ್ನು ಕೆಲವು ವಾಣಿಜ್ಯೋದ್ಯಮ ಸಂಘಟನೆಗಳು ಈಗಾಗಲೇ ವ್ಯಕ್ತಪಡಿಸಿವೆ ಎನ್ನುವುದನ್ನು ನಿರ್ಲಕ್ಷಿಸುವಂತಿಲ್ಲ.

ದಿನದ ಟ್ವೀಟ್

ಮಹತ್ವದ್ದು



ಎಸ್‌ಎಸ್‌ಎಲ್‌ವಿ-ಡಿ1 ತಾಂತ್ರಿಕ ಗುರಿಸಾಧನೆಯಲ್ಲಿ ವಿಫಲವಾಗಿದ್ದರೂ, ತ್ವರಿತವಾಗಿ ಉಪಗ್ರಹ ಉಡಾವಣೆ ಮಾಡುವ ಸಾಮರ್ಥ್ಯ ತನಗಿದೆ ಎಂದು ಇಸ್ರೊ ತೋರಿಸಿಕೊಟ್ಟಿದೆ. ಕೆಲವೇ ದಿನಗಳ ಅವಧಿಯಲ್ಲಿ ಉಪಗ್ರಹ ಉಡಾವಣೆ ಮಾಡುವ ಶಕ್ತಿ ಇದೆ ಎಂದು ತೋರಿಸಿರುವುದು ಮಹತ್ವದ್ದು. ಇಸ್ರೊ ಆ ಮಟ್ಟವನ್ನು ತಲುಪುತ್ತಿದೆ.

ನಿತಿನ್ ಪೈ, ತಕ್ಷಶಿಲಾ ಇನ್‌ಸ್ಟಿಟ್ಯೂಷನ್‌ನ ನಿರ್ದೇಶಕ

ಕಿಡಿನುಡಿ

ಕಲಾವಿದರ ರಾಜಕೀಯ, ವೈಯಕ್ತಿಕ ನಿಲುವು ಆಧರಿಸಿ 'ಸಿನಿಮಾ ನಿಷೇಧಿಸಿ' ಅಭಿಯಾನಗಳು ಹೆಚ್ಚುತ್ತಿವೆ. ಇವು ಕಲಾವಿದನ ಅನ್ನ ಕಸಿಯುವ ಪ್ರಯತ್ನಗಳು ಮತ್ತು ಅನಾರೋಗ್ಯಕರ ಬೆಳವಣಿಗೆ. ಇಂಥದ್ದಕ್ಕೆ ನಾನು ಹೆದರುವುದಿಲ್ಲ.



ಪ್ರಕಾಶ್ ರಾಜ್, ನಟ

25 ವರ್ಷಗಳ ಹಿಂದೆ

ಶುಕ್ರವಾರ, 8-8-1997

• 5 ಕೋಟಿ ರೂಪಾಯಿ ಪರಿಹಾರಕ್ಕೆ ವೀರಪ್ಪನ್ ಬೇಡಿಕೆ

ಚೆನ್ನೈ, ಆ. 7 (ಯುಎನ್‌ಐ)– ಸಂಪೂರ್ಣ ಕ್ಷಮಾದಾನ ಬೇಡಿಕೆ ಮುಂದಿಟ್ಟಿರುವ ಕುಖ್ಯಾತ ನರಹಂತಕ ವೀರಪ್ಪನ್ ಇದೀಗ, ಕ್ಷಮಾದಾನಕ್ಕೆ ಪರ್ಯಾಯವಾಗಿ ಐದು ಕೋಟಿ ರೂಪಾಯಿಗಳ ಪರಿಹಾರ ನೀಡುವಂತೆ ಒತ್ತಾಯಿಸುವುದರೊಂದಿಗೆ ಒತ್ತೆಯಾಳು ಸಮಸ್ಯೆ ಹೊಸ ತಿರುವು ಪಡೆದುಕೊಂಡಿದೆ. ಈ ಬೇಡಿಕೆ ಪೂರೈಕೆಗಾಗಿ ವೀರಪ್ಪನ್ ಒಂದು ವಾರದ ಗಡುವು ನೀಡಿದ್ದಾನೆ.

'ತನಗೆ ಎಂಟು ದಿನಗಳ ಒಳಗಾಗಿ ಐದು ಕೋಟಿ ರೂಪಾಯಿ ನೀಡಿದಲ್ಲಿ ಮಾತ್ರ ಕರ್ನಾಟಕ ಅರಣ್ಯ ಇಲಾಖೆ ಸಿಬ್ಬಂದಿಯನ್ನು ಬಿಡುಗಡೆ ಮಾಡುವುದಾಗಿ ವೀರಪ್ಪನ್ ಸ್ಪಷ್ಟಪಡಿಸಿದ್ದಾನೆ' ಎಂದು ಎರಡನೇ ಬಾರಿ ವೀರಪ್ಪನ್‌ನನ್ನು ಭೇಟಿಯಾಗಿ ಬಂದ ಆರ್.ಆರ್.ಗೋಪಾಲ್ ಅವರು ಇಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಕರ್ನಾಟಕ ಮತ್ತು ತಮಿಳುನಾಡು ಸರ್ಕಾರಗಳು ಈ ಬಗ್ಗೆ ಚರ್ಚಿಸಿ ಆಗಸ್ಟ್ 15ರ ಒಳಗೆ ನಿರ್ಧಾರ ಪ್ರಕಟಿಸಬೇಕು, ಇಲ್ಲದಿದ್ದರೆ ಎಲ್ಲ ಎಂಟು ಮಂದಿ ಒತ್ತೆಯಾಳುಗಳನ್ನು ಕೊಲ್ಲುವುದಾಗಿ ವೀರಪ್ಪನ್ ಬೆದರಿಕೆ ಹಾಕಿದ್ದಾನೆ ಎಂದು ಗೋಪಾಲ್ ಹೇಳಿದರು.

• ನೇತ್ರಾವತಿ ನದಿ ಅಪಾಯ ಮಟ್ಟದಲ್ಲಿ

ಬಂಟ್ವಾಳ, ಆ.7– ಕಳೆದ ಮೂರು, ನಾಲ್ಕು ದಿನಗಳಿಂದ ಘಟ್ಟದ ಮೇಲಿನ ಪ್ರದೇಶದಲ್ಲಿ ಭಾರಿ ಮಳೆ ಆಗುತ್ತಿರುವುದರಿಂದ ನೇತ್ರಾವತಿ ನೀರಿನ ಮಟ್ಟ ಗಮನಾರ್ಹವಾಗಿ ಏರುತ್ತಿದ್ದು, ಅಪಾಯದ ಮಟ್ಟ ತಲುಪುವ ಎಲ್ಲ ಸಾಧ್ಯತೆಗಳು ಕಂಡು ಬಂದಿವೆ.

• ದೋಣಿ ಬುಡಮೇಲಾಗಿ ಮೂವರು ನೀರುಪಾಲು

ಕಾರವಾರ, ಆ.7– ಮೀನು ಹಿಡಿಯಲು ಹೋಗಿದ್ದ ಹೊನ್ನಾವರ ತಾಲ್ಲೂಕಿನ ಹಳದೀಪುರದ ಮೂವರು ಗೋವಾದಲ್ಲಿ ಸಮುದ್ರ ಪಾಲಾಗಿದ್ದು, ಮೂವರು ಈಜಿ ಪಾರಾಗಿದ್ದಾರೆ.

50 ವರ್ಷಗಳ ಹಿಂದೆ

ಮಂಗಳವಾರ, 8-8-1972

• ಬಂಧಿತ ಭಾರತೀಯ ಪೌರರ ಬಿಡುಗಡೆ: ಪಾಕ್ ಸರ್ಕಾರದ ನಿರ್ಧಾರ

ನವದೆಹಲಿ, ಆ. 7– 1971ರ ಡಿಸೆಂಬರ್ ಸಮರಕ್ಕೆ ಮುನ್ನ ಮತ್ತು ಸಮರದ ಅವಧಿಯಲ್ಲಿ ಪಾಕಿಸ್ತಾನದಲ್ಲಿ ಬಂಧಿಸಲಾಗಿದ್ದ ಎಲ್ಲ ಭಾರತೀಯ ಪೌರರನ್ನೂ ಬಿಡುಗಡೆ ಮಾಡಲಾಗುವುದು ಎಂದು ಪಾಕಿಸ್ತಾನ ರೇಡಿಯೊ ವರದಿ ಮಾಡಿದೆ.

ಈ ಬಗ್ಗೆ ಪಾಕ್ ಸರ್ಕಾರ ನಿರ್ಧಾರ ಕೈಗೊಂಡಿದೆ. ಆದರೆ ಇವರನ್ನು ಯಾವಾಗ ಬಿಡುಗಡೆ ಮಾಡಲಾಗುವುದು ಎಂಬುದನ್ನು ತಿಳಿಸಿಲ್ಲ.

ಡಿಸೆಂಬರ್ 3ನೇ ತಾರೀಖಿಗೆ ಮುನ್ನ ಅನಧಿಕೃತ ಪ್ರವೇಶಕ್ಕಾಗಿ ಬಂಧಿಸಲಾದ ಭಾರತೀಯರೆಲ್ಲರನ್ನೂ ಬಿಡುಗಡೆ ಮಾಡಲಾಗುವುದೆಂದೂ, ಭಾರತ- ಪಾಕ್ ಸಮರ ಆರಂಭವಾದ ಕಾರಣ ಅಲ್ಲಿಂದ ಹೊರಡಲು ಸಾಧ್ಯವಾಗದೇ ಉಳಿದುಕೊಂಡಿದ್ದ ಭಾರತೀಯರಿಗೆ ಸ್ವದೇಶಕ್ಕೆ ಮರಳಲು ಅವಕಾಶ ನೀಡಲಾಗುವುದೆಂದೂ ರೇಡಿಯೊ ತಿಳಿಸಿದೆ.

• ಹೊಸ ಕೃಷಿ ಯೋಜನೆಗೆ 150 ಕೋಟಿ ರೂ. ಹೆಚ್ಚು ವೆಚ್ಚ: ಕೇಂದ್ರದ ನಿರ್ಧಾರ

ನವದೆಹಲಿ, ಆ.7– ಸಾಧ್ಯವಾದಷ್ಟು ಮಟ್ಟಿಗೆ ಖಾರಿಫ್ ಬೆಳೆ ಕಾಪಾಡಲು ಹಾಗೂ ರಾಬಿ ಬೆಳೆ ಹೆಚ್ಚಿಸುವುದಕ್ಕಾಗಿ ಕೃಷಿ ಯೋಜನೆಗೆ ಹೊಸದಾಗಿ 150 ಕೋಟಿ ರೂಪಾಯಿ ವೆಚ್ಚ ಮಾಡುವುದಕ್ಕೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿತು.

ಅನೇಕ ರಾಜ್ಯಗಳಲ್ಲಿ ಮುಂಗಾರು ಬೆಳೆ ವಿಫಲ ಹಾಗೂ ಅಗತ್ಯ ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆ ಸಮಸ್ಯೆಗಳ ಕುರಿತು ಚರ್ಚಿಸುವುದಕ್ಕಾಗಿ ಕೇಂದ್ರ ಸಚಿವ ಸಂಪುಟ ಬೆಳಿಗ್ಗೆ ಸಭೆ ಸೇರಿತ್ತು.

ಸಮಕಾಲೀನ ಸವಾಲುಗಳಿಗೆ ಎದುರಾಗುವ ಬಗೆ ಹೇಗೆ ಎಂಬುದರ ಕುರಿತು ಚಿಂತಿಸಲು ಸಕಾಲ

ಹಾವನೂರು ಆಯೋಗಕ್ಕೆ 50 ವರ್ಷ



ವಿಶ್ಲೇಷಣೆ

ಬರಗೂರು ರಾಮಚಂದ್ರಪ್ಪ

ಅದು, ದೇವರಾಜ ಅರಸು ಅವರ ಆಡಳಿತ ಕಾಲ. ನಮ್ಮ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಅರಸು ಅವರು ಹಿಂದುಳಿದ ವರ್ಗಗಳಿಗೆ ರಾಜಕೀಯ ಪ್ರಾತಿನಿಧ್ಯ ನೀಡಿ ಹೊಸ ಮಾದರಿಯ ರೂವಾರಿಯಾಗಿದ್ದರು. ಹುಟ್ಟಿನಿಂದ ರಾಜಮನೆತನಕ್ಕೆ ಸೇರಿದ ಅರಸು, ಹಿಂದುಳಿದ ಹಾಗೂ ಸರ್ವ ಶೋಷಿತ ವರ್ಗಗಳ ದಿಟ್ಟದನಿಯಾಗಿ ರೂಪಾಂತರ ಹೊಂದಿದ್ದು ಅಪೂರ್ವ ನಿದರ್ಶನವಾಗಿದೆ. ಹಾಗೆ ನೋಡಿದರೆ, ರಾಜರ್ಷಿಯೆಂದೇ ಖ್ಯಾತರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಲ್ಲೇ ಸಾಮಾಜಿಕ ಪ್ರಾತಿನಿಧ್ಯದ ಮೂಲ ಪ್ರೇರಣೆಯನ್ನು ಕಾಣಬಹುದು. ರಾಜಪ್ರಭುತ್ವದ ಚೌಕಟ್ಟಿನಲ್ಲೇ ಪ್ರಜಾಪ್ರಭುತ್ವದ ಆಶಯಗಳಿಗೆ ಪ್ರೇರಕರಾದ ಕೀರ್ತಿ ನಾಲ್ವಡಿಯವರಿಗೆ ಸಲ್ಲಬೇಕು.

ದೇವರಾಜ ಅರಸು ಅವರು ಹಿಂದುಳಿದ ವರ್ಗಗಳ ಪ್ರಾತಿನಿಧ್ಯದ ಮೂಲಕ ಹೊಸ ರಾಜಕೀಯ ಧ್ರುವೀಕರಣಕ್ಕೆ ಕಾರಣರಾದದ್ದಲ್ಲದೆ, ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಹಿಂದುಳಿದವರಿಗೆ ಮೀಸಲಾತಿ ಕಲ್ಪಿಸುವ ಸಂಕಲ್ಪ ಮಾಡಿದ್ದರ ಫಲವಾಗಿ ರಚನೆಯಾದದ್ದು 'ಹಾವನೂರು ಆಯೋಗ'. ಸಂವಿಧಾನವು 16(4)ನೇ ವಿಧಿಯಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ನಿಗದಿಪಡಿಸುವ ಅವಕಾಶವನ್ನು ಪ್ರಭುತ್ವಕ್ಕೆ ಕೊಟ್ಟಿದ್ದು, ಈ ಅವಕಾಶದಡಿಯಲ್ಲಿ ಎಲ್.ಜಿ. ಹಾವನೂರು ಅವರ ನೇತೃತ್ವದಲ್ಲಿ 1972ರ ಆಗಸ್ಟ್ 8ರಂದು ಆಯೋಗವನ್ನು ರಚಿಸಿ ಆದೇಶ ಹೊರಡಿಸಲಾಯಿತು. ಅಂದರೆ 2022ರ ಆಗಸ್ಟ್ 8ಕ್ಕೆ ಹಾವನೂರು ಆಯೋಗ ರಚನೆಯಾಗಿ ಐವತ್ತು ವರ್ಷಗಳಾಗಿವೆ. ಎಲ್.ಜಿ. ಹಾವನೂರು ಅವರು ಅಧ್ಯಕ್ಷರಾಗಿದ್ದ ಈ ಆಯೋಗದಲ್ಲಿ ಧರ್ಮಸಿಂಗ್, ವೈ.ರಾಮಚಂದ್ರ, ಕೆ.ಆರ್.ಎಸ್.ನಾಯ್ಡು, ಕೆ.ಎಂ.ನಾಗಣ್ಣ, ಎ.ಎಂ. ಚೆಟ್ಟಿ, ಪಿ.ಟಿ. ಹಬೀಬ್ ಅವರು ಸದಸ್ಯರಾಗಿದ್ದರು.

ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನಲ್ಲಿ 1927ರ ಮಾರ್ಚ್ 25ರಂದು ಜನಿಸಿದ ಎಲ್.ಜಿ. ಹಾವನೂರು (ಲಕ್ಷ್ಮಣ ಗುಂಡಪ್ಪ ಹಾವನೂರು) ಅವರು ಬಡತನದಲ್ಲಿ ಬೆಳೆದು ಬಂದ ಅಪರೂಪದ ಸಮಾಜಮುಖಿ ಸಾಧಕರು. ವಕೀಲಿ ವೃತ್ತಿಯ ದಿನಗಳಲ್ಲಿ ಸದಾ ಶೋಷಿತ ವರ್ಗಗಳ ಏಳಿಗೆಗಾಗಿ ಶ್ರಮಿಸಿದವರು. ಇವರ ಕಾಳಜಿಯನ್ನು ಗುರುತಿಸಿದ ಅರಸು, ಹಿಂದುಳಿದ ವರ್ಗಗಳ ಅಧ್ಯಯನ ಆಯೋಗದ ಅಧ್ಯಕ್ಷರಾಗಿ ಮಾಡಿದರು. ದಕ್ಷಿಣ ಆಫ್ರಿಕಾದ ನೆಲ್ಸನ್ ಮಂಡೇಲಾ ಅವರು ತಮ್ಮ ದೇಶದ ಸಂವಿಧಾನ ರಚನಾ ಸಲಹಾ ಸಮಿತಿಗೆ ಎಲ್.ಜಿ. ಹಾವನೂರು ಅವರನ್ನು ಆಹ್ವಾನಿಸಿದ್ದರು. ಹಾವನೂರು ಅವರ ಸಂವಿಧಾನ ಪ್ರಜ್ಞೆಗೆ ಇದೊಂದು ಸಾಕ್ಷಿಯಾಗಿದೆ. ಅಂತೆಯೇ ಇವರ ನೇತೃತ್ವದಲ್ಲಿ ನೀಡಿದ ಹಿಂದುಳಿದ ವರ್ಗಗಳ ಅಧ್ಯಯನಾತ್ಮಕ ವರದಿಯು ಸುಪ್ರೀಂ ಕೋರ್ಟಿನಿಂದ 'ಹಿಂದುಳಿದ ವರ್ಗಗಳ ಒಂದು ವೈಜ್ಞಾನಿಕ ಅಧ್ಯಯನ' ಎಂಬ ಪ್ರಶಂಸೆಗೂ ಪಾತ್ರವಾಗಿದೆ. ಸ್ವತಃ ಅರಸು ಅವರು ಹಾವನೂರು ಆಯೋಗದ ವರದಿಯನ್ನು 'ಹಿಂದುಳಿದ ವರ್ಗಗಳ ಬೈಬಲ್' ಎಂದು ಕರೆದಿದ್ದರು. ಅಂತಿಮ ವರದಿ ಸಿದ್ಧಪಡಿಸುವುದಕ್ಕೆ ಮುಂಚೆ ಹಾವನೂರು ಆಯೋಗವು ರಾಜ್ಯದ 378 ಹಳ್ಳಿಗಳಿಗೆ ಭೇಟಿ ನೀಡಿತ್ತು. ಮೂರೂವರೆ ಲಕ್ಷಕ್ಕೂ ಹೆಚ್ಚು ಜನರನ್ನು ಸಂದರ್ಶಿಸಿ ಮಾಹಿತಿ ಸಂಗ್ರಹಿಸಿತ್ತು. ಇದು ಹಾವನೂರು ಆಯೋಗದ ಅಗಾಧ ಪರಿಶ್ರಮ ಮತ್ತು ಬದ್ಧತೆಗೆ ಸಾಕ್ಷಿ.

ಹೀಗೆ ಆಳವಾದ ಅಧ್ಯಯನ ಮಾಡಿ ಸೂಕ್ತ ಶಿಫಾರಸುಗಳೊಂದಿಗೆ ಸಿದ್ಧಪಡಿಸಿದ ವರದಿಯನ್ನು 1975ರ ನವೆಂಬರ್ 19ರಂದು ಸರ್ಕಾರಕ್ಕೆ ಸಲ್ಲಿಸಲಾಯಿತು. ವಿವಿಧ ಉಪಜಾತಿಗಳನ್ನೊಳಗೊಂಡ 'ಹಿಂದುಳಿದ ಸಮುದಾಯ'ದವರಿಗೆ (ಬಿಸಿಎಂ) ಶೇಕಡ 16, ಹಿಂದುಳಿದ ಜಾತಿಗಳಿಗೆ ಶೇ 10, ಹಿಂದುಳಿದ ಬುಡಕಟ್ಟುಗಳಿಗೆ ಶೇ 6ರಷ್ಟು ಮೀಸಲಾತಿಯನ್ನು ಉದ್ಯೋಗ ಮತ್ತು ಶಿಕ್ಷಣಕ್ಕೆ ಅನ್ವಯ ಆಗುವಂತೆ ನೀಡಲು ಮಾಡಿದ ಶಿಫಾರಸುಗಳಲ್ಲಿ ಅರಸು ನೇತೃತ್ವದ ಸರ್ಕಾರವು ಮುಸ್ಲಿಂ ಸಮುದಾಯವನ್ನೂ ಸೇರಿಸಿ ಹಿಂದುಳಿದ ಸಮುದಾಯಗಳ ಮೀಸಲಾತಿಯನ್ನು ಶೇ 20ಕ್ಕೆ ಏರಿಸಿತು.

ಅರಸು ಅವರು, ಹಾವನೂರು ವರದಿಯಲ್ಲಿ ಇಲ್ಲದೆ ಇದ್ದ 'ಹಿಂದುಳಿದ ವಿಶೇಷ ಗುಂಪು' ಎಂಬುದನ್ನು ಹೊಸದಾಗಿ ಸೇರಿಸಿದರು. ಎಲ್ಲ ಜಾತಿಗಳಲ್ಲಿರುವ ಆರ್ಥಿಕವಾಗಿ ಹಿಂದುಳಿದವರಿಗೆ ಶೇ 5ರಷ್ಟು ವಿಶೇಷ ಮೀಸಲಾತಿ ಕಲ್ಪಿಸಿದರು (ಈ ಪ್ರಮಾಣವು ಮುಂದೆ ಶೇ 15ರಷ್ಟು ಆಯಿತೆಂಬ ಮಾಹಿತಿ ಇದೆ). ಹೀಗೆ ಕೆಲವು ಮಾರ್ಪಾಡುಗಳೊಂದಿಗೆ ಸಮತೋಲನ ಸಾಧಿಸಿದ ಅರಸು, 1977ರ ಫೆಬ್ರುವರಿ 22 ರಂದು ಹಾವನೂರು ವರದಿಯನ್ನು ಜಾರಿಗೆ ತಂದರು.

ಹಾವನೂರು ಆಯೋಗಕ್ಕೆ ಮುಂಚಿನಿಂದಲೂ ನಮ್ಮ ರಾಜ್ಯದಲ್ಲಿ ಮೀಸಲಾತಿ ಪರವಾದ ವಿಚಾರಧಾರೆ ಬೆಳೆದು ಬಂದಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಮೀಸಲಾತಿಗೊಂದು ಆಡಳಿತಾತ್ಮಕ ಅಧಿಕೃತತೆ ದೊರಕಿತು. ಮೈಸೂರು ಪ್ರಾಂತ್ಯದಲ್ಲಿ ಬ್ರಾಹ್ಮಣೇತರ ಹಿಂದುಳಿದ ಜಾತಿಗಳ ಸಂಘಟಿತ ನಿಯೋಗವು 1918ರಲ್ಲಿ ಮಹಾರಾಜರನ್ನು ಭೇಟಿ ಮಾಡಿ ಅಹವಾಲನ್ನು ಸಲ್ಲಿಸಿತು. ಯುವರಾಜ ನರಸಿಂಹರಾಜ ಒಡೆಯರ್ ಅವರ ಒತ್ತಾಸೆಯೂ ಇತ್ತು. ನಾಲ್ವಡಿಯವರಿಗೆ ಕಾಳಜಿಯಿತ್ತು. ಆನಂತರ ಲೆಸ್ಲಿ ಮಿಲ್ಲರ್ ಸಮಿತಿ ರಚನೆಯಾಗಿ 1919ರಲ್ಲಿ ವರದಿ ನೀಡಿತು. 1921 ರಲ್ಲಿ ಕೆಲವು ಶಿಫಾರಸುಗಳನ್ನು ಜಾರಿಗೆ ತರಲಾಯಿತು (ಮಹಾರಾಷ್ಟ್ರದ ಶಾಹು ಮಹಾರಾಜ್ ಅವರು 1902ರಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡಿದ್ದನ್ನು ಇಲ್ಲಿ ನೆನೆಯಬೇಕು).

ಸ್ವಾತಂತ್ರ್ಯಾನಂತರ 1960ರಲ್ಲಿ ನಾಗನಗೌಡರ ನೇತೃತ್ವದಲ್ಲಿ ರಚಿತವಾದ ಸಮಿತಿಯು 399 ಜಾತಿಗಳನ್ನು ಮೀಸಲಾತಿಗೆ ಅರ್ಹ ಎಂದು ಗುರುತಿಸಿ, ಉದ್ಯೋಗದಲ್ಲಿ ಶೇ 45, ಶಿಕ್ಷಣದಲ್ಲಿ ಶೇ 50ರಷ್ಟು ಮೀಸಲಾತಿಯನ್ನು ನಿಗದಿಪಡಿಸಿತ್ತು. 1962ರಲ್ಲಿ ಕೆಲವು ಮಾರ್ಪಾಟುಗಳೊಂದಿಗೆ ಜಾರಿಗೆ ಬಂದ ಈ ವರದಿಯನ್ನು ಸುಪ್ರೀಂ ಕೋರ್ಟು ಅನೂರ್ಜಿತಗೊಳಿಸಿತ್ತು. ಆನಂತರ ಬಂದ ಸರ್ಕಾರಿ ಆದೇಶಗಳು 2400 ರೂಪಾಯಿಗಳ ವಾರ್ಷಿಕ ಆದಾಯ ಮಿತಿಯೊಂದಿಗೆ ಎಲ್ಲ ಹಿಂದುಳಿದ ವರ್ಗಗಳಿಗೆ ಶೇ 30ರಷ್ಟು ಮೀಸಲಾತಿ ನಿಗದಿಪಡಿಸಿದವು. ಮುಂದಿನದು (1972) ಹಾವನೂರು ಆಯೋಗ.

ಮೀಸಲಾತಿಯ ವಿಷಯವು ಆರಂಭದಿಂದಲೂ ಪರ- ವಿರೋಧದ ಚರ್ಚೆಗೆ ಒಳಗಾಗಿದೆ. ಜಾತಿ ಆಧಾರಿತ ಮೀಸಲಾತಿಯ ಬಗ್ಗೆ 'ಮುಂದುವರಿದವರು' ಆಕ್ಷೇಪಿಸುತ್ತ ಬಂದಿದ್ದಾರೆ; 'ಅರ್ಹತೆ'ಯ ಪ್ರಶ್ನೆ ಎತ್ತಿದ್ದಾರೆ. ಜಾತಿಯ ಕಾರಣಕ್ಕಾಗಿಯೇ ಶಿಕ್ಷಣ ಮತ್ತು ಉದ್ಯೋಗ ಸಿಗದೆ ಶೋಷಣೆಗೆ ಒಳಗಾದವರಿಗೆ ಮೀಸಲಾತಿ ನೀಡಿ ಮುಂದಕ್ಕೆ ತರುವುದು ನ್ಯಾಯದ ಮಾರ್ಗ. ಇಲ್ಲಿ 'ಅರ್ಹತೆ' ಎನ್ನುವುದು ಒಂದು ಸಾಪೇಕ್ಷ ಪರಿಕಲ್ಪನೆ. ಸಾವಿರಾರು ವರ್ಷಗಳಿಂದ ಸೌಲಭ್ಯ ಪಡೆದವರು ಮತ್ತು ಪಡೆಯದೆ ಇರುವವರಿಗೆ ಒಂದೇ ರೀತಿಯ ಮಾನದಂಡವನ್ನು ಅನ್ವಯಿಸಲಾಗದು. ಹಾಗೆಂದು ಹಿಂದುಳಿದ ವರ್ಗ ಹಾಗೂ ದಲಿತರಲ್ಲಿ ಅರ್ಹರಲ್ಲದವರಿಗೆ ಮೀಸಲಾತಿ ಸಿಗುತ್ತಿದೆ ಎಂದೇನೂ ಅಲ್ಲ. ಆಯಾ ವರ್ಗದಲ್ಲಿರುವ ಅರ್ಹರಿಗೆ ಮೀಸಲಾತಿ ನೀಡಿ ಮುಂದೆ ತರುವ ಉದ್ದೇಶವು ಮೀಸಲಾತಿಯ ಪರಿಕಲ್ಪನೆಯಲ್ಲಿದೆ. ಇದು ಎಷ್ಟರಮಟ್ಟಿಗೆ ಸಂಪೂರ್ಣ ಸಾಕಾರಗೊಂಡಿದೆಯೆಂಬ ಪ್ರಶ್ನೆಯೂ ಇದೆ. ಅನೇಕ ಪ್ರತಿಭಾವಂತರು ಬೆಳೆದು ಬಂದ ಚರಿತ್ರೆಯೂ ನಮ್ಮ ಕಣ್ಣೆದುರು ಇದೆ. ಇದಕ್ಕೆ ಸಂವಿಧಾನದಲ್ಲಿ ಅವಕಾಶ ಕಲ್ಪಿಸಿದ ಡಾ. ಅಂಬೇಡ್ಕರ್ ಅವರಿಗೆ ನಮನಗಳು ಸಲ್ಲಬೇಕು. ಅಷ್ಟೇ ಅಲ್ಲ ಡಾ. ಅಂಬೇಡ್ಕರ್, ಶಾಹು ಮಹಾರಾಜ್, ನಾಲ್ವಡಿ ಕೃಷ್ಣರಾಜ ಒಡೆಯರ್, ಅರಸು ಮುಂತಾದವರ ಆಶಯಗಳನ್ನು ಆತ್ಮಸಾಕ್ಷಿಯಾಗಿಸಿಕೊಂಡು ಬದುಕಬೇಕು; ಇಂದು ಜಾತಿವಾದ ಮತ್ತು ಕೋಮುವಾದ ಮುನ್ನೆಲೆಗೆ ಬರುತ್ತಿರುವಾಗ ಹಿಂದುಳಿದ ಮತ್ತು ದಲಿತ ವರ್ಗಗಳು ಪ್ರತಿರೋಧ ಒಡ್ಡಬೇಕು. ಖಾಸಗೀಕರಣವೇ ಮುಖ್ಯವಾಗುತ್ತಿರುವ ಈ ಕಾಲದಲ್ಲಿ ಖಾಸಗೀಕರಣದ ಸ್ವಾರ್ಥಕೇಂದ್ರಿತ ಅಪಾಯಗಳ ಬಗ್ಗೆ ಅಂದೇ ಎಚ್ಚರಿಸಿದ ಅಂಬೇಡ್ಕರ್ ಅವರ ದನಿ ಎದೆಯೊಳಗೆ ಪ್ರತಿಧ್ವನಿಸಬೇಕು. ಅಂಬೇಡ್ಕರ್ ಪ್ರತಿಪಾದಿಸಿದ ಸ್ವಾತಂತ್ರ್ಯ, ಸಮಾನತೆ, ಸೋದರತೆಗಳೊಂದಾದ 'ಸಾಮಾಜಿಕ ಪ್ರಜಾಪ್ರಭುತ್ವ'ಕ್ಕೆ ಬದ್ಧವಾಗಿ ಸಮಕಾಲೀನ ಸವಾಲುಗಳಿಗೆ ಎದುರಾಗಬೇಕು. ಇದು ಸಂವಿಧಾನದ ಸಾರ್ಥಕ್ಯ.



ಚುರುಮುರಿ



ಅಪ್ಪುಗೆ ಪರೀಕ್ಷೆ

• ಸುಮಂಗಲಾ

ಬೆಕ್ಕಣ್ಣ ಬೆಳಗಿನಿಂದ ಏನೂ ತಿನ್ನದೇ ಮುಖ ವಣಗಿಸಿಕೊಂಡು ಕೂತಿತ್ತು.

'ಏನಲೇ... ಬೆಲೆಯೇರಿಕೆ ವಿರುದ್ಧ ಉಪವಾಸ ಸತ್ಯಾಗ್ರಹ ಮಾಡಾಕ್ ಹತ್ತೀಯೇನ್' ಕಕ್ಕುಲಾತಿಯಿಂದ ಕೇಳಿದೆ.

'ಪ್ರತಿಭಟನೆ, ಸತ್ಯಾಗ್ರಹ ಇವೆಲ್ಲಾ ಓಲ್ಡ್ ಫ್ಯಾಶನ್. ಇದು ದೇಶಭಕ್ತಿ ರಾಕೆಟ್ ಉಡಾಯಿಸೋ ಕಾಲ. ಸಿದ್ದರಾಮೋತ್ಸವ ಮುಗಿದ ಮ್ಯಾಗೆ ನಿದ್ದಿ, ಊಟ ಏನೂ ಮಾಡ್ತಿಲ್ಲ ಅಂತ ಈಶೂಮಾಮಾ ಹೇಳ್ಯಾನ. ಅಂವ ಊಟ ಮಾಡದಿದ್ದರ ನನಗೆ ಹೆಂಗೆ ತುತ್ತು ವಳಗ ಇಳಿತೈತಿ? ಅರಮನೆ ಮೈದಾನದಾಗೆ ಯುಡ್ಯೂರಜ್ಜಾರ ಹುಟ್ಟುಹಬ್ಬ ಮಾಡಿದ್ರಲ್ಲ, ಆವಾಗೂ ಇಷ್ಟ್ ಮಂದಿ ಸೇರಿರಲಿಲ್ಲಂತ' ಲೊಚಗುಟ್ಟಿದ ಬೆಕ್ಕಣ್ಣ ಲ್ಯಾಪ್‌ಟಾಪಿನಲ್ಲಿ ತಲೆಹುದುಗಿಸಿ ಏನೋ ಕೋಡಿಂಗ್ ಮಾಡುತ್ತಲೇ ಇತ್ತು.

'ನೋಡಿಲ್ಲಿ... ನಾ ಒಂದ್ ಅಪ್ಪುಗೆ ಪರೀಕ್ಷೆ ಟೂಲ್ ಕಂಡುಹಿಡಿದೀನಿ. ಯಾರಾರ ಇಬ್ಬರು ಅಪ್ಪಿಕೊಂಡಿದ್ದ ವಿಡಿಯೊ ಇದಕ್ಕ ಅಪ್ಲೋಡ್ ಮಾಡಿದ್ರ, ಅವರು ಖರೇ ಪ್ರೀತಿ, ವಿಶ್ವಾಸದಿಂದ ಅಪ್ಪಿಕೊಂಡಾರೋ ಅಥವಾ 'ಎದುರು ಪ್ರೀತಿ, ಬೆನ್ನಿಗೆ ಚೂರಿ' ಅನ್ನೋ ಮನಸ್ಸಿನಿಂದ ಅಪ್ಪಿಕೊಂಡಾರೋ ಅಂತೆಲ್ಲ ಕಂಡ್ ಹಿಡಿತೈತಿ' ಎಂದು ಹೆಮ್ಮೆಯಿಂದ ತೋರಿಸಿತು.

ನಾನು ತಲೆ ಕೆರೆದುಕೊಂಡೆ.

'ಮೊನ್ನೆ ಹುಲಿಯಾಮಾಮ, ಬಂಡೆಮಾಮಾ ಅಪ್ಪಿಕೊಂಡು, ಕೈಕೈ ಹಿಡಕೊಂಡಿದ್ದು ಎಲ್ಲಾ ಹುಸಿಪ್ರೀತಿ, ಬೋಗಸ್ ಅಂತ ಕಮಲಕ್ಕನ ಮನಿಯವರು ಹೇಳಿದ್ರಲ್ಲ... ಹಂತಾ ವಿಡಿಯೊ ಇದಕ್ಕ ಅಪ್ಲೋಡ್ ಮಾಡಿದರ, ಅವರು ಅಪ್ಪಿಕೊಂಡಿರೊ ರೀತಿ, ಅವರ ಮುಖಭಾವ ಎಲ್ಲಾ ವಿಶ್ಲೇಷಣೆ ಮಾಡಿ, ಎಷ್ಟ್ ಪರ್ಸೆಂಟ್ ಖರೇ ಪ್ರೀತಿ, ಎಷ್ಟ್ ಪರ್ಸೆಂಟ್ ಸುಳ್ ಪ್ರೀತಿ ಅನ್ನೂದನ್ನ ಹೇಳತೈತಿ' ಎಂದು ತೋರಿಸಿತು.

'ಕಮಲಕ್ಕನ ಮನ್ಯಾಗೆ ರಗಡ್ ಐಟಿ ಮಂದಿ ಅದಾರಲೇ, ಬಹುಶಃ ಹಿಂತಾ ಪರೀಕ್ಷೆ ಟೂಲ್ ಅವರತ್ರ ಐತಿ. ಅದಕ್ಕ ಯಾವಾಗ ನಿಮ್ಮ ಹುಲಿಯಾಮಾಮ, ಮತ್ತ ಬಂಡೆಮಾಮಾ ಅಪ್ಪಿಕೊಂಡ್ರೂ, ಅದು ಬಲಾತ್ಕಾರದ ಅಪ್ಪುಗೆ ಅಂತ ತಕ್ಷಣ ಅವರು ಒದರತಾರ' ಎಂದೆ.

ಬೆಕ್ಕಣ್ಣ ಬಿದ್ದರೂ ಮೀಸೆ ಮಣ್ಣಾಗಿಲ್ಲವೆನ್ನುವಂತೆ 'ಎಷ್ಟ್ 'ಶಾ'ಣೇರಿದ್ದಾರ ನೋಡು' ಎಂದಿತು!

ಚರ್ಚೆ

ವಿಶ್ವಾಸ ಮೂಡಿಸಲು ಕಾರ್ಯತಂತ್ರ

ಗ್ರಾಮೀಣ ಭಾಗದ ವಿದ್ಯಾರ್ಥಿಗಳಲ್ಲಿ ಇರಬಹುದಾದ ಆತ್ಮವಿಶ್ವಾಸದ ಕೊರತೆ ಹೋಗಲಾಡಿಸಲು ವಿಶೇಷ ಪ್ರಯತ್ನಗಳಾಗಬೇಕು

• ಡಾ.ಎಚ್.ಬಿ. ಚಂದ್ರಶೇಖರ್

ಹಳ್ಳಿಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆಯುತ್ತಿಲ್ಲ ಎಂಬ ವಿಷಯದ ಕುರಿತಾದ ಸದಾಶಿವ್ ಸೊರಟೂರು ಅವರ ಬರಹ (ಸಂಗತ, ಆ. 3) ಚಿಂತನೆಗೆ ಹಚ್ಚುತ್ತದೆ. ಹಳ್ಳಿಮಕ್ಕಳ ತೇರ್ಗಡೆ ಪ್ರಮಾಣವನ್ನು ಪರಿಶೀಲಿಸಲು ಶಾಲಾ ಹಂತದ ವಿವಿಧ ತರಗತಿಗಳ ಪರೀಕ್ಷೆಗಳ ಫಲಿತಾಂಶವನ್ನು ಕುತೂಹಲಕ್ಕಾಗಿ ಗಮನಿಸಿದೆ. ಹತ್ತನೇ ತರಗತಿಯ 2020 ಮತ್ತು 2022ರ ವಾರ್ಷಿಕ ಪರೀಕ್ಷೆಯ ಫಲಿತಾಂಶದಲ್ಲಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ನಗರ ಪ್ರದೇಶದ ವಿದ್ಯಾರ್ಥಿಗಳಿಗಿಂತ ಕ್ರಮವಾಗಿ ಶೇಕಡ 3.77 ಮತ್ತು ಶೇ 4.67ರಷ್ಟು ಮುಂದಿದ್ದಾರೆ.

ದ್ವಿತೀಯ ಪಿಯುಸಿಯ 2020ರ ವಾರ್ಷಿಕ ಪರೀಕ್ಷೆಯಲ್ಲಿ ನಗರ ಪ್ರದೇಶದ ವಿದ್ಯಾರ್ಥಿಗಳು ಗ್ರಾಮೀಣ ವಿದ್ಯಾರ್ಥಿಗಳಿಗಿಂತ ಶೇ 3.61 ರಷ್ಟು ಮುಂದಿದ್ದಾರೆ. 2022ರ ವಾರ್ಷಿಕ ಪರೀಕ್ಷೆಯಲ್ಲಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ನಗರ ಭಾಗದವರಿಗಿಂತ ಶೇ 0.4ರಷ್ಟು ಅಲ್ಪ ಮುನ್ನಡೆ ಹೊಂದಿದ್ದಾರೆ.

2021ರ ರಾಷ್ಟ್ರೀಯ ಸಾಧನಾ ಸಮೀಕ್ಷೆಯ ಫಲಿತಾಂಶದ ಅನ್ವಯ ರಾಜ್ಯದಲ್ಲಿ 3, 5 ಮತ್ತು 8ನೇ ತರಗತಿಯಲ್ಲಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ನಗರ ಪ್ರದೇಶದ ವಿದ್ಯಾರ್ಥಿಗಳಿಗಿಂತ ಕ್ರಮವಾಗಿ ಶೇ 14, ಶೇ 6 ಮತ್ತು ಶೇ 12ರಷ್ಟು ಮುಂದಿದ್ದಾರೆ. ಉತ್ತೀರ್ಣತೆಯ ಪ್ರಮಾಣವೊಂದನ್ನೇ ಆಧರಿಸಿ ವಿದ್ಯಾರ್ಥಿಗಳ ಬೌದ್ಧಿಕ ವಿಕಾಸದ ಮಟ್ಟವನ್ನು ಅಳೆಯಲಾಗದು. ಅಲ್ಲದೆ, ಉನ್ನತ ಶಿಕ್ಷಣ ಹಂತ ಮತ್ತು ಉದ್ಯೋಗ ಅವಕಾಶಗಳನ್ನು ಪಡೆಯುವಲ್ಲಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಸಾಧನೆಯ ಪ್ರಮಾಣ ಹೇಗಿದೆ ಎಂಬುದನ್ನು ಕಂಡುಕೊಳ್ಳಲು ಮಾಹಿತಿಗಳು ಲಭ್ಯವಾಗಲಿಲ್ಲ.

ವಿವಿಧ ಪರೀಕ್ಷಾ ಫಲಿತಾಂಶಗಳಲ್ಲಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ನಗರ ಪ್ರದೇಶದ ವಿದ್ಯಾರ್ಥಿಗಳಿಗಿಂತ ಸ್ವಲ್ಪ ಮುಂದೆ, ಹಿಂದೆ ಅಥವಾ ಸಮನಾಗಿರುವುದನ್ನು ದತ್ತಾಂಶಗಳ ಮೂಲಕ ಗಮನಿಸಬಹುದಾದರೂ ನಗರ ಪ್ರದೇಶದ ವಿದ್ಯಾರ್ಥಿಗಳಿಗಿರುವ ಅವಕಾಶಗಳ ಲಭ್ಯತೆಯು ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಇರುವುದಿಲ್ಲ ಎಂಬುದು ಸತ್ಯ. ಇದರ ಜೊತೆ ಅವರಿಗೆ ಇಂಗ್ಲಿಷ್ ಭಾಷೆಯ ಬಳಕೆಯಲ್ಲಿ ಸಮಸ್ಯೆ, ಕೀಳರಿಮೆಗಳು ಕಾಡುತ್ತವೆ.

ಗ್ರಾಮೀಣ ಭಾಗದ ವಿದ್ಯಾರ್ಥಿಗಳಲ್ಲಿ ಇರಬಹುದಾದ ಆತ್ಮವಿಶ್ವಾಸದ ಕೊರತೆ, ಕೀಳರಿಮೆಗಳನ್ನು ಹೋಗಲಾಡಿಸಲು ವಿಶೇಷ ಪ್ರಯತ್ನಗಳಾಗಬೇಕು. ಗ್ರಾಮೀಣ ವಿದ್ಯಾರ್ಥಿಗಳಲ್ಲಿ ಸಂವಹನ ಕೌಶಲಗಳನ್ನು ಕರಗತ ಮಾಡಿಸಲು ಶಾಲೆ- ಕಾಲೇಜುಗಳಲ್ಲಿ ನಡೆಸಲಾಗುವ ಚರ್ಚಾ ಸ್ಪರ್ಧೆ, ಆಶುಭಾಷಣ ಸ್ಪರ್ಧೆ, ಪ್ರಬಂಧ ಸ್ಪರ್ಧೆಗಳಲ್ಲಿ ಎಲ್ಲ ವಿದ್ಯಾರ್ಥಿಗಳು ಭಾಗವಹಿಸುವಂತೆ ಪ್ರೇರೇಪಿಸಬೇಕು. ವಿದ್ಯಾರ್ಥಿಗಳು ಹಿಂಜರಿಕೆಯಿಲ್ಲದೆ ತಮ್ಮೊಂದಿಗೆ ಪ್ರಶ್ನೆಗಳನ್ನು ಕೇಳಲು, ಸಂಭಾಷಣೆ, ಸಂವಹನ ಮಾಡಲು ಶಿಕ್ಷಕರು ವಿದ್ಯಾರ್ಥಿಗಳನ್ನು ಹುರಿದುಂಬಿಸಬೇಕು. ಶಿಸ್ತು ಕಾಪಾಡುವ ನೆಪದಿಂದ ವಿದ್ಯಾರ್ಥಿಗಳ ಅಭಿವ್ಯಕ್ತಿಯನ್ನು ದಮನ ಮಾಡಿದಲ್ಲಿ ವಿದ್ಯಾರ್ಥಿಗಳು ಮಾತನಾಡಲು, ಸಂವಹನ ಮಾಡಲು ಹಿಂಜರಿಯುತ್ತಾರೆ. ಈ ರೀತಿಯ ಹಿಂಜರಿಕೆ ಅವರಲ್ಲಿನ ಆತ್ಮವಿಶ್ವಾಸವನ್ನು ಕೊಂದುಹಾಕುತ್ತದೆ.

ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಭಾಷೆಯಲ್ಲಿ ಬರವಣಿಗೆ, ಸಂವಹನ ಮಾಡಲು ಸಂಕೋಚ, ಭಯಗಳಿರುತ್ತವೆ. ಕನ್ನಡ ಭಾಷೆಯನ್ನು ಉತ್ತಮವಾಗಿ ಕಲಿಸುವ ಜೊತೆ ಇಂಗ್ಲಿಷ್ ಭಾಷೆಯಲ್ಲಿ ಚೆನ್ನಾಗಿ ಬರೆಯಲು, ಸಂವಹನ ಮಾಡಲು ಸಾಧ್ಯವಾಗುವಂತೆ ಅಗತ್ಯ ಚಟುವಟಿಕೆ, ಅಭ್ಯಾಸಗಳನ್ನು ರೂಪಿಸಿ, ಅನುಷ್ಠಾನಗೊಳಿಸಬೇಕು. ಈ ದಿಸೆಯಲ್ಲಿ ರಾಜ್ಯ ಸರ್ಕಾರವು ಶಾಲೆಗಳಲ್ಲಿ 'ಸ್ಪೋಕನ್ ಇಂಗ್ಲಿಷ್' ಕೋರ್ಸ್ ಆರಂಭಿಸುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ.

ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಪ್ರಯೋಗ, ಚಟುವಟಿಕೆ, ಪ್ರಾಜೆಕ್ಟ್‌ಗಳ ಮೂಲಕ ವಿಜ್ಞಾನ, ಗಣಿತ ವಿಷಯಗಳನ್ನು ಪರಿಣಾಮಕಾರಿಯಾಗಿ ಕಲಿಸುವ ವ್ಯವಸ್ಥೆಗಳಾಗಬೇಕು. ಕಂಪ್ಯೂಟರ್ ಮತ್ತು ಇಂಟರ್ನೆಟ್ ಬಳಕೆಯ ಕೌಶಲಗಳನ್ನು ಕಲಿಸುವ ಜೊತೆ ಭವಿಷ್ಯದಲ್ಲಿ ಒದಗಬಹುದಾದ ಶಿಕ್ಷಣ ಮತ್ತು ವೃತ್ತಿಯ ಅವಕಾಶಗಳನ್ನು ತಿಳಿಸಿ, ಅವರಲ್ಲಿ ಕನಸು, ಆಕಾಂಕ್ಷೆಗಳು ಮೊಳೆಯುವಂತೆ ಮಾಡಬೇಕು. ಇದಕ್ಕಾಗಿ ಗ್ರಾಮೀಣ ಭಾಗದ ಶಾಲೆಗಳಲ್ಲಿ ಅಗತ್ಯವಾದ ಕಂಪ್ಯೂಟರ್, ಇಂಟರ್ನೆಟ್ ವ್ಯವಸ್ಥೆಗಳು ಲಭ್ಯವಿರುವಂತೆ ಮಾಡಬೇಕು.



ಗ್ರಾಮೀಣ ಭಾಗದ ಅನೇಕ ವಿದ್ಯಾರ್ಥಿಗಳು ತಮ್ಮ ಕುಟುಂಬವರ್ಗಕ್ಕೆ ಕೃಷಿ ಹಾಗೂ ಇತರೆ ಚಟುವಟಿಕೆಗಳನ್ನು ಕೈಗೊಳ್ಳಲು ನೆರವಾಗುವ ಉದ್ದೇಶದಿಂದ ಶಾಲೆ, ಕಾಲೇಜುಗಳನ್ನು ಮಧ್ಯದಲ್ಲಿ ತೊರೆಯುತ್ತಾರೆ. ಇದನ್ನು ತಪ್ಪಿಸಲು ಶಿಕ್ಷಕರು ತಮ್ಮ ವಿದ್ಯಾರ್ಥಿಗಳು ಹಾಗೂ ಪೋಷಕರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ಅಗತ್ಯ ಸಮಾಲೋಚನೆಗಳನ್ನು ಕೈಗೊಂಡು, ಶಿಕ್ಷಣ ಮುಂದುವರಿಸಲು ನೆರವಾಗಬೇಕು. ಸಂಕಷ್ಟದಲ್ಲಿರುವ ಗ್ರಾಮೀಣ ವಿದ್ಯಾರ್ಥಿಗಳು ಶಿಕ್ಷಣ ಮುಂದುವರಿಸಲು ಅಗತ್ಯವಾದ ಆಸರೆ, ಬೆಂಬಲ, ಒತ್ತಾಸೆ ನೀಡುವ ಸರ್ಕಾರದ ಕಾರ್ಯಕ್ರಮಗಳ ಕುರಿತ ಮಾಹಿತಿ ಸಂಬಂಧಿಸಿದ ಎಲ್ಲರಿಗೂ ತಲುಪುವಂತೆ ನೋಡಿಕೊಳ್ಳಬೇಕು.

ನಗರ ಪ್ರದೇಶ ಮತ್ತು ಗ್ರಾಮೀಣ ಭಾಗದ ಶಾಲೆ, ಕಾಲೇಜು, ಪರಿಸರ, ಜನಜೀವನ, ಸಂಸ್ಕೃತಿಯನ್ನು ವಿದ್ಯಾರ್ಥಿ ಮತ್ತು ಶಿಕ್ಷಕರಿಗೆ ಪರಸ್ಪರ ಪರಿಚಯಿಸಬೇಕು. ಈ ದಿಸೆಯಲ್ಲಿ ಗ್ರಾಮೀಣ- ನಗರ ಶಾಲೆಗಳನ್ನು ಪರಸ್ಪರ ಜೋಡಿಸಿ, ಭೇಟಿ, ಸಂವಾದ, ಅನುಭವ ಹಂಚಿಕೆಗಳಿಗೆ ಅನುಕೂಲ ಕಲ್ಪಿಸುವ 'ಶಾಲಾ ಜೋಡಣೆ' ಕಾರ್ಯಕ್ರಮವನ್ನು ರೂಪಿಸಲಾಗಿದ್ದು, ಅದನ್ನು ಇನ್ನಷ್ಟು ಪರಿಣಾಮಕಾರಿಯಾಗಿಸಬೇಕು.

ದೇಶದಲ್ಲಿರುವ ಒಟ್ಟು 15.09 ಲಕ್ಷದಷ್ಟು ಶಾಲೆಗಳಲ್ಲಿ ಶೇ 83.43 ರಷ್ಟು (12.59 ಲಕ್ಷ) ಶಾಲೆಗಳು ಗ್ರಾಮೀಣ ಭಾಗದಲಿದ್ದು, ಈ ಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿರುವ ಮಕ್ಕಳು ಯಾವ ರೀತಿಯಲ್ಲೂ ಹಿಂದೆ ಉಳಿಯದಂತಹ ಕಾರ್ಯಕ್ರಮಗಳನ್ನು ರೂಪಿಸಿ, ಮುನ್ನಡೆಯುವುದು ಇಂದಿನ ತುರ್ತು ಅಗತ್ಯವಾಗಿದೆ.

ವಾಚಕರ ವಾಣಿ

ಸಾಹಿತ್ಯ ಸಮ್ಮೇಳನವೂ ಭೋಜನ ವ್ಯವಸ್ಥೆಯೂ

ನವೆಂಬರ್ 11ರಿಂದ 13ರವರೆಗೆ ಹಾವೇರಿಯಲ್ಲಿ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನೆರವೇರಲಿರುವುದು ಸಂತೋಷ. ಮೂರು ದಿನ ನಡೆಯುವ ಸಮ್ಮೇಳನದಲ್ಲಿ ಭಾಗವಹಿಸುವವರಿಗೆ ಉಪಾಹಾರ, ಬೋಜನ ವಿತರಿಸುವುದೇ ಆಯೋಜಕರ ಪಾಲಿಗೆ ದೊಡ್ಡ ಸವಾಲು. ಭೋಜನ ವ್ಯವಸ್ಥೆಯ ಸುತ್ತಲೇ ದೂರು ದುಮ್ಮಾನಗಳು ಗಿರಕಿ ಹೊಡೆಯುವುದನ್ನು ಹಿಂದೆ ಕಂಡಿದ್ದೇವೆ. ಗೌಜು, ಗದ್ದಲವೂ ಆಗಿವೆ. ಊಟದ ಏರ್ಪಾಡು, ಸಮ್ಮೇಳನದ ಯಶಸ್ಸಿನ ಮಾನಕ ಎನ್ನುವಂತಾಗಿದೆ. ಸಂವಾದ, ಗೋಷ್ಠಿ, ನಿರ್ಣಯಗಳಿಗಿಂತಲೂ ಭೋಜನಕ್ಕೆ ಏನೇನು ತಯಾರಿ? ಹೇಗೆ ಪರಿಚಾರಿಕೆ? ಸೇವಿಸಿದವರೆಷ್ಟು?... ಈ ಕುರಿತ ವರದಿಗಳೇ ಮಾಧ್ಯಮಗಳಲ್ಲಿ ಹೆಚ್ಚು ವಿಜೃಂಭಿಸುತ್ತವೆ.

ಆಯೋಜಕರು ಸಮ್ಮೇಳನ ನಡೆಯುವ ಸ್ಥಳದ ಸಮೀಪವೇ ವಿಶಾಲ ಆವರಣದಲ್ಲಿ ಆಹಾರ ಮಳಿಗೆಗಳನ್ನು ಸೂಕ್ತ ಷರತ್ತುಗಳೊಂದಿಗೆ ತೆರೆಯಲು ವ್ಯಾಪಾರಿಗಳಿಗೆ ಅವಕಾಶ ನೀಡುವುದೇ ಉತ್ತಮ. ಇದರಿಂದ ಮೂರು ಪ್ರಯೋಜನಗಳು. ಆಯೋಜಕರು ಸಮ್ಮೇಳನದ ವೇದಿಕೆ ಕಾರ್ಯಕ್ರಮಗಳತ್ತ ಇನ್ನಷ್ಟು ಗಮನ ಹರಿಸಬಹುದು. ಪ್ರತಿನಿಧಿಗಳಿಗೆ ಆಯ್ಕೆಯ ಆಹಾರ ದೊರೆಯುವುದು. ಕೋವಿಡ್ ಹೆಮ್ಮಾರಿಯಿಂದ ಈಗಷ್ಟೇ ಸುಧಾರಿಸಿಕೊಳ್ಳುತ್ತಿರುವ ಹೋಟೆಲ್ ಉದ್ಯಮ ತುಸುವಾದರೂ ಬೀಗೀತು.

ಟಿ. ಶ್ರೀಹರ್ಷ, ಬೆಂಗಳೂರು

ನಕಲಿ ದಾಖಲೆಗಳ ಬಗ್ಗೆ ಎಚ್ಚರ ಅಗತ್ಯ

ಒಂದೇ ನಿವೇಶನಕ್ಕೆ ಮೂರು ಬ್ಯಾಂಕ್‌ಗಳಿಂದ ಸಾಲ ಪಡೆದು ವಂಚಿಸಿರುವುದು ಮೈಸೂರು ನಗರದಿಂದ ವರದಿಯಾಗಿದೆ. ಸಾಮಾನ್ಯವಾಗಿ ಬ್ಯಾಂಕ್‌ಗಳು ಸಾಲ ನೀಡುವಾಗ ಮೂಲ ದಾಖಲೆ ಹಾಗೂ ಉಪ ನೋಂದಣಾಧಿಕಾರಿ ಕಚೇರಿಯ ಋಣಭಾರ ಪತ್ರ ಪಡೆದು ಸಾಲ ನೀಡುತ್ತವೆ. ಇದು ವಾಸ್ತವಾಂಶ. ಹಾಗಿದ್ದರೂ ಇವುಗಳನ್ನು ಪರಿಶೀಲಿಸದೇ ಹೇಗೆ ಬ್ಯಾಂಕ್‌ಗಳು ಮತ್ತೆ ಮತ್ತೆ ಸಾಲ ಮಂಜೂರು ಮಾಡಿದವು? ಇಲ್ಲಿ ಯಾವ ರೀತಿ ವಂಚಿಸಲಾಗಿದೆ ಎನ್ನುವುದನ್ನು ಬ್ಯಾಂಕ್‌ಗಳು ಬಹಿರಂಗಪಡಿಸಬೇಕು.

ನಿವೇಶನದ ಅಥವಾ ಮನೆಯ ಮೂಲ ದಾಖಲೆಗಳು ಕಳೆದಿವೆ, ಸಿಕ್ಕಿದವರು ತಲುಪಿಸಿ ಎನ್ನುವ ಜಾಹೀರಾತುಗಳು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುತ್ತವೆ. ಅಷ್ಟು ಸುಲಭವಾಗಿ ಯಾರೂ ಮೂಲ ದಾಖಲೆಗಳನ್ನು ಕಳೆದುಕೊಳ್ಳುವುದಿಲ್ಲ. ಆದರೂ ಕಳೆದಿವೆ ಎನ್ನುವ ಜಾಹೀರಾತಿನಲ್ಲಿ ಇಂತಹ ವ್ಯವಹಾರದ ಸಂಶಯ ಮೂಡದಿರದು. ಇವುಗಳ ಬಗ್ಗೆಯೂ ಪಾಲಿಕೆ, ನಗರಾಭಿವೃದ್ಧಿ ಪ್ರಾಧಿಕಾರಗಳು ಎಚ್ಚರ ವಹಿಸಬೇಕು.

ಮುಳ್ಳೂರು ಪ್ರಕಾಶ್, ಮೈಸೂರು

ದಸರಾ: ಚೈತನ್ಯ ತುಂಬಲಿ

ದಸರಾ ಈ ಬಾರಿ ಅದ್ದೂರಿಯಾಗಿ ಜರುಗಲಿದೆ ಎಂದು ಸರ್ಕಾರ ಹೇಳಿದೆ. ಆಷಾಢ ಮುಗಿದು ಶ್ರಾವಣ ಮಾಸ ಪ್ರಾರಂಭವೆಂದರೆ ಹಬ್ಬಗಳ ಸರಣಿ. ಎರಡು ವರ್ಷಗಳಿಂದ ಕೋವಿಡ್‌ನಿಂದ ಕಳೆಗುಂದಿದ್ದ ನಾಡಹಬ್ಬವು ಈ ಸಲ ಹಳೆಯ ವೈಭವ ಪಡೆಯಲಿ. ವ್ಯಾಪಾರ- ವಹಿವಾಟು ಹೆಚ್ಚು ನಡೆದು, ಅದನ್ನೇ ನಂಬಿರುವ ಕುಟುಂಬಗಳಲ್ಲಿ ಚೈತನ್ಯ ತುಂಬಲಿ.

ಹರವೆ ಸಂಗಣ್ಣ ಪ್ರಕಾಶ್, ಹರವೆ, ಚಾಮರಾಜನಗರ

ಮೌಲ್ಯಮಾಪಕರಿಗೆ ಬೇಕು ಬದ್ಧತೆ

ಈ ಬಾರಿಯ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದವರ ಪೈಕಿ 219 ವಿದ್ಯಾರ್ಥಿಗಳು ಮರುಮೌಲ್ಯಮಾಪನದಲ್ಲಿ ಹೆಚ್ಚಿನ ಅಂಕಗಳನ್ನು ಪಡೆದು ಉತ್ತೀರ್ಣರಾಗಿರುವುದು ವರದಿಯಾಗಿದೆ (ಪ್ರ.ವಾ., ಆ.5). ಅದರಲ್ಲೂ 40 ಅಂಕ ಗಳಿಸಿದ್ದ ವಿದ್ಯಾರ್ಥಿಯೊಬ್ಬರಿಗೆ ಮರುಮೌಲ್ಯಮಾಪನದ ನಂತರ 99 ಅಂಕಗಳು ಲಭಿಸಿವೆ. ಈ ಸುದ್ದಿಯು ವಿದ್ಯಾರ್ಥಿಗಳು ಮತ್ತು ಪೋಷಕರಲ್ಲಿ ನಿಜಕ್ಕೂ ಗಾಬರಿ ಮೂಡಿಸುವಂತಹುದು.

ಎಷ್ಟು ಮಂದಿಗೆ ಮರುಮೌಲ್ಯಮಾಪನಕ್ಕೆ ಅರ್ಜಿ ಹಾಕುವ ತಾಳ್ಮೆ ಮತ್ತು ಹಣ ಇರುತ್ತದೆ? ನಪಾಸಾದ ವಿದ್ಯಾರ್ಥಿಯು ಒಂದು ವೇಳೆ ದುಡುಕಿ ತನ್ನ ಜೀವಕ್ಕೇ ಕೇಡು ಮಾಡಿಕೊಂಡ ನಂತರ ಉತ್ತೀರ್ಣ ಎಂಬ ಫಲಿತಾಂಶ ಬಂದರೆ ಅದರ ಹೊಣೆ ಯಾರದ್ದು? ಉತ್ತರಪತ್ರಿಕೆ ಉತ್ತರಗಳನ್ನು ಪರಿಶೀಲಿಸುವ ಮೌಲ್ಯಮಾಪಕರು ಅಂಕಗಳನ್ನು ಕೂಡುವಾಗ ತಪ್ಪು ಮಾಡುವುದೇಕೆ? ಅದು ಉದಾಸೀನವೇ? ಅಥವಾ ಹೆಚ್ಚಿನ ಒತ್ತಡವೇ? ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವ ಮೌಲ್ಯಮಾಪಕರಿಗೆ ಹೆಚ್ಚಿನ ಬದ್ಧತೆ ಇರಬೇಕು.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಪರೀಕ್ಷಾ ಸಿದ್ಧತೆ: ಏಕೆ ಈ ಅಸಡ್ಡೆ?

ಒಂದು ಕಾಲ ಇತ್ತು. ಯಾವುದೇ ಪ್ರವೇಶ ಪರೀಕ್ಷೆಗೆ ಬಹಳಷ್ಟು ಮುಂಚಿತವಾಗಿಯೇ ತಯಾರಿ ಪ್ರಾರಂಭವಾಗುತ್ತಿತ್ತು. ಮುಂಚೆಯೇ ಪ್ರವೇಶಪತ್ರ ತೆಗೆದುಕೊಂಡು ಅದರ ಮೇಲೆ ಗೆಜೆಟೆಡ್ ಆಫೀಸರ್ ಸಹಿ ಮತ್ತು ಮೊಹರು ಹಾಕಿಸಿಕೊಂಡು ರೆಡಿಯಾಗಿಟ್ಟುಕೊಂಡಿರುತ್ತಿದ್ದೆವು. ಪರೀಕ್ಷೆಗಾಗಿ ತಿಂಗಳುಗಟ್ಟಲೆ ನಿದ್ದೆಗೆಟ್ಟು ಓದುತ್ತಿದ್ದ ಕಾಲವದು. ಆದರೆ ಈಗ ಕಾಲ ಬದಲಾಗಿದೆ. ಪರೀಕ್ಷೆಯ ಹಿಂದಿನ ದಿನ ಅಷ್ಟೇ ಏಕೆ? ಪರೀಕ್ಷೆಯ ದಿನವೂ ಪ್ರವೇಶಪತ್ರಕ್ಕೆ ಗೆಜೆಟೆಡ್ ಅಧಿಕಾರಿಯ ಸಹಿಗಾಗಿ ಅಲೆದಾಡುವುದು ಸಾಮಾನ್ಯವಾಗಿಬಿಟ್ಟಿದೆ.

ಇದೇ ಭಾನುವಾರ (ಆ. 7) ಕೆಪಿಟಿಸಿಎಲ್ ಹುದ್ದೆಗಳಿಗೆ ಪ್ರವೇಶ ಪರೀಕ್ಷೆ ಜರುಗಿತು. ಪರೀಕ್ಷೆಯು ಬೆಳಿಗ್ಗೆ 10.30ಕ್ಕೆ ನಿಗದಿಯಾಗಿದ್ದರೂ 10.15ರವರೆಗೂ ಪ್ರವೇಶ ಪತ್ರಕ್ಕೆ ಗೆಜೆಟೆಡ್ ಅಧಿಕಾರಿಯ ಸಹಿ ಹಾಕಿಸಿಕೊಳ್ಳಲು ಅಭ್ಯರ್ಥಿಗಳು ಪರದಾಡುತ್ತಿದ್ದದ್ದು ಕಂಡುಬಂದಿದ್ದು ವಿಪರ್ಯಾಸ. ಇನ್ನು ಕೆಲವು ಅಭ್ಯರ್ಥಿಗಳು ಪ್ರವೇಶಪತ್ರಗಳಿಗೆ ತಮ್ಮ ಭಾವಚಿತ್ರ ಕೂಡ ಅಂಟಿಸದೆ ಕೈಯಲ್ಲಿ ಫೋಟೊ ಹಿಡಿದುಕೊಂಡು, ಈ ಫೋಟೊ ಮೇಲೆಯೇ ಸಹಿ ಮಾಡುವಂತೆ ಅಧಿಕಾರಿಗಳನ್ನು ಅಂಗಲಾಚುತ್ತಿದ್ದ ದೃಶ್ಯ ಅಯ್ಯೋ ಎನಿಸುವಂತಿತ್ತು. ನೌಕರಿ ಪಡೆಯಲು ಅಗತ್ಯ ಕೊಂಡಿಯಂತೆ ಇರುವ ಪ್ರವೇಶ ಪತ್ರದ ಬಗ್ಗೆಯೇ ಇಷ್ಟೊಂದು ಅಸಡ್ಡೆ ತೋರುವ ಅಭ್ಯರ್ಥಿಗಳು ಮುಂದೆ ನೌಕರಿ ಹೇಗೆ ಮಾಡುತ್ತಾರೆಯೋ ಗೊತ್ತಿಲ್ಲ.

ಭುವನೇಶ್ವರಿ ಅಚ್ಚೀಗಾಂವ, ವಿಜಯಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಸಹ್ಯಾದ್ರಿಯ ಸಂರಕ್ಷಣೆ

ಅಗತ್ಯವಷ್ಟೇ ಅಲ್ಲ, ಅವಕಾಶವೂ ಹೌದು

ಕಾಡು-ಗೋಮಾಳ, ನದಿ-ಕೆರೆಗಳನ್ನು ರಕ್ಷಿಕೊಳ್ಳುವುದರಲ್ಲೇ ತಮ್ಮ ಬದುಕಿನ ಸುರಕ್ಷತೆ ಅಡಗಿದೆ ಎಂಬುದನ್ನು ಪಶ್ಚಿಮ ಘಟ್ಟದ ಜನರು ಅರಿತಿದ್ದಾರೆ. ಆದರೆ, ಸರ್ಕಾರ ಮಾತ್ರ ಜನಸಾಮಾನ್ಯರ ಈ ಒತ್ತಾಸೆಗೆ ಕಿವಿಗೊಡುತ್ತಿಲ್ಲ. ಏಕೆಂದರೆ, ಕೆಲವೇ ಕೆಲವು ವ್ಯಕ್ತಿಗಳು ತಮ್ಮ ಅಭಿಪ್ರಾಯವನ್ನು ಜನರ ಮೇಲೆ ಹೇರಿ, ಸೂಕ್ತ ಸಂರಕ್ಷಣಾ ನೀತಿ ರೂಪಿಸಲು ಸರ್ಕಾರಕ್ಕೆ ಅವಕಾಶವನ್ನೇ ನೀಡುತ್ತಿಲ್ಲ. ಬಹಳ ದುರ್ದೈವದ ಸಂಗತಿಯಿದು

• ಅನಂತ ಹೆಗಡೆ ಆಶೀಸರ



ಪಶ್ಚಿಮ ಘಟ್ಟದ ಸೂಕ್ಷ್ಮ ಪ್ರದೇಶಗಳನ್ನು ಗುರುತಿಸುವ ಕುರಿತಂತೆ, ಕೇಂದ್ರ ಸರ್ಕಾರವು ಇತ್ತೀಚೆಗೆ ಪ್ರಕಟಿಸಿರುವ ಕರಡು ಅಧಿಸೂಚನೆ ಕುರಿತಾಗಿ ಇದೀಗ ವ್ಯಾಪಕ ಚರ್ಚೆ ನಡೆದಿದೆ. ಕಳೆದ ನಾಲ್ಕು ದಶಕಗಳಿಂದ ಸಹ್ಯಾದ್ರಿಯ ಸಂರಕ್ಷಣೆ ಹಾಗೂ ಸುಸ್ಥಿರ ಅಭಿವೃದ್ಧಿಗಾಗಿ, ಒಂದು ನಾಗರಿಕ ಸಂಘಟನೆಯಾಗಿ ಹಲವು ಆಯಾಮಗಳಲ್ಲಿ ನಾವು ಪ್ರಯತ್ನಿಸುತ್ತಾ ಬಂದಿದ್ದೇವೆ. ಜನರ ಸಹಭಾಗಿತ್ವದಲ್ಲಿ ನೈಸರ್ಗಿಕ ಸಂಪನ್ಮೂಲಗಳನ್ನು ರಕ್ಷಿಸಿದ್ದು, ಪರಿಸರ ನಾಶ ಮಾಡುವ ಬೃಹತ್ ಅಪಾಯಕಾರಿ ಯೋಜನೆಗಳ ಪ್ರಸ್ತಾವನೆಗಳನ್ನು ಪ್ರಜಾಸತ್ತಾತ್ಮಕವಾಗಿ ವಿರೋಧಿಸಿದ್ದು, ಸರ್ಕಾರಿ ಯೋಜನೆಗಳ ಅನುಷ್ಠಾನದಲ್ಲಿ ತಳಮಟ್ಟದಲ್ಲಿ ರಚನಾತ್ಮಕವಾಗಿ ಕೈಜೋಡಿಸಿದ್ದು, ಪಶ್ಚಿಮ ಘಟ್ಟ ಕಾರ್ಯಪಡೆಯಂಥ ಸರ್ಕಾರದ ಘಟಕದ ಭಾಗವಾಗಿ ರೂಪಿಸಿದ ಸಂರಕ್ಷಣಾ ಯೋಜನೆಗಳು- ಇವೆಲ್ಲ ನಮ್ಮ ಪ್ರಯತ್ನಗಳಲ್ಲಿ ಸೇರಿವೆ. ನಮ್ಮ ಅನುಭವ ಹಾಗೂ ಹಲವಾರು ಖಚಿತ ಮಾಹಿತಿಗಳ ಆಧಾರದಲ್ಲಿ ಹೇಳಬೇಕೆಂದರೆ, ಪಶ್ಚಿಮಘಟ್ಟದ ಅನನ್ಯತೆ ಹಾಗೂ ಸಂರಕ್ಷಣೆಯ ಅಗತ್ಯದ ಅರಿವು ಇಲ್ಲಿನ ನಿವಾಸಿಗಳಾದ ರೈತರು, ವನವಾಸಿಗಳು, ಬುಡಕಟ್ಟು ಜನಾಂಗಗಳು, ಕೃಷಿ ಕುಶಲಕರ್ಮಿಗಳು-ಎಲ್ಲರಿಗೂ ಇದೆ. ಕಾಡು-ಗೋಮಾಳ, ನದಿ-ಕೆರೆಗಳನ್ನು ರಕ್ಷಿಸಿಕೊಳ್ಳುವುದರಲ್ಲೇ ತಮ್ಮ ಬದುಕಿನ ಸುರಕ್ಷತೆ ಅಡಗಿದೆ ಎಂಬುದನ್ನು ಅವರು ಅರಿತಿದ್ದಾರೆ. ಆದರೆ, ಸರ್ಕಾರ ಮಾತ್ರ ಜನಸಾಮಾನ್ಯರ ಈ ಒತ್ತಾಸೆಗೆ ಕಿವಿಗೊಡುತ್ತಿಲ್ಲ. ಏಕೆಂದರೆ, ಕೆಲವೇ ಕೆಲವು ವ್ಯಕ್ತಿಗಳು ತಮ್ಮ ಅಭಿಪ್ರಾಯವನ್ನು ಜನರ ಮೇಲೆ ಹೇರಿ, ಸೂಕ್ತ ಸಂರಕ್ಷಣಾ ನೀತಿ ರೂಪಿಸಲು ಸರ್ಕಾರಕ್ಕೆ ಅವಕಾಶವನ್ನೇ ನೀಡುತ್ತಿಲ್ಲ. ಬಹಳ ದುರ್ದೈವದ ಸಂಗತಿಯಿದು.

ಇದರೊಂದಿಗೆ, ಕಾಡಿನ ಅತಿಕ್ರಮಣ, ಅಕ್ರಮ ಗಣಿಗಾರಿಕೆ, ನದಿಮೂಲಗಳ ಹಾಗೂ ಕೆರೆಗಳ ಮಾಲಿನ್ಯ, ಗೋಮಾಳ ಭೂಮಿ ನಾಶ ಇತ್ಯಾದಿಗಳೆಲ್ಲ ಮತ್ತಷ್ಟು ಹೆಚ್ಚುತ್ತಿವೆ. ಹೀಗಾಗಿ, ನೆರೆ-ಬರ, ಭೂಕುಸಿತ, ವನ್ಯಜೀವಿ-ಮಾನವ ಸಂಘರ್ಷ- ಇವೆಲ್ಲ, ಗಂಭೀರ ಹಂತಕ್ಕೆ ತಲುಪುತ್ತಿದ್ದು, ಜನರು ಕಂಗೆಟ್ಟಿದ್ದಾರೆ. ಭೂಕುಸಿತಗಳ ಅಧ್ಯಯನಕ್ಕಾಗಿ ರಾಜ್ಯ ಸರ್ಕಾರವು ನನ್ನ ನೇತೃತ್ವದಲ್ಲಿ 2020ರಲ್ಲಿ ರಚಿಸಿದ್ದ ಉನ್ನತ ಮಟ್ಟದ ತಜ್ಞ ಸಮಿತಿಯ ಅಧ್ಯಯನದಲ್ಲಿ ಕಂಡಿದ್ದೇನೆಂದರೆ, ಸೂಕ್ಷ್ಮವೆಂದು ಈಗ ಗುರುತಿಸಿರುವ ಸಹ್ಯಾದ್ರಿಯ ಹೃದಯಭಾಗಗಳಲ್ಲೇ ಈ ಭೂಕುಸಿತಗಳೆಲ್ಲ ಸಂಭವಿಸುತ್ತಿರುವುದು. ಈಗಲೂ ಇದರ ಸಂರಕ್ಷಣೆಗೆ ಸರ್ಕಾರ ಮುಂದಾಗದಿದ್ದರೆ, ಇನ್ನು ಇದನ್ನು ಮಾಡುವುದು ಯಾವಾಗ?

ಕೋವಿಡ್ ಸಾಂಕ್ರಾಮಿಕದಂಥ ಸಂದರ್ಭದಲ್ಲಿ ತೋರಿದ ತ್ವರಿತ ಸ್ಪಂದನೆಯ ರೀತಿಯಲ್ಲಿ, ಸರ್ಕಾರವು ಈ ಪರಿಸರ ತುರ್ತುಪರಿಸ್ಥಿತಿಯನ್ನೂ ಆದ್ಯತೆಯಿಂದ ನಿರ್ವಹಿಸಬೇಕಿದೆ. ಸಹ್ಯಾದ್ರಿಯ ಕಾಡು-ಶಿಖರ ಶ್ರೇಣಿಗಳು, ಕಾನು-ಸಮುದಾಯಭೂಮಿ, ನದಿಕಣಿವೆ-ಕೆರೆಗಳು- ಎಲ್ಲವನ್ನೂ ರಕ್ಷಿಸಬೇಕಿದೆ. ಕಾಡಿನ ಅತಿಕ್ರಮಣ ಹಾಗೂ ಅಕ್ರಮ ಗಣಿಗಾರಿಕೆ ನಿಲ್ಲಬೇಕಿದೆ. ಆರ್ಥಿಕ ಅಭಿವೃದ್ಧಿ ಸಾಧಿಸಲು ಜಲಾನಯನ ಅಭಿವೃದ್ಧಿ ತತ್ವ ಆಧಾರಿತ ಕೃಷಿ-ತೋಟಗಾರಿಕೆ, ಜೇನುಸಾಕಣೆ, ಔಷಧಿ ಮೂಲಿಕಾ ಉದ್ಯಮ, ಇವೆಲ್ಲ ಆದ್ಯತೆ ದೊರಕಬೇಕಿದೆ. ಪರಿಸರ ಸುರಕ್ಷತೆ ಹಾಗೂ ಆರ್ಥಿಕ ಅಭಿವೃದ್ಧಿ ಇವೆರಡೂ ಜೊತೆಯಾಗಿ ಸಾಗಲು ಖಂಡಿತಾ ಸಾಧ್ಯವಿದೆ. ಪಶ್ಚಿಮ ಘಟ್ಟಗಳ ರಕ್ಷಣೆಗೆ ನಿಖರವಾದ ನೀತಿಯಿದ್ದರೆ ಮಾತ್ರ ಇದು ಸಾಧ್ಯವಾದೀತು. ಸೂಕ್ಷ್ಮಪ್ರದೇಶಗಳ ಕುರಿತ ಈ ಕರಡು ಆದೇಶವನ್ನು ಈ ಹಿನ್ನೆಲೆಯಲ್ಲಿ ನೋಡಬೇಕು. ಸ್ಥಳೀಯ ರೈತರು, ವನವಾಸಿಗಳು, ಬುಡಕಟ್ಟು ಜನಾಂಗ, ಕೃಷಿ ಕುಶಲಕರ್ಮಿಗಳ ಜೀವನಭದ್ರತೆಗೆ ತೊಂದರೆ ನೀಡುವ ಯಾವ ಅಂಶವೂ ಅಲ್ಲಿಲ್ಲ. ಚಿಕ್ಕಪುಟ್ಟ ಇತಿಮಿತಿಗಳಿವೆ ಅಂದುಕೊಂಡರೂ, ಅವನ್ನೆಲ್ಲ ಸಮಾಲೋಚನೆ ಮೂಲಕ ಸೂಕ್ತವಾಗಿ ತಿದ್ದುಪಡಿ ಮಾಡಲು ಸಾಧ್ಯವಿದೆ. ಆದ್ದರಿಂದ, ಗ್ರಾಮಮಟ್ಟದಲ್ಲಿ ಈ ಅಧಿಸೂಚನೆಯ ಕುರಿತು ನೈಜ ಜನ-ಸಮಾಲೋಚನೆ ನಡೆಸಲು ರಾಜಕೀಯ ವರ್ಗ ಪ್ರಾಮಾಣಿಕವಾಗಿ ಪ್ರಯತ್ನಿಸಬೇಕಿದೆ. ಹಾಗಾದರೆ, ಸೂಕ್ಷ್ಮ ಪ್ರದೇಶಗಳನ್ನು ಗುರುತಿಸಿದ ಮೇಲೆ ಮುಂದಿನ ಸಂರಕ್ಷಣೆ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಹೇಗೆ ಸಾಧಿಸಬಹುದು? ಅದಕ್ಕೂ ಹಲವು ಸಾಧ್ಯತೆಗಳಿವೆ.

ಮೊದಲನೆಯದು, ಗ್ರಾಮಮಟ್ಟದಲ್ಲಿ ಜನಸಹಭಾಗಿತ್ವ ಸಾಧಿಸುವ ಸಾಂಸ್ಥಿಕ ರಚನೆಗಳನ್ನು ಬಲಪಡಿಸುವುದು. ಜೀವವೈವಿಧ್ಯ ಸಂರಕ್ಷಣಾ ಕಾನೂನು (2002)ಅನ್ವಯ ಪಂಚಾಯಿತಿರಾಜ್ ಇಲಾಖೆಯು ಎಲ್ಲ ಗ್ರಾಮ ಪಂಚಾಯಿತಿಗಳಲ್ಲಿ ಈಗಾಗಲೇ 'ಜೀವವೈವಿಧ್ಯ ನಿರ್ವಹಣಾ ಸಮಿತಿ'ಗಳನ್ನು ಸ್ಥಾಪಿಸಿದೆ. ಈ ಸಮಿತಿಗಳ ಬಲವರ್ಧನೆ ಮಾಡಬೇಕು. ಅದರ ಮಾರ್ಗದರ್ಶನದಲ್ಲಿ 'ಗ್ರಾಮ ಅರಣ್ಯ ಸಮಿತಿಗಳು' ಅಲ್ಲಿನ ಕಾಡು-ದೇವರಕಾಡು, ಗೋಮಾಳಗಳನ್ನು ರಕ್ಷಿಸುತ್ತಲೇ, ಸುಸ್ಥಿರವಾಗಿ ಕಾಡಿನ ಉತ್ಪನ್ನಗಳನ್ನು ಬಳಸುವ ವಿಧಾನ ರೂಪಿಸಬಹುದು. ಪರಿಸರ ಹಾಗೂ ಮೂಲಸೌಕರ್ಯಗಳನ್ನು ನಿರ್ಮಿಸಬಹುದು. ಕಾಡಿನ ಅತಿಕ್ರಮಣ ಹಾಗೂ ಬೆಂಕಿಯನ್ನು ಸ್ಥಳೀಯರ ಸಹಕಾರದಿಂದ ನಿಯಂತ್ರಿಸಬಹುದು. 'ಜಲಾನಯನ ಅಭಿವೃದ್ಧಿ ಸಮಿತಿ'ಗಳು ಬಲವರ್ಧನೆಗೊಂಡರೆ, ಹೊಳೆ-ಕೆರೆ, ಜಲಮೂಲಗಳನ್ನು ನಿಯಮಿತವಾಗಿ ಬಳಸುವ ಪರಿಪಾಠ ಜಾರಿಗೆ ತರಬಹುದು. ತಳಮಟ್ಟದಲ್ಲಿ ಈ ಬಗೆಯ ಸಮುದಾಯ ಸಬಲೀಕರಣಕ್ಕೆ ಸರ್ಕಾರ ಮುಂದಾದರೆ, ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಹಾಗೂ ಸುಸ್ಥಿರ ಬಳಕೆಯಲ್ಲಿ ಕ್ರಾಂತಿಯಾಗಲು ಸಾಧ್ಯವಿದೆ.

ಎರಡನೆಯದು, ನೀತಿ ನಿರೂಪಣೆ ಹಾಗೂ ಯೋಜನೆಗಳ ಅನುಷ್ಠಾನದಲ್ಲಿ ಜನರ ಪಾಲ್ಗೊಳ್ಳುವಿಕೆ ಕುರಿತು. ಕಾಡಿನ ಉತ್ಪನ್ನಗಳ ಕೊಯ್ಲು, ಗುಡ್ಡಗಾಡಿನ ಸೂಕ್ತವಾದ ರಸ್ತೆಗಳು, ಇಲ್ಲಿನ ಪರಿಸರಕ್ಕೆ ಹೊಂದುವ ಕಟ್ಟಡ ವಿಧಾನ ಹಾಗೂ ಕಾಮಗಾರಿಗಳನ್ನು ಅಳವಡಿಸಿಕೊಳ್ಳುವುದು, ನೆಲ-ಜಲ ಮಾಲಿನ್ಯ ನಿಯಂತ್ರಣ, ಮರಳಿನಂಥ ಕಟ್ಟಡ ನಿರ್ಮಾಣ ಸಾಮಗ್ರಿ ಬಳಕೆ, ಕಾಡಿನ ಅತಿಕ್ರಮಣ ತಡೆಯುವುದು ಇತ್ಯಾದಿಗಳಿಗೆ, ಸ್ಥಳೀಯವಾಗಿ ಸೂಕ್ತವಾದ ನೀತಿಗಳು ಹಾಗೂ ವಿಧಾನಗಳು ಬೇಕಾಗುತ್ತವೆ. ಆದರೆ, ಇನ್ನೂ ವಸಾಹತು ಮನಸ್ಥಿತಿಯಲ್ಲಿರುವ ಸರ್ಕಾರಿ ಇಲಾಖೆಗಳು ಎಲ್ಲವನ್ನೂ ತಮ್ಮ ಕೇಂದ್ರೀಕೃತ ನಿರ್ಧಾರಗಳಿಂದಲೇ ನಿಯಂತ್ರಿಸಲು ಪ್ರಯತ್ನಿಸುತ್ತಿವೆ. ಇದು ಉಪಯೋಗವಾಗದು. ಗ್ರಾಮ ಪಂಚಾಯಿತಿ ಹಾಗೂ ತಳಮಟ್ಟದ ಸಮುದಾಯಗಳೊಂದಿಗೆ ಜಂಟಿಯಾಗಿ ಶ್ರಮಿಸಿದರೆ ಮಾತ್ರ ಪರಿಣಾಮಕಾರಿಯಾದ ನೀತಿ ರೂಪಿಸಿ ಜಾರಿಗೆ ತರಲು ಸಾಧ್ಯ. ಸರ್ಕಾರ ಇದಕ್ಕೆ ತೆರೆದುಕೊಳ್ಳಬೇಕಿದೆ.

ಮೂರನೆಯದು, ಆರ್ಥಿಕ ಅಭಿವೃದ್ಧಿ ಕುರಿತು. ಸಹ್ಯಾದ್ರಿಯ ಸೂಕ್ಷ್ಮ ಪರಿಸರ ಹಾಗೂ ರೈತರು-ವನವಾಸಿಗಳ ವಿಶಿಷ್ಟವಾದ ಪರಿಸರಸ್ನೇಹಿ ಜೀವನಶೈಲಿ-ಇವೆರಡನ್ನೂ ಆಧರಿಸಿ, ಈ ಪ್ರದೇಶದ ಆರ್ಥಿಕ ಉನ್ನತಿ ಸಾಧ್ಯವೆಂದು ಅಧ್ಯಯನಗಳು ಸಾರುತ್ತಿವೆ. ಕಾಡು- ಕಣಿವೆ, ಜಲಮೂಲಗಳ ಮೂಲಕ್ಕೆ ಧಕ್ಕೆ ಬಾರದಂತೆ ಹಿತಮಿತವಾಗಿ ಬಳಸಿಕೊಂಡು, ಕೃಷಿ-ತೋಟಗಾರಿಕೆ, ಅರಣ್ಯಕೃಷಿ, ಜೇನುಕೃಷಿ, ಹೈನುಗಾರಿಕೆ, ಔಷಧಿಮೂಲಿಕೆ ಕೃಷಿ-ಮೌಲ್ಯವರ್ಧನೆ, ಪ್ರವಾಸೋದ್ಯಮ, ಗೋಬರ್ ಗ್ಯಾಸಿನಂಥ ಬದಲಿ ಇಂಧನ, ಕೃತಕಗೊಬ್ಬರದಿಂದ ರಸಗೊಬ್ಬರ, ಸಾಂಬಾರ ಬೆಳೆಗಳ ಮೌಲ್ಯವರ್ಧನೆ, ಜೋಡಿಬೆಳೆಯಂಥ ಸಾವಯವ ಉತ್ಪನ್ನಗಳ ಬ್ರ್ಯಾಂಡಿಂಗ್ ಮತ್ತು ರಫ್ತು ಇತ್ಯಾದಿ ಅನೇಕ ಕ್ಷೇತ್ರಗಳಲ್ಲಿ, ಜನರೇ ಸಾಧಿಸಿದ ಅನೇಕ ಸುಸ್ಥಿರ ಅಭಿವೃದ್ಧಿ ಯಶೋಗಾಥೆಗಳಿವೆ. ಇವನ್ನೆಲ್ಲ ಗುರುತಿಸಿ, ಸೂಕ್ತ ನೀತಿಯ ಮೂಲಕ ಪ್ರೋತ್ಸಾಹಿಸಿ ವ್ಯಾಪಕವಾಗಿ ಜಾರಿಗೆ ತರುವ ಬದ್ಧತೆಯನ್ನು ಸರ್ಕಾರ ತೋರಿದ್ದಾದರೆ, ಮಲೆನಾಡು ಹಾಗೂ ಕರಾವಳಿಯಲ್ಲಿ ಅರ್ಥಾಭಿವೃದ್ಧಿ ಹಾಗೂ ಉದ್ಯೋಗ ನಿರ್ಮಾಣದಲ್ಲಿ ದೊಡ್ಡ ಕ್ರಾಂತಿಯಾಗಲು ಸಾಧ್ಯವಿದೆ.

ಹೀಗಾಗಿ, ಸೂಕ್ಷ್ಮಪ್ರದೇಶಗಳನ್ನು ಗುರುತಿಸಿ ಸಂರಕ್ಷಿಸುವ ಈ ಕಾನೂನು ಪ್ರಕ್ರಿಯೆಯನ್ನು ಇಂದಿನ ಅಗತ್ಯವಾಗಿಯಷ್ಟೇ ಅಲ್ಲ, ಹೊಸ ಅವಕಾಶವಾಗಿಯೂ ನೋಡಬೇಕಾದ ಜರೂರತ್ತಿದೆ. ನಾಡಿನ ಭವಿಷ್ಯಕ್ಕಾಗಿ ನಾವು ನಿರ್ವಹಿಸಬೇಕಾದ ಕನಿಷ್ಠ ಜವಾಬ್ದಾರಿಯಿದು. ನಿಸರ್ಗ ರಕ್ಷಣೆಯ ಮೂಲಕವೇ ಆರ್ಥಿಕ ಅಭಿವೃದ್ಧಿಯನ್ನೂ ಸಾಧಿಸುವ ಈ ನೀತಿಯನ್ನು ಅನುಷ್ಠಾನಗೊಳಿಸಲು, ಜನಪ್ರತಿನಿಧಿಗಳು ಹಾಗೂ ರಾಜಕೀಯ ಮುಖಂಡರು ಒಪ್ಪಿ ಸಹಕರಿಸಬೇಕೆಂದು ಒತ್ತಾಯಿಸುತ್ತೇನೆ.

ಲೇಖಕ: ಅಧ್ಯಕ್ಷ, ವೃಕ್ಷ ಲಕ್ಷ ಆಂದೋಲನ, ಕರ್ನಾಟಕ



ಹೆದ್ದಾರಿ ಅಗಲಗೊಳಿಸಲು ಪಶ್ಚಿಮ ಘಟ್ಟ ವ್ಯಾಪ್ತಿಯಲ್ಲಿ ಅಸಂಖ್ಯ ಮರಗಳನ್ನು ಕಡಿಯಲಾಗಿದೆ ಸಂಗ್ರಹ ಚಿತ್ರ

'ಪರಿಸರವನ್ನು ಪರಿಸರದ ಪಾಡಿಗೆ ಬಿಡಿ'

ಪಶ್ಚಿಮ ಘಟ್ಟವನ್ನು ಪರಿಸರ ಸೂಕ್ಷ್ಮ ಪ್ರದೇಶ ಎಂದು ಘೋಷಿಸುವುದಕ್ಕೆ ಪಶ್ಚಿಮ ಘಟ್ಟದ ಜಿಲ್ಲೆಗಳ ಜನಪ್ರತಿನಿಧಿಗಳು ಪಕ್ಷಾತೀತವಾಗಿ ವಿರೋಧ ವ್ಯಕ್ತಪಡಿಸುತ್ತಿರುವುದನ್ನು ನೋಡಿ ಒಗ್ಗಟ್ಟಿನ ಮಂತ್ರವನ್ನು ಇವರಿಂದ ಕಲಿಯಬೇಕು ಎನಿಸಿದೆ. ಪರಿಸರ ಸಂರಕ್ಷಣೆಗೆ ಬೇಕಾದ ಅಗತ್ಯ ಕರಡನ್ನು ಜಾರಿಗೆ ತಂದರೆ ಇವರ ಗಂಟೇನು ಮುಳುಗಿ ಹೋಗುತ್ತದೆಯೋ ತಿಳಿಯದು. ಪಶ್ಚಿಮ ಘಟ್ಟಗಳ ಹಳ್ಳಿ ಜನರ ಕಾಳಜಿಯನ್ನು ಮುಂದಿಟ್ಟುಕೊಂಡು ತಮ್ಮ ಬೇಳೆ ಬೇಯಿಸಿಕೊಳ್ಳಲು ಯತ್ನಿಸುತ್ತಿರು-ವವರ ಬಗ್ಗೆ ಗಮನಹರಿಸದೇ ಪಶ್ಚಿಮ ಘಟ್ಟದ ಸಂರಕ್ಷಣೆಗೆ ಬೇಕಾದ ಅಗತ್ಯ ಕ್ರಮ ಕೈಗೊಳ್ಳುವುದೇ ಸೂಕ್ತ. ಕೇರಳದ ಮಾದರಿಯಂತೆ ಕರ್ನಾಟಕದಲ್ಲೂ ಆಯಾ ಪ್ರದೇಶದ ಜನರಿಗೆ ಅವರ ಮಾತೃ ಭಾಷೆಯಲ್ಲಿ ಕರಡುವಿನ ಪ್ರತಿ ಸಿಗುವಂತೆ ಮಾಡಿದರೆ ಅವರು ಈ ಕರಡು ಅಧಿಸೂಚನೆಯನ್ನು ಅರ್ಥ ಮಾಡಿಕೊಳ್ಳಬಹುದು. ಪರಿಸರಕ್ಕೆ ಯಾರ ದಯೆ, ದಾಕ್ಷಿಣ್ಯವೂ ಬೇಕಾಗಿಲ್ಲ. ಅದರ ಪಾಡಿಗೆ ಅದನ್ನು ಬಿಟ್ಟರೆ ಅಷ್ಟೇ ಸಾಕು.

ಈರಣ್ಣ ಎನ್ ವಿ, ನಾರಾಯಣಪುರ, ಸಿರಾ

'ಮೊದಲು ಅಕೇಶಿಯಾ, ನೀಲಗಿರಿ ನಿಷೇಧ ಮಾಡಿ'

ಈ ಭೂಮಿ ಮಾನವನ ಪಿತ್ರಾರ್ಜಿತ ಆಸ್ತಿಯಲ್ಲ, ಇತರ ಅಸಂಖ್ಯ ಜೀವಿಗಳಂತೆ ಮಾನವ ಕೂಡ ಒಂದು ಜೀವಿ ಅಷ್ಟೇ. ಜೀವಿಗಳ ಈ ಸಂಕೀರ್ಣ ಜಾಲವನ್ನು ಮಾನವ ನೇಯ್ದದ್ದಲ್ಲ. ಆತ ಈ ಜಾಲದ ಒಂದು ಎಳೆ ಅಷ್ಟೆ. ಈ ಜಾಲಕ್ಕೆ ಮಾನವ ಏನೇ ವಿಪತ್ತು ತಂದರೂ ಆತ ತನಗೆ ತಾನೇ ವಿಪತ್ತು ತಂದುಕೊಂಡಂತೆ.

ನೈಸರ್ಗಿಕ ಕಾಡು ಕಡಿದು ಸಾಗುವಾನಿ, ಅಕೇಶಿಯ, ನೀಲಗಿರಿ ನೆಡುತೋಪಾಗಿ ಮಾಡಿದ ಪರಿಣಾಮ ಇವತ್ತು ಮಲೆನಾಡಿನ ಉಷ್ಣತೆ ಹೆಚ್ಚಾಗಿದೆ. ನಮ್ಮ ಕಾಲದಲ್ಲೇ ಹೀಗೆ ಆಗಿರುವಾಗ ಭವಿಷ್ಯ ಹೇಗಿರಬಹುದು ಯೋಚಿಸಿ.

ಪಶ್ಚಿಮ ಘಟ್ಟ ಪ್ರದೇಶದ ಸ್ಥಳೀಯರಿಗೆ ಕರಡು ಅಧಿಸೂಚನೆ ಬಗ್ಗೆ ತಿಳಿವಳಿಕೆ ನೀಡಿ, ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಣ್ಣ ಕೃಷಿಕರಿಗೆ, ಸ್ಥಳೀಯರಿಗೆ ತೊಂದರೆ ಆಗುವಂತಹ ವಿಷಯಗಳಿದ್ದರೆ ಅದರ ಚರ್ಚೆ ಆಗಬೇಕಿತ್ತು. ದುರದೃಷ್ಟವೆಂದರೆ ಇದು ಯಾವುದನ್ನೂ ಮಾಡದ ಸರ್ಕಾರ, ಮಾಹಾನಗರಗಳಲ್ಲೇ ಕುಳಿತು ಕರಡು ಅಧಿಸೂಚನೆಯನ್ನು ಸಂಪೂರ್ಣವಾಗಿ ತಿರಸ್ಕರಿಸಿದೆ.

ವಿಜಯ್ ಆರ್. ಸೋಗೆದ್, ಕೆರೆಹಳ್ಳಿ,ಶಿವಮೊಗ್ಗ

'ಮನುಷ್ಯನ ಉಳಿವಿನ ಪ್ರಶ್ನೆ'

ಇದು ಪಶ್ಚಿಮ ಘಟ್ಟಗಳ, ಅಲ್ಲಿನ ಕಾಡು, ಪ್ರಾಣಿಪಕ್ಷಿಗಳ ಉಳಿವಿನ ಪ್ರಶ್ನೆಯಲ್ಲ ಬದಲಿಗೆ ಮನುಷ್ಯನ ಉಳಿವಿನ ಪ್ರಶ್ನೆ. ಯಾರದೋ ಬೊಕ್ಕಸ ತುಂಬಲು ನಾವು ಕುಳಿತಿರುವ ರೆಂಬೆಯ ಬುಡವನ್ನೇ ಕತ್ತರಿಸುತ್ತಾ ಅಳಿವಿನಂಚನ್ನು ತಲಪುತ್ತಿದ್ದೇವೆ. ದೂರದಲ್ಲೆಲ್ಲೊ ಕುಳಿತ ಗಣಿ ಉದ್ಯಮಿಗಳು ಮತ್ತು ರಾಜಕಾರಣಿಗಳ ತೀರದ ಹಣದಾಹವನ್ನು ಇಂಗಿಸಲು ಘಟ್ಟದ ಜನ, ಜೀವಿಗಳು ಕುಸಿದ ಗುಡ್ಡಗಳಡಿ ನಲುಗುವುದು ನಿಲ್ಲಲಿ. ಜನರ ಮನಸ್ಸಿನಲ್ಲಿ ಹುಟ್ಟಿಸಿರುವ ಸುಳ್ಳು ಭಯಗಳನ್ನು ಹೋಗಲಾಡಿಸಿ. ಈ ಜೀವರಕ್ಷಕ ಕವಚವನ್ನು ಉಳಿಸಿಕೊಳ್ಳಲೇಬೇಕು. ಇಲ್ಲವಾದಲ್ಲಿ ಮನುಷ್ಯನಿಗೆ ಉಳಿಗಾಲವಿಲ್ಲ.

ಬಿ. ವಿ.ಶ್ಯಾಮಲ, ಮೈಸೂರು

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 193

ಜ್ಞಾನಮಾರ್ಗಕ್ಕೆ ಒಲಿಯುವ ಶಿವ

ಕ್ಷಮೆ ಬೇಡಿದ ದಕ್ಷಬ್ರಹ್ಮನಿಗೆ 'ನಾನು ಸದಾ ಭಕ್ತರ ಅಧೀನನು. ನಾಲ್ಕು ವಿಧದ ಪುಣ್ಯಶಾಲಿಗಳು ನನ್ನನ್ನು ಭಜಿಸುವರು. ದುಃಖಪೀಡಿತನು ಮೊದಲನೆಯವರು, ಜ್ಞಾನವನ್ನು ಪಡೆಯಲಿಚ್ಛೆಯುಳ್ಳವನು ಎರಡನೆಯವನು. ಮೂರನೆಯವನು ಧನವನ್ನಪೇಕ್ಷಿಸುವನು. ಜ್ಞಾನಿಯು ನಾಲ್ಕನೆಯವನು. ಇದರಲ್ಲಿ ಮೊದಲಿನ ಮೂವರು ಸಾಮಾನ್ಯರು. ಅಂದರೆ, ಮೊದಲನೆಯವನಿಗಿಂತ ಎರಡನೆಯವನೂ, ಎರಡನೆಯವನಿಗಿಂತ ಮೂರನೆಯವನು ಶ್ರೇಷ್ಠ. ನಾಲ್ಕನೆಯವನಾದ ಜ್ಞಾನಿಯು ಎಲ್ಲರಿಗಿಂತಲೂ ಶ್ರೇಷ್ಠ. ಆ ಜ್ಞಾನಿಯು ನನಗೆ ತುಂಬಾ ಪ್ರಿಯನು. ನನ್ನ ಸ್ವರೂಪವೇ ಅವನಾಗಿರುವನು. ವೇದಾಂತವನ್ನು ಬಲ್ಲ ಆತ್ಮಜ್ಞರು ನನ್ನನ್ನು ಜ್ಞಾನದಿಂದ ತಿಳಿಯಬಲ್ಲರು. ಜ್ಞಾನವಿಲ್ಲದೇ ನನ್ನನ್ನು ಪಡೆಯಲು ಮೂಢರು ಯತ್ನಿಸುವರು. ಆದರೆ ಅದು ಸಿದ್ಧಿಸುವುದಿಲ್ಲ. ಜ್ಞಾನಮಾರ್ಗವನ್ನು ಬಿಟ್ಟು ವೇದಗಳು, ಯಜ್ಞಗಳು, ದಾನಗಳು, ತಪಸ್ಸು ಮುಂತಾದವುಗಳಿಂದ ನನ್ನನ್ನು ಪಡೆಯಲು ಅಸಾಧ್ಯ. ದಕ್ಷನೆ ನೀನು, ಕೇವಲ ಕರ್ಮದಿಂದ ಸಂಸಾರವನ್ನು ದಾಟಲು ಪ್ರಯತ್ನಪಟ್ಟೆ. ಆದಕಾರಣ ನಿನ್ನ ಯಜ್ಞವನ್ನು ನಾಶ ಮಾಡಿದೆ.

'ನಾನು ಬ್ರಹ್ಮನೂ ಹರಿಯೂ ಜಗತ್ತಿಗೆ ಕಾರಣರು. ವಸ್ತುತಃ ಬ್ರಹ್ಮ ವಿಷ್ಣು ಮಹೇಶ್ವರರು ಒಂದೇ ಆತ್ಮಸ್ವರೂಪರು. ಭೇದವಿಲ್ಲದ ಆ ಆತ್ಮವಸ್ತುವಿನಲ್ಲಿ ಭಿನ್ನವೆಣಿಸಬೇಡ. ಹೀಗಿದ್ದರೂ ಮೂಢರು ವಿಷ್ಣು ಬೇರೆ, ಬ್ರಹ್ಮ ಬೇರೆ, ಈಶ್ವರ ಬೇರೆ ಎಂದು ಇಲ್ಲದ ಭೇದವನ್ನೆಣಿಸುವರು.

ಶಿರಸ್ಸು, ಕೈ ಮೊದಲಾದ ಅಂಗಗಳು ತನ್ನ ಶರೀರದಿಂದ ಬೇರೆಯಲ್ಲ ಎಂದು ಹೇಗೆ ತಿಳಿಯುವರೋ, ಅದರಂತೆ ಸರ್ವಾತ್ಮರಾದ ತ್ರಿಮೂರ್ತಿಗಳಿಗೆ ಪರಸ್ಪರ ಭೇದವನ್ನು ಕಲ್ಪಿಸಬಾರದು. ಹಾಗೆ ಭೇದವನ್ನ ಎಣಿಸಿದವನು ಅಶಾಂತಿಯನ್ನು ಹೊಂದುವನು. ನನ್ನ ಭಕ್ತನು ಎಲ್ಲ ದೇವತೆಗಳನ್ನೂ ಪೂಜಿಸಬೇಕು. ಬ್ರಹ್ಮನಲ್ಲಿ ಭಕ್ತಿಯಿಲ್ಲದೆ ಹರಿಯಲ್ಲಿ ಭಕ್ತಿಯು ಉದಯಿಸಲಾರದು. ಹರಿಭಕ್ತಿಯಿಲ್ಲದೆ ನನ್ನಲ್ಲಿ ಭಕ್ತಿಯು ಹುಟ್ಟಲಾರದು. ಹರಿಭಕ್ತನಾಗಲೀ ಶಿವಭಕ್ತನಾಗಲೀ ಯಾರನ್ನು ಯಾರು ನಿಂದಿಸಿದರೂ ಘನಘೋರ ಪಾಪ ತಟ್ಟುವುದು. ಅವರಿಗೆ ಎಂದೆಂದಿಗೂ ಮುಕ್ತಿ ಇರುವುದಿಲ್ಲ' ಎಂದ ಪರಮೇಶ್ವರ.

ನಂತರ ಶಿವನ ಅಪ್ಪಣೆಯಂತೆ ದಕ್ಷನು ಯಜ್ಞವನ್ನು ಸಂಪೂರ್ಣಗೊಳಿಸಿದ. ದೇವತೆಗಳಿಗೆ ಹವಿರ್ಭಾಗವನ್ನು ಯೋಗ್ಯವಾಗಿ ಕೊಟ್ಟ. ಶಿವನಿಗೆ ಸಂಪೂರ್ಣವಾದ ಭಾಗವನ್ನು ಕೊಟ್ಟ. ಸತೀದೇವಿಯನ್ನು ನೆನೆದು ಶಿವ ಚಿಂತಿಸಿದ. ತನ್ನ ಪ್ರಧಾನ ಗಣಗಳೆದುರಿಗೆ ಅವಳ ಪ್ರಿಯವಾದ ಕಥೆಗಳನ್ನು ಹೇಳಿದ. ಹೀಗೆ ಶಿವನು ಲೋಕಗತಿಯನ್ನಾಶ್ರಯಿಸಿ ಸತಿಯಲ್ಲಿ ಅನುರಾಗವನ್ನು ಪ್ರಕಟಿಸುತ್ತಾ ಅವಳ ಚರಿತ್ರವನ್ನು ಹೇಳುತ್ತಾ ಬಹಳ ಕಾಲವನ್ನು ಕಳೆದ.

ಶಿವನಿಗೆ ವಿರಹ, ಮೋಹ, ಯಾವ ವಿಕಾರವೂ ಇಲ್ಲ. ಆದರೂ ಅವನು ಮಾಯೆಯಿಂದ ಲೋಕಗತಿಯನ್ನನುಸರಿಸಿ ವಿಕಾರಗಳನ್ನು ಪ್ರದರ್ಶಿಸುವವನು. ಅವನ ಸ್ವರೂಪವನ್ನು ಬ್ರಹ್ಮ-ವಿಷ್ಣು ಸಹ ತಿಳಿಯಲಾರರು. ಆದರೆ ಶಿವಭಕ್ತರು ಶಿವನ ಅನುಗ್ರಹದಿಂದ ಶಿವಮಹಿಮೆಯನ್ನು ತಿಳಿಯಬಲ್ಲರು.

ಸತೀದೇವಿಯು ದಕ್ಷಯಜ್ಞದಲ್ಲಿ ಶರೀರವನ್ನು ತ್ಯಜಿಸಿ, ಮತ್ತೆ ಹಿಮವಂತನ ಪತ್ನಿಯಾದ ಮೇನಕಾ ದೇವಿಯಲ್ಲಿ ಜನಿಸಿದಳು. ಆ ಪಾರ್ವತಿಯು ತಪಸ್ಸನ್ನು ಮಾಡಿ ಶಿವನ ಪತ್ನಿಯಾದಳು. ಶಿವನ ಅನುಗ್ರಹದಿಂದ ಗೌರಿಯಾಗಿ ಅವನ ಅರ್ಧದೇಹವನ್ನಾಕ್ರಮಿಸಿ ಅದ್ಭುತವಾದ ಅನೇಕ ಲೀಲೆಗಳನ್ನು ಪ್ರದರ್ಶಿಸಿದಳು.

'ಎಲೈ ನಾರದ, ನಿನಗೆ ಅತ್ಯದ್ಭುತವಾದ ಸತೀಚರಿತ್ರವನ್ನು ಹೇಳಿರುವೆ. ಇದನ್ನು ಭಕ್ತಿಯಿಂದ ಓದಿದರೆ, ಕೇಳಿದರೆ, ಇತರರಿಗೆ ಹೇಳಿದರೆ ಮುಕ್ತಿಯನ್ನು ಪಡೆಯಬಹುದು' ಎಂದು ಬ್ರಹ್ಮ ಹೇಳುತ್ತಾನೆ. ಇಲ್ಲಿಗೆ ಶಿವಪುರಾಣದ ಸತೀಖಂಡ ಸಮಾಪ್ತವಾಯಿತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256


ಬುರ್ಖಾಧಾರಿಯೊಬ್ಬರು ಮಗುವೊಂದನ್ನು ಬುರ್ಖಾದೊಳಗೆ ಬಚ್ಚಿಟ್ಟುಕೊಂಡು ಓಡಿ ಹೋಗುತ್ತಿರುವ ಮತ್ತು ವ್ಯಕ್ತಿಯೊಬ್ಬರು ಕಾರಿನಲ್ಲಿ ಅವರನ್ನು ಹಿಂಬಾಲಿಸುತ್ತಿರುವ ದೃಶ್ಯವಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಕಾರಿನಲ್ಲಿದ್ದ ವ್ಯಕ್ತಿ ಮತ್ತು ಇನ್ನೊಬ್ಬ ಮಹಿಳೆಯು, ಬುರ್ಖಾಧಾರಿಯನ್ನು ಹಿಡಿಯುತ್ತಾರೆ. ಆಗ ಬುರ್ಖಾ ಧರಿಸಿದ್ದದ್ದು ಪುರುಷ ಎಂಬುದು ಗೊತ್ತಾಗುತ್ತದೆ. 'ಈ ಘಟನೆ ಮಧ್ಯಪ್ರದೇಶದಲ್ಲಿ ನಡೆದಿದೆ. ಬುರ್ಖಾಧಾರಿಗಳು ಮಕ್ಕಳ ಕಳ್ಳರು. ಹೀಗಾಗಿ ಅವರ ಬಗ್ಗೆ ಎಚ್ಚರದಿಂದ ಇರಿ' ಎಂಬ ಸಂದೇಶವನ್ನು ವಿಡಿಯೊ ಜತೆಗೆ ಹಂಚಿಕೊಳ್ಳಲಾಗಿದೆ. ಕೆಲವರು ಬುರ್ಖಾವನ್ನು ನಿಷೇಧ ಮಾಡಿ ಎಂದು ಆಗ್ರಹಿಸಿದ್ದಾರೆ.



ಇದು ಸುಳ್ಳು ಸುದ್ದಿ ಎಂದು 'ದಿ ಲಾಜಿಕಲ್ ಇಂಡಿಯನ್' ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. 'ಇದು ಕಿರುಚಿತ್ರವೊಂದರ ಭಾಗ. ಸೋನು ಚೌಧರಿ ಫಿಲ್ಮ್ಸ್ ಎಂಬ ಸಂಸ್ಥೆಯು ಈ ಕಿರುಚಿತ್ರವನ್ನು ನಿರ್ಮಿಸಿದೆ. ಇದು ಮನರಂಜನೆಯ ಉದ್ದೇಶಕ್ಕಾಗಿ ನಿರ್ಮಿಸಿದ ಕಿರುಚಿತ್ರ ಎಂದು ಅದರಲ್ಲೇ ಹೇಳಲಾಗಿದೆ. ಈ ಕಿರುಚಿತ್ರವನ್ನು ತಿರುಚಿ, ಬುರ್ಖಾವನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ಆರೋಪಿಸಲಾಗಿದೆ. ಇದನ್ನು ಒಂದು ಕೋಮಿನ ಬಗ್ಗೆ ತಪ್ಪು ಕಲ್ಪನೆ ಬರುವಂತೆ ಬಳಸಿಕೊಳ್ಳಲಾಗಿದೆ' ಎಂದು ದಿ ಲಾಜಿಕಲ್ ಇಂಡಿಯನ್ ತನ್ನ ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಿದೆ.

ಚಿತ್ರಕೃಪೆ: ಟ್ವಿಟರ್, ದಿ ಲಾಜಿಕಲ್ ಇಂಡಿಯನ್

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ದರ್ಶನದಿಂದ ಅದ್ಭುತ

ಅತ್ಯಂತದುತ್ಕಟದ ಸನ್ನಿವೇಶಗಳ ಭರ |
ಪ್ರತ್ಯಕ್ಷ ದರ್ಶನದಿನಲ್ಲದೆಂತಹುದು? ||
ಪುಸ್ತಕದ ಚಿತ್ರದಿಂದೂಹಿಪೆಯ ಹಿಮಗಿರಿಯ |
ವಿಸ್ತಾರದದ್ಭುತವ ?- ಮಂಕುತಿಮ್ಮ || 687 ||

ಪದ-ಅರ್ಥ: ಅತ್ಯಂತದುತ್ಕಟದ = ಅತ್ಯಂತ-ದ + ಉತ್ಕಟದ, ಭರ = ಭಾವ, ಪ್ರತ್ಯಕ್ಷದರ್ಶ-ನದಿನಲ್ಲದೆಂತಹುದು = ಪ್ರತ್ಯಕ್ಷ + ದರ್ಶನದಿ + ಅಲ್ಲದೆ + ಎಂತಹುದು, ಚಿತ್ರದಿಂದೂಹಿಪೆಯ = ಚಿ-ತ್ರದಿಂದ + ಊಹಿಪೆಯ(ಊಹಿಸುವೆಯಾ), ವಿಸ್ತಾರದದ್ಭುತವ = ವಿಸ್ತಾರದ + ಅದ್ಭುತವ

ವಾಚ್ಯಾರ್ಥ: ಪ್ರತ್ಯಕ್ಷ ದರ್ಶನವಿಲ್ಲದೆ ಅತ್ಯಂತ ಉತ್ಕಟವಾದ ಸನ್ನಿವೇಶಗಳ ಭಾವ ದೊರೆತೀತು ಹೇಗೆ? ಪುಸ್ತಕದಲ್ಲಿ ದೊರೆತ ಹಿಮಾಲಯದ ಚಿತ್ರವನ್ನು ನೋಡಿ ಅದರ ಅಗಾಧ ವಿಸ್ತಾರ ಮತ್ತು ಅದ್ಭುತವನ್ನು ಊಹಿಸಲು ಸಾಧ್ಯವೆ?

ವಿವರಣೆ: ಇಂದ್ರಿಯಗಳ ಅನುಭವ ಮತ್ತು ಅರ್ಥ ಇವುಗಳ ಸಂಯೋಗದಿಂದ ಆದ ಜ್ಞಾನವೇ ಪ್ರತ್ಯ-ಕ್ಷಜ್ಞಾನ ಎಂದು ಭಾರತೀಯ ತತ್ವಶಾಸ್ತ್ರ ಪರಿಣಿತರು ಅಭಿಪ್ರಾಯ ಪಡುತ್ತಾರೆ (ಇಂದ್ರಿಯಾರ್ಥ ಸಂನಿಕರ್ಷಜನ್ಯ ಜ್ಞಾನಂ ಪ್ರತ್ಯಕ್ಷಂ). ಇಂದ್ರಿಯಗಳಿಗೆ ತೋರದ ಜ್ಞಾನ ಕೇವಲ ಭ್ರಾಂತಿ, ಕಲ್ಪನೆ. ಇಂದ್ರಿಯಗಳ ಅನುಭವಕ್ಕೆ ಬಂದರೂ ಅರ್ಥವಾಗದಿದ್ದರೆ ಅದು ವಿಪರೀತ ಜ್ಞಾನ. ಹೀಗೆ ಸನ್ನಿವೇಶವೊಂದು ನಮಗೆ ಪ್ರತ್ಯಕ್ಷ ಜ್ಞಾನವಾಗುವುದ-ಕ್ಕೆ ದರ್ಶನದ ಅವಶ್ಯಕತೆ ಇದೆ. ಮೊನ್ನೆ ಪತ್ರಿಕೆಯೊಂ-ದರಲ್ಲಿ ಘಟನೆಯೊಂದು ವರದಿಯಾಗಿತ್ತು. ರಶಿಯಾದ ಸೈನ್ಯದೊಡನೆ ಹೋರಾಡುವಾಗ ಯುಕ್ರೇನ್‌ನ ಸೈನಿಕನೊಬ್ಬ ಸತ್ತನೆಂದು ಸೈನ್ಯಾಧಿಕಾರಿಗಳು ಅವನ ಮನೆಗೆ ಸುದ್ದಿ ಮುಟ್ಟಿಸಿದ್ದರು. ಮನೆಯಲ್ಲಿ ಪರಿವಾರದ ದುಃಖ ಹೇಳತೀರದು. ಸೈನಿಕನ ತಾಯಿಯಂತೂ ಪ್ರಜ್ಞೆ ಕಳೆದುಕೊಂಡರು. ಸೈನಿಕನ ದೇಹ ಮನೆಗೆ ಬರುತ್ತದೆಂದು ಕಾಯುತ್ತಿರುವಾಗ ನಡೆದದ್ದು ಆಶ್ಚರ್ಯ! ಸತ್ತನೆಂದು ವರದಿಯಾಗಿದ್ದ ಸೈನಿಕನೇ ಮನೆಗೆ ಬಂದ! ಗುರುತಿಸುವುದರಲ್ಲಿ ತಪ್ಪಾಗಿತ್ತು. ಅವನ ತಾಯಿಗೆ ಎಷ್ಟು ಸಂತೋಷವಾಗಿರಬೇಡ? ಆಕೆ ಓಡಿ ಬಂದು ಅವನನ್ನು ತಬ್ಬಿಕೊಂಡು ಸಂತೋಷದ ಅತಿರೇಕದಲ್ಲಿ ಬಿಕ್ಕಿ ಬಿಕ್ಕಿ ಅತ್ತದ್ದರ ಬಗ್ಗೆ ಲೇಖನ ವಿವರ ನೀಡಿತ್ತು. ಅದನ್ನು ಓದಿದ ನಮಗೆ ಕಣ್ಣುಹನಿಯಾದರೂ, ಆ ತಾಯಿಯ ಅನುಭವದ, ಉತ್ಕಟತೆಯ,ಭಾವಪೂರದ ಒಂದಂಶವೂ ನಮ್ಮನ್ನು ತಟ್ಟಲಾರದು. ಅದು ಪ್ರತ್ಯಕ್ಷ ದರ್ಶನದ ಫಲ. ಪತ್ರಿಕೆಯಲ್ಲಿ ನಾವು ಓದಿದ್ದು ಆಕೆಯ ಅನುಭವದ ಕೇವಲ ಒಂದು ಚೂರು ಮಾತ್ರ. ತಾಯಿಗೆ ಆದದ್ದು ಪ್ರತ್ಯಕ್ಷ ದರ್ಶನ, ನಮಗೆ ದೊರೆತದ್ದು ಸನ್ನಿವೇಶದ ಊಹೆ. ಕಲ್ಪನೆಗೂ, ಪ್ರತ್ಯ-ಕ್ಷಾನುಭವಕ್ಕೂ ಅಜಗಜಾಂತರ ವ್ಯತ್ಯಾಸ.

ಅರ್ಜುನ ಶ್ರೀಕೃಷ್ಣನನ್ನು ಸ್ನೇಹಿತನೆಂದು ಕಂಡವನು. ಅವನ ಜೊತೆಗೆ ಆಮೋದ, ವಿನೋದಗಳಲ್ಲಿ ದಿನ ಕಳೆದವನು. ಆದರೆ ಯುದ್ಧಭೂಮಿ-ಯಲ್ಲಿ ಆತನ ವಿಶ್ವರೂಪವನ್ನು ಕಂಡಾಗ ನಡುಗಿ ಹೋದ, ಭಯದಿಂದ ಬೆವರಿದ. ಇವನೇನಾ ತಾನು ಸ್ನೇಹಿತನೆಂದು ಭಾವಿಸಿದ ವ್ಯಕ್ತಿ ಎಂದು ಕಂಗಾಲಾದ. ತನ್ನ ಊಹೆಗೂ ಮೀರಿದ ವ್ಯಕ್ತಿತ್ವವನ್ನು ಪ್ರತ್ಯಕ್ಷದರ್ಶನದಿಂದ ಅನುಭವಿಸಿದ್ದ. ಅದಕ್ಕೇ ಕಗ್ಗ ಕೇಳುತ್ತದೆ, ಪುಸ್ತಕದಲ್ಲಿಯ ಹಿಮಾಲಯದ ಚಿತ್ರವನ್ನು ನೋಡುವುದು ಹಿಮಾಲಯದ ಪ್ರತ್ಯಕ್ಷ ದರ್ಶನವೆ? ಆ ಪರ್ವತದ ವಿಸ್ತಾರ, ಅದ್ಭುತದ ಅನುಭವ ಚಿತ್ರದಿಂದ ದೊರಕೀತೇ? ದರ್ಶನದಿಂದ ಮಾತ್ರ ಅನುಭವ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಆಗಸ್ಟ್ 8, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯಣ– ವರ್ಷ ಋತು ತಿಥಿ: (ಶ್ರಾವಣ ಶುಕ್ಲ) ಏಕಾದಶಿ ಗಂ. 21-01 ನಕ್ಷತ್ರ: ಜ್ಯೇಷ್ಠ ಗಂ. 14-37 ಯೋಗ: ಐಂದ್ರ ಗಂ. 06-55, ಕರಣ: ವಣಿಜ ಗಂ. 10-30 ಕರ್ಕಾಟಕ ಮಾಸದ 22 ನೇ ದಿನ. ರಾಹುಕಾಲ : ಬೆಳಿಗ್ಗೆ 07:30– 09:00, ಸೂರ್ಯೋದಯ : 06-21 ಸೂರ್ಯಾಸ್ತ : 06-52
ಮುಸ್ಲಿಂ ದಿನಾಂಕ : 09 ಮೊಹರಮ್
ದಿನ ವಿಶೇಷ : ಝುಲಾನಾ ಯಾತ್ರಾರಂಭ, ಪವಿತ್ರ ಏಕಾದಶಿ
ಅದೃಷ್ಟ ಸಂಖ್ಯೆ : 4, 5

ಮೇಷ: ಅಕ್ಕ, ತಂಗಿಯ ಮನೆಯಲ್ಲಿ ನಡೆಯುವ ಶುಭ ಕಾರ್ಯಗಳಿಗೆ ಹೆಚ್ಚಿನ ಹೊಣೆಗಾರಿಕೆಯನ್ನು ಹೊರಲು ನೀವು ಸಿದ್ಧರಾಗಬೇಕಾಗುತ್ತದೆ. ತೆರಿಗೆಗೆ ಸಂಬಂಧದ ಕೆಲಸಗಳೆಲ್ಲವೂ ಪೂರ್ಣಗೊಳಿಸಲು ಪ್ರಯತ್ನಿಸಿ.

ವೃಷಭ: ಹಿಂದೆ ಕೈಗೊಂಡ ನಿರ್ಧಾರಗಳಲ್ಲಿ ಕೆಲ ಬದಲಾವಣೆಗಳನ್ನು ಮಾಡಿಕೊಂಡರೆ ನಷ್ಟದ ಪ್ರಮಾಣ ಕಡಿಮೆಯಾಗುವುದು ಹಾಗೆಯೇ ದೇಹಾಯಾಸ ಕಡಿಮೆಯಾಗುವುದು.

ಮಿಥುನ: ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕಾಗಿ ಹೆಚ್ಚಿನ ಖರ್ಚು ಉಂಟಾಗುವುದು. ಆಶಾದಾಯಕ ಬೆಳವಣಿಗೆಯು ಗೋಚರಕ್ಕೆ ಬರಲಿದೆ. ಕುಟುಂಬ ಸದಸ್ಯರಲ್ಲಿ ಅದರಲ್ಲೂ ಹೆಚ್ಚಾಗಿ ಮಕ್ಕಳಲ್ಲಿ ಆರೋಗ್ಯ ಬಗೆಗಿನ ಚಿಂತೆ ತಪ್ಪಿದ್ದಲ್ಲ.

ಕರ್ಕಾಟಕ: ಹೊಸ ಯೋಜನೆಗಿಂತ ಲಭ್ಯವಿರುವ ಅವಕಾಶಗಳ ಬಗ್ಗೆ ಯೋಚಿಸುವುದು ಉತ್ತಮ. ಸ್ವ ಉದ್ಯೋಗಿಗಳಿಗೆ ವರಮಾನದಲ್ಲಿ ಉತ್ತಮ ಸುಧಾರಣೆಯು ಕಂಡುಬರುವುದು.

ಸಿಂಹ: ಮನೆಯಲ್ಲಿ ಸುಖ-ಶಾಂತಿ ಸಮೃದ್ಧಿಯಾಗಿದ್ದರೂ ಮನದಲ್ಲಿ ಭಯದ ಭೀತಿ ತೋರಿಬಂದೀತು. ಗೃಹೋಪಕರಣಗಳ ಖರೀದಿ ನಡೆಸುವಿರಿ. ಮನೆಯಲ್ಲಿ ದೇವತಾಕಾರ್ಯ ಕೈಗೊಳ್ಳುವ ಬಗ್ಗೆ ಹಿರಿಯರಲ್ಲಿ ವಿನಂತಿಸಿ.

ಕನ್ಯಾ: ಕುಟುಂಬದಲ್ಲಿ ಸೌಹಾರ್ದ ವಾತಾವರಣ ಇರುವುದು. ಆರ್ಥಿಕವಾಗಿ ಸಾಲ ತೀರಿ ನೆಮ್ಮದಿಯಿಂದಾಗಿ ಸಂತೋಷವಾಗಿ ಕಾಲಕಳೆಯುವಂತಾಗುವುದು. ವಿದ್ಯಾಭ್ಯಾಸದಲ್ಲಿ ಮಕ್ಕಳ ಅಸಡ್ಡೆಯು ವಿದ್ಯಾಪ್ರಗತಿಗೆ ಮಾರಕವಾಗಲಿದೆ.

ತುಲಾ: ಕೋರ್ಟು ಕಚೇರಿ ವ್ಯವಹಾರದಲ್ಲಿ ಜಯ ಪಡೆಯುವ ಬಗ್ಗೆ ಪ್ರಯತ್ನವಿರಲಿ. ನಿಮ್ಮಿಷ್ಟದಂತೆ ನೌಕರಿಯಲ್ಲಿ ಬಡ್ತಿ ಸಂಭವವಿದೆ. ಹುಟ್ಟೂರಿನಲ್ಲಿ ಆಸ್ತಿ ಖರೀದಿ ಮಾಡುವ ವಿಚಾರದ ಬಗ್ಗೆ ಮನೆಯವರಲ್ಲಿ ಪ್ರಸ್ತಾಪಿಸಿ.

ವೃಶ್ಚಿಕ: ಕೃಷಿ ಉತ್ಪನ್ನಗಳ ಕ್ರಯ ವಿಕ್ರಯಗಳಿಗೆ ಇದು ಉತ್ತಮ ಕಾಲ ಹಾಗು ಅದರಿಂದ ಹೆಚ್ಚಿನ ಆದಾಯವಿರುವುದರಿಂದ ಮನಸ್ಸಿಗೆ ಸ್ವಲ ನೆಮ್ಮದಿ ತೋರುವುದು. ಸಾಕು ಪ್ರಾಣಿಗಳ ಆರೋಗ್ಯ ತಪಾಸಣೆ ಅನಿವಾರ್ಯ.

ಧನು: ಸಹೋದರರೊಡನೆ ಅಥವಾ ದಾಯಾದಿಗಳೊಡನೆ ಇದ್ದ ಕಲಹಗಳು ಅಥವಾ ಭಿನ್ನಾಭಿಪ್ರಾಯಗಳು ಇತ್ಯರ್ಥವಾಗಬಹುದು. ಆದರೆ ತಂದೆಯ ಮನ್ನಸ್ಸಿಗೆ ನೋವಾಗುವ ಸಂಗತಿ ನಿಮ್ಮಿಂದ ನಡೆಯಲಿದೆ.

ಮಕರ: ಐಷಾರಾಮಿ ಗೃಹೋಪಕರಣಗಳ ಖರೀದಿ ಹಾಗೂ ಕೆಲವಾರು ಯೋಜನೆಗಳಿಂದ ಎಡವಿದ ಅನುಭವ ನಿಮಗಾಗಲಿದೆ. ದಾಂಪತ್ಯದಲ್ಲಿ ಸಂಶಯದ ವಾತಾವರಣ ತಂದುಕೊಳ್ಳಬೇಡಿ.

ಕುಂಭ: ಆಕಸ್ಮಿಕ ಧನ ಯೋಗ ಸಂತೋಷ ತರಲಿದೆ. ಆಹಾರ ಪದ್ಧತಿಯ ಬದಲಾವಣೆಯಿಂದಾಗಿ ಆಸ್ಪತ್ರೆ ಅಲೆದಾಟಗಳು ಕೊನೆಗೊಳ್ಳುವುದು. ಈಶ್ವರನಿಗೆ ರುದ್ರಾಭಿಷೇಕ ಮಾಡಿಸುವುದರಿಂದ ಕಷ್ಟಗಳು ದೂರವಾಗುತ್ತದೆ.


ಮೀನ: ನೂತನ ಕಾರ್ಯ ಅಥವಾ ಗೃಹ ನಿರ್ಮಾಣದಂತಹ ಕೆಲಸಗಳಿಗಾಗಿ ಹೆಚ್ಚು ಸಮಯ ವಿನಿಯೋಗಿಸುವಿರಿ. ಕ್ರೀಡಾಪಟುಗಳಿಗೆ ಸಂತಸಕರ ಸುದ್ದಿ ಇದೆ. ಎಲ್ಲ ಕೆಲಸಗಳಲ್ಲೂ ಧೈರ್ಯದಿಂದಿದ್ದರೆ ಮುನ್ನಡೆಯನ್ನು ಸಾಧಿಸುವಿರಿ.

ಪದಬಂಧ 5043

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಹಂಬಲವನ್ನು ಹೀಗೆ ಹೇಳಿ (4)
3. ಪೀಠಿಕೆಯನ್ನು ಈ ರೀತಿಯೂ ಹೇಳುವರು (4)
5. ಕೆಲಸದವರು ಬರುವ ಹಾದಿಯಲ್ಲಿರುವ ರಾಡಿ (3)
7. ಬಿಮ್ಮಾನ ತೋರಿದಾತನ ದುಃಖ (3)
9. ಹೊಟ್ಟೆಕಿಚ್ಚು ಹೀಗೆ ಬಂದಿದೆ (3)
10. ಬಾಣವನ್ನು ಹಿಡಿದಿರುವ ಶೈವ ಭಕ್ತ (3)
11. ವಾಲಿಯ ಮಗನಿವನು (3)
15. ಕೋಲನ್ನು ಹಿಡಿದುದಕ್ಕೇ ಈ ಗದ್ದಲ! (4)
16. ಕಾರನ್ನು ಏರಿದವನು ನಡೆಸಿದ ಆಡಳಿತ (4)

ಮೇಲಿಂದ ಕೆಳಕ್ಕೆ
1. ದೇವರಿಗೆ ಸಲ್ಲಿಸುವ ಮುಡಿಪು (3)
2. ತಗಡಿನಿಂದ ಮಾಡಿರುವ ಮುಚ್ಚುಳವುಳ್ಳ ಕರಡಿಗೆ (2)
3. ವಾರದ ಕೊನೆಗೆ ಬಂದ ಅಭ್ಯರ್ಥಿ (5)
4. ಆಯವ್ಯಯಮೊದಲಾದ ವಿಷಯಗಳ ವಿವರಗಳ ಪಟ್ಟಿ (2)
6. ಒಳ್ಳೆಯ ಅವಕಾಶವಿದು (5)
8. ಈತ ಬಿಳಿಯ ಕೂದಲುಳ್ಳವನು (5)
9. ಸಾಯುವ ಸಮಯವಿದು (5)
12. ಒಡ್ಡೋಲಗದಲ್ಲಿ ಅಧಿಕಾರ ನಡೆಸುವಿಕೆ (3)
13. ಮಂಗವಿಲ್ಲಿ ತಿರುಗಿ ನಿಂತಿದೆಯಲ್ಲಾ? (2)
14. ಉತ್ತರದ ಕಡೆಯ ಚಿಕ್ಕಪ್ಪ (2)



5042ರ ಪದಬಂಧದ ಉತ್ತರ

ಎಡದಿಂದ ಬಲಕ್ಕೆ
1.ವಿಯೋಗ 3.ಪಂಜರ 6.ರಿವಾಜು 7.ಸಿಬ್ಬಂದಿ 8.ನಲುಮೆ 9.ಚಿಂತೆ 10.ಬಸದಿ 12.ತೀರ 13.ವಿನಂತಿ 14.ಓಲಗ 15.ನಗರ 17.ತಗರಿ 18.ಸನ್ನಾಹ

ಮೇಲಿಂದ ಕೆಳಕ್ಕೆ
1.ವಿಧಾನಸೌಧ 2.ಗರಿಮೆ 3.ಪಂಜು 4.ರಸಿಕತೆ 5.ಹಂದಿ 9.ಚಿಂದಿ 10.ಬರ 11.ವಿಶ್ರಾಂತಿಗೃಹ 12.ತೀವ್ರಗತಿ 13.ವಿರಸ, 14 ಓಲೆ, 15 ನರಿ (14 ಮತ್ತು 15ರ ಸುಳುಹು ಅದಲುಬದಲಾಗಿದೆ)

ಸುಡೊಕು 5429

	7			9			6	
1		9	6	4				
	6		5		2		9	
9		2				3		6
	4			5			7	
8		7	2		4	1		9
7			4		5		2	
				2		7		4
		4	1		9		3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5428 ಸುಡೊಕು

6	4	2	9	5	7	1	8	3
8	9	5	1	3	6	2	4	7
7	1	3	2	8	4	6	5	9
3	2	6	5	4	9	7	1	8
9	8	7	6	1	2	4	3	5
1	5	4	3	7	8	9	6	2
5	7	9	8	6	1	3	2	4
2	6	8	4	9	3	5	7	1
4	3	1	7	2	5	8	9	6

ಮದನಿ ವಿಚಾರಣೆಗೆ ‘ಸುಪ್ರೀಂ’ ತಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನಲ್ಲಿ 2008ರಲ್ಲಿ ನಡೆದಿದ್ದ ಸರಣಿ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಅಬ್ದುಲ್ ನಜೀರ್ ಮದನಿ ಹಾಗೂ ಇತರ 20 ಆರೋಪಿಗಳ ವಿಚಾರಣೆಗೆ ತಡೆ ನೀಡಿ ಸುಪ್ರೀಂ ಕೋರ್ಟ್ ಆದೇಶ ಹೊರಡಿಸಿದೆ.

ರಾಜ್ಯ ಸರ್ಕಾರ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಹೇಮಂತ್ ಗುಪ್ತಾ ಮತ್ತು ವಿಕ್ರಂ ನಾಥ್ ಅವರಿದ್ದ ಪೀಠವು ಮುಂದಿನ ಆದೇಶದವರೆಗೂ ವಿಚಾರಣೆಯನ್ನು ರದ್ದುಮಾಡಿದೆ.

ತನಿಖೆ ವೇಳೆ ವಶಕ್ಕೆ ಪಡೆಯಲಾಗಿದ್ದ ಎಲೆಕ್ಟ್ರಾನಿಕ್ ಸಾಕ್ಷ್ಯಗಳನ್ನು ಸಾಕ್ಷ್ಯ ಎಂದು ಪರಿಗಣಿಸಲು ಸಾಧ್ಯವಿಲ್ಲ ಎಂದು ಕರ್ನಾಟಕ ಹೈಕೋರ್ಟ್ ಹೇಳಿತ್ತು. ಇದರ ವಿರುದ್ಧ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಎಲೆಕ್ಟ್ರಾನಿಕ್ ಸಾಕ್ಷ್ಯಗಳ ಸತ್ಯಾಸತ್ಯತೆ ಸಾಬೀತು ಮಾಡಲು ಸಾಕ್ಷಿಗಳನ್ನು ಮತ್ತೆ ವಿಚಾರಣೆಗೆ ಒಳಪಡಿಸಲು ಅವಕಾಶ ನೀಡುವಂತೆ ಕೋರಿತ್ತು. ಈ ಸಂಬಂಧ ಪ್ರತಿಕ್ರಿಯೆ ನೀಡುವಂತೆ ಕೇರಳ ಡೆಮಾಕ್ರಟಿಕ್ ಪಕ್ಷದ ನಾಯಕ ಮದನಿ ಹಾಗೂ ಇತರ ಆರೋಪಿಗಳಿಗೆ ಪೀಠವು ಸೂಚಿಸಿದೆ.

ನೂತನ ರಾಕೆಟ್ ಎಸ್‌ಎಸ್‌ಎಲ್‌ವಿ–ಡಿ1 ಕೊನೆಯ ಹಂತದಲ್ಲಿ ವಿಫಲ

ಅನ್ಯ ಕಕ್ಷೆ ಸೇರಿದ ಇಸ್ರೊ ಉಪಗ್ರಹಗಳು

ಶ್ರೀಹರಿಕೋಟಾ (ಆಂಧ್ರಪ್ರದೇಶ) (ಪಿಟಿಐ/ಎಎಫ್‌ಪಿ): ಎರಡು ಉಪಗ್ರಹಗಳನ್ನು ಹೊತ್ತು ಭಾನುವಾರ ಬೆಳಿಗ್ಗೆ ನಭದತ್ತ ಜಿಗಿದಿದ್ದ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ನೂತನ ರಾಕೆಟ್, ‘ಕಿರು ಉಪಗ್ರಹ ಉಡ್ಡಯನ ವಾಹನ’ವು (ಎಸ್‌ಎಸ್‌ಎಲ್‌ವಿ) ಉಪಗ್ರಹಗಳನ್ನು ನಿಗದಿತ ಕಕ್ಷೆಗೆ ಸೇರಿಸುವಲ್ಲಿ ವಿಫಲವಾಗಿದೆ. ಅನ್ಯ ಕಕ್ಷೆಗೆ ಸೇರಿದ ಕಾರಣ ಎರಡೂ ಉಪಗ್ರಹಗಳು ನಿರುಪಯುಕ್ತವಾಗಿವೆ ಎಂದು ಇಸ್ರೊ ಹೇಳಿದೆ.

ಭೂಮಿಯ ಮೇಲ್ಮೈನಿಂದ 500 ಕಿ.ಮೀ. ಅಂತರದಲ್ಲಿರುವ ಕಕ್ಷೆಗಳಿಗೆ ಉಪಗ್ರಹಗಳನ್ನು ಸೇರಿಸುವ ಉದ್ದೇಶದಿಂದಲೇ ಎಸ್‌ಎಸ್‌ಎಲ್‌ವಿ ಕಿರು ರಾಕೆಟ್ ಅನ್ನು ಅಭಿವೃದ್ಧಿಪಡಿಸಲಾಗಿತ್ತು. ಅತ್ಯಂತ ಕಡಿಮೆ ಕಾರ್ಯಾಚರಣೆಯ ವೆಚ್ಚದ ಎಸ್‌ಎಸ್‌ಎಲ್‌ವಿಯು, ವಾಣಿಜ್ಯ ಉಡ್ಡಯನ ಕ್ಷೇತ್ರದಲ್ಲಿ ಇಸ್ರೊವಿನ ಪಾಲನ್ನು ಹೆಚ್ಚಿಸಬಹುದು ಎಂದು ನಿರೀಕ್ಷಿಸಲಾಗಿತ್ತು.

ಎಸ್‌ಎಸ್‌ಎಲ್‌ವಿಯನ್ನು ಇಸ್ರೊ ಅತ್ಯಂತ ಕಡಿಮೆ ಅವಧಿಯಲ್ಲಿ ಅಭಿವೃದ್ಧಿಪಡಿಸಿತ್ತು. ಈ ರಾಕೆಟ್‌ನ ಮೊದಲ ಕಾರ್ಯಾಚರಣೆಯಲ್ಲಿ (ಎಸ್‌ಎಸ್‌ಎಲ್‌ವಿ–ಡಿ1) ಇಸ್ರೊ ತನ್ನದೇ ಭೂ ಸರ್ವೇಕ್ಷಣಾ ಉಪಗ್ರಹ (ಇಒಎಸ್–02) ಮತ್ತು ಸ್ಪೇಸ್ ಕಿಡ್ಸ್ ಇಂಡಿಯಾದ ‘ಆಜಾದಿಸ್ಯಾಟ್’ ಅನ್ನು ಕಕ್ಷೆಗೆ ಸೇರಿಸಲು ಉದ್ದೇಶಿಸಿತ್ತು.

ಪೂರ್ವನಿಗದಿಯಂತೆ ಎಸ್‌ಎಸ್‌ಎಲ್‌ವಿ–ಡಿ1 ಉಡ್ಡಯನ, ಮೊದಲ ಹಂತ, ಎರಡನೇ ಹಂತ ಮತ್ತು




ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ನಭದತ್ತ ಜಿಗಿದ ಎಸ್‌ಎಸ್‌ಎಲ್‌ವಿ–ಡಿ1 –ಪಿಟಿಐ ಚಿತ್ರ

ಮೂರನೇ ಹಂತವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿತು. ಕೊನೆಯ ಹಂತದಲ್ಲಿ ಎಸ್‌ಎಸ್‌ಎಲ್‌ವಿಯಿಂದ, ಉಪಗ್ರಹ ನಿಯಂತ್ರಣ ಕೇಂದ್ರಕ್ಕೆ ದತ್ತಾಂಶ ರವಾನೆಯಾಗುವುದು ನಿಂತು ಹೋಯಿತು. ಉಪಗ್ರಹಗಳು ಪೂರ್ವನಿಗದಿಯಂತೆ ರಾಕೆಟ್‌ನಿಂದ ಬೇರ್ಪಟ್ಟಿರುವುದು ಖಚಿತವಾಗಿತ್ತು. ಆದರೆ ಅವು ಉದ್ದೇಶಿತ ಕಕ್ಷೆಗಳಿಗೆ ಯಶಸ್ವಿಯಾಗಿ ಸೇರಿದವೇ ಎಂಬುದು ದೃಢಪಟ್ಟಿರಲಿಲ್ಲ.

ಕೆಲವು ಗಂಟೆಗಳ ನಂತರ ಉಪಗ್ರಹಗಳ ಸ್ಥಿತಿಗತಿ ಬಗ್ಗೆ ಇಸ್ರೊ ಮಾಹಿತಿ ನೀಡಿತು. ‘ಎಸ್‌ಎಸ್‌ಎಲ್‌ವಿ–ಡಿ1 ಎಲ್ಲಾ ಹಂತಗಳಲ್ಲೂ ನಿರೀಕ್ಷೆಯಂತೆಯೇ ಕೆಲಸ ಮಾಡಿತು. ಆದರೆ, ದತ್ತಾಂಶ ರವಾನೆ ಕಡಿತವಾದ ಕಾರಣ ಕಾರ್ಯಾಚರಣೆಯ ಕೊನೆಯ ಹಂತ ಪರಿಪೂರ್ಣವಾಗಿಲ್ಲ. ಎಸ್‌ಎಸ್‌ಎಲ್‌ವಿ–ಡಿ1 ತನ್ನ ಪಥವನ್ನು ಬದಲಿಸಿ, ಉಪಗ್ರಹಗಳನ್ನು ಬೇರೆ ಕ್ಷಕೆಗೆ ಸೇರಿಸಿದೆ. ಉಪಗ್ರಹಗಳು 356 ಕಿ.ಮೀ. ದೂರದ ವೃತ್ತಾಕಾರದ ಕ್ಷಕೆ ಸೇರಬೇಕಿತ್ತು. ಆದರೆ ಅವು 356 ಕಿ.ಮೀ. ದೂರದ ಅಂಡಾಕಾರದ ಕಕ್ಷೆ ಸೇರಿವೆ. ಹೀಗಾಗಿ ಅವು ನಿರುಪಯುಕ್ತವಾಗಿವೆ’ ಎಂದು ಇಸ್ರೊ ವಿವರಿಸಿತು.

‘ಎಸ್‌ಎಸ್‌ಎಲ್‌ವಿ–ಡಿ1ನಲ್ಲಿ ಆದ ಸಮಸ್ಯೆಗಳ ಬಗ್ಗೆ ತಜ್ಞರ ಸಮಿತಿ ಅಧ್ಯಯನ ನಡೆಸಲಿದೆ ಮತ್ತು ಅಗತ್ಯ ಬದಲಾವಣೆಗಳನ್ನು ಸೂಚಿಸಲಿದೆ. ಅದರ ಅನ್ವಯ ಎಸ್‌ಎಸ್‌ಎಲ್‌ವಿ–ಡಿ2 ಜತೆಗೆ ನಾವು ಶೀಘ್ರವೇ ಹಿಂತಿರುಗಲಿದ್ದೇವೆ’ ಎಂದು ಇಸ್ರೊ ಹೇಳಿದೆ.

ನಿರುಪಯುಕ್ತ ಏಕೆ?



• ಇದು ಅಂಡಾಕಾರದ ಕಕ್ಷೆಯಾಗಿರುವ ಕಾರಣ, ಉಪಗ್ರಹಗಳು ಭೂಮಿಗೆ ಒಂದು ಸುತ್ತು ಬರುವಾಗ ಒಮ್ಮೆ ತೀರಾ ಹತ್ತಿರಬರುತ್ತವೆ. ಮತ್ತೊಮ್ಮೆ ತೀರಾ ದೂರ ಹೋಗುತ್ತವೆ. ಹೀಗಾಗಿ ಅವುಗಳಲ್ಲಿ ಇರುವ ಉಪಕರಣಗಳು ಸರಿಯಾಗಿ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ

• ‘ಭೂಮಿಯ ಮೇಲ್ಮೈನಿಂದ ಕೇವಲ 76 ಕಿ.ಮೀ. ದೂರದಲ್ಲಿರುವ ಕಕ್ಷೆಯಲ್ಲಿ ಉಪಗ್ರಹಗಳು ಇರಲು ಸಾಧ್ಯವಿಲ್ಲ. ಅವು ವಾತಾವರಣದ ವ್ಯಾಪ್ತಿಯನ್ನು ಸಮೀಪಿಸುವ ಕಾರಣ ಭೂಮಿಗೆ ಇನ್ನೂ ಹತ್ತಿರ ಬರುತ್ತವೆ. ಈಗಾಗಲೇ ಅವು ಸ್ವಲ್ಪ ಹತ್ತಿರ ಬಂದಿವೆ. ಇದರಿಂದ ಅವು ಉಪಯೋಗಕ್ಕೆ ಬರುವ ಸಾಧ್ಯತೆಯೇ ಇಲ್ಲ’ ಎಂದು ಇಸ್ರೊ ಹೇಳಿದೆ

ಆಧಾರ: ಇಸ್ರೊ, ಎಸ್‌ಎಸ್‌ಎಲ್‌ವಿ–ಡಿ1 ಬ್ರೋಷರ್, ಪಿಟಿಐ, ಎಎಫ್‌ಪಿ, ಇಸ್ರೊ ಟ್ವಿಟರ್ ಪ್ರಕಟಣೆಗಳು

ಸುದ್ದಿ 2 ನಿಮಿಷ

24ರಿಂದ ಸಿಯುಇಟಿ–ಯುಜಿ ಪರೀಕ್ಷೆ

ನವದೆಹಲಿ (ಪಿಟಿಐ): ತಾಂತ್ರಿಕ ಕಾರಣಗಳಿಂದ ರದ್ದುಗೊಂಡಿದ್ದ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು (ಸಿಯುಇಟಿ– ಯುಜಿ) ಆ.24 ರಿಂದ 28ರ ವರೆಗೆ ನಡೆಸಲಾಗುವುದು. ಹೊಸದಾಗಿ ಪ್ರವೇಶ ಪತ್ರಗಳನ್ನು ಕಳುಹಿಸಲಾಗುವುದು ಎಂದು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಅಧಿಕಾರಿಗಳು ತಿಳಿಸಿದ್ದಾರೆ.

‘ಆಡಳಿತಾತ್ಮಕ ಮತ್ತು ತಾಂತ್ರಿಕ ಕಾರಣಗಳಿಂದ ಕೆಲ ಕೇಂದ್ರಗಳಲ್ಲಿ ಆ. 4 ರಿಂದ 6 ರ ನಡುವೆ ನಿಗದಿಯಾಗಿದ್ದ ಪರೀಕ್ಷೆಯನ್ನು ಮುಂದೂಡಲಾಗಿತ್ತು. ಈ ಹಿಂದೆಯೇ ಆ. 12 ರಿಂದ 14ರ ವರೆಗೆ ಪರೀಕ್ಷೆ ನಡೆಸುವುದಾಗಿ ಘೋಷಿಸಿದ್ದೆವು. ಅಭ್ಯರ್ಥಿಗಳಿಗೆ ಈ ವೇಳಾಪಟ್ಟಿ ಸೂಕ್ತವಲ್ಲದಿದ್ದಲ್ಲಿ ಬೇರೆ ದಿನಾಂಕ ತಿಳಿಸುವ ಆಯ್ಕೆಯನ್ನು ನೀಡಲಾಗಿತ್ತು’ ಎಂದು ಎನ್‌ಟಿಎ ಹಿರಿಯ ನಿರ್ದೇಶಕಿ ಸಾಧನಾ ಪರಾಶರ ತಿಳಿಸಿದ್ದಾರೆ.

ಪರೀಕ್ಷೆಗೂ ಮೊದಲು ಹೊಸ ಪ್ರವೇಶ ಪತ್ರ ನೀಡಲಾಗುವುದು. ಆ. 17, 18 ಮತ್ತು 20 ರ ಪರೀಕ್ಷೆಗಳನ್ನು ಮೊದಲೇ ತಿಳಿಸಲಾದ ವೇಳಾಪಟ್ಟಿಯಂತೆ ನಡೆಸಲಾಗುತ್ತದೆ.

ಎನ್‌ಟಿಎ ವಿಶೇಷ ಕುಂದುಕೊರತೆ ನಿವಾರಣಾ ಇ-ಮೇಲ್ ವ್ಯವಸ್ಥೆಗೊಳಿಸಿದೆ. ವಿಷಯ ಸಂಯೋಜನೆ, ಮಾಧ್ಯಮ, ಪ್ರಶ್ನೆ ಪತ್ರಿಕೆ (ಯಾವುದಾದರೂ ಇದ್ದರೆ) ಕುರಿತು ದೂರುಗಳನ್ನು cuetgrievance@nta.ac.in ಗೆ ಕಳುಹಿಸಬಹುದು. ದೂರು ಸಲ್ಲಿಸುವಾಗ ಅಭ್ಯರ್ಥಿಗಳು ಅರ್ಜಿ ಸಂಖ್ಯೆ ನಮೂದಿಸಬೇಕು ಎಂದರು.

ಪಿಂಚಣಿ ಹೆಚ್ಚಳಕ್ಕೆ ಆಗ್ರಹಿಸಿ ಪ್ರತಿಭಟನೆ



ನವದೆಹಲಿ: ಪಿಂಚಣಿ ಹೆಚ್ಚಳಕ್ಕೆ ಆಗ್ರಹಿಸಿ ಪಿಂಚಣಿದಾರರ ಹೋರಾಟದ ರಾಷ್ಟ್ರೀಯ ಸಂಘರ್ಷ ಸಮಿತಿಯ ನೇತೃತ್ವದಲ್ಲಿ ಜಂತರ್ ಮಂತರ್‌ನಲ್ಲಿ ಭಾನುವಾರ ಪ್ರತಿಭಟನೆ ನಡೆಯಿತು.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ಕಮಾಂಡರ್ ಅಶೋಕ್ ರಾವತ್ ಮಾತನಾಡಿ, ‘ಪಿಂಚಣಿ ಹೆಚ್ಚಳಕ್ಕೆ ಆಗ್ರಹಿಸಿ ಈ ಹಿಂದೆ ಹಲವು ಪ್ರತಿಭಟನೆ ಹಾಗೂ ಆಂದೋಲನಗಳನ್ನು ನಡೆಸಿ ಸರ್ಕಾರ ಹಾಗೂ ಇಪಿಎಫ್‌ಒ ಮೇಲೆ ಒತ್ತಡ ಹೇರಲಾಗಿದೆ. ಆದರೆ, ಈವರೆಗೆ ನಿವೃತ್ತರಿಗೆ ವೈಜ್ಞಾನಿಕವಾಗಿ ಪಿಂಚಣಿ ನಿಗದಿ ಮಾಡಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

ಸೋಮವಾರ ದೆಹಲಿ ಚಲೋ ನಡೆಯಲಿದ್ದು, ಬಳಿಕ ರಾಮಲೀಲಾ ಮೈದಾನದಲ್ಲಿ ಪ್ರತಿಭಟನಾ ಸಭೆ ಆಯೋಜಿಸಲಾಗಿದೆ. ಇದರಲ್ಲಿ ಸಾವಿರಾರು ಮಂದಿ ನಿವೃತ್ತ ಪಿಂಚಣಿದಾರರು ಭಾಗವಹಿಸಲಿದ್ದಾರೆ ಎಂದು ಅವರು ಹೇಳಿದರು.

ಇಪಿಎಸ್95 ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಸಿ ಒಕ್ಕೂಟದ ಕಾರ್ಯಾಧ್ಯಕ್ಷ ನಂಜುಂಡೇಗೌಡ ಮತ್ತು ಉಪಾಧ್ಯಕ್ಷ ಸುಬ್ಬಣ್ಣ ನೇತೃತ್ವದಲ್ಲಿ ಕರ್ನಾಟಕದಿಂದ 60 ಮಂದಿ ಹೋರಾಟದಲ್ಲಿ ಭಾಗವಹಿಸಿದ್ದಾರೆ ಎಂದು ಒಕ್ಕೂಟದ ಅಧ್ಯಕ್ಷ ಶಂಕರ್ ಕುಮಾರ್ ಮಾಹಿತಿ ನೀಡಿದ್ದಾರೆ.

ಎಚ್‌ಎಎಲ್‌ನಿಂದ ಆಧುನಿಕ ಡ್ರೋನ್

ಗಡಿಯಲ್ಲಿ ಚೀನಾ ಮೇಲೆ ಕಣ್ಣಿಡುವುದು ಸೇರಿ ವಿವಿಧ ಕಾರ್ಯಗಳಿಗೆ ನೆರವು

ನವದೆಹಲಿ (ಪಿಟಿಐ): ವಾಸ್ತವ ಗಡಿ ನಿಯಂತ್ರಣ ರೇಖೆ (ಎಲ್‌ಎಸಿ) ಮೇಲೆ ನಿಗಾ ಇಡುವುದು ಸೇರಿದಂತೆ ವಿವಿಧ ಕಾರ್ಯಗಳಿಗೆ ನೆರವಾಗಬಲ್ಲ ಬಹೂಪಯೋಗಿ ಹಾಗೂ ಪ್ರತಿಕೂಲ ಸನ್ನಿವೇಶದಲ್ಲೂ ಕಾರ್ಯನಿರ್ವಹಿಸಬಲ್ಲ ಸಾಮರ್ಥ್ಯ ಹೊಂದಿರುವ ಅತ್ಯಾಧುನಿಕ ಡ್ರೋನ್ ಅನ್ನು ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ಅಭಿವೃದ್ಧಿಪಡಿಸುತ್ತಿದೆ.

ಕ್ಷಿಪಣಿಗಳು ಹಾಗೂ ಸೆನ್ಸಾರ್ ಸೇರಿದಂತೆ 40 ಕೆ.ಜಿ ಭಾರದ ವಸ್ತುಗಳನ್ನು ಹೊತ್ತೊಯ್ಯುವ ಸಾಮರ್ಥ್ಯವನ್ನೂ ಇದು ಹೊಂದಿದೆ. ಸೇನೆಯ ಅಗತ್ಯತೆ ಗಮನದಲ್ಲಿಟ್ಟುಕೊಂಡು, ಪರ್ವತ ಶ್ರೇಣಿಗಳು ಹಾಗೂ ಎಲ್‌ಎಸಿ ಮೇಲೆ ನಿಗಾ ಇಡುವುದಕ್ಕೆ ನೆರವಾಗುವ ಉದ್ದೇಶದಿಂದಲೇ ಈ ಡ್ರೋನ್ ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

‘ಈ ಡ್ರೋನ್‌ನ ಕಾರ್ಯಾಚರಣೆ ವ್ಯವಸ್ಥೆಯು ಕೃತಕ ಬುದ್ಧಿಮತ್ತೆಯ ತಂತ್ರಾಂಶವನ್ನು ಒಳಗೊಂಡಿರಲಿದೆ. ಭದ್ರತಾ ಪಡೆಯವರು ಈ ಡ್ರೋನ್ ಮೂಲಕ ಅಗತ್ಯ ವಸ್ತುಗಳನ್ನೂ ಸಾಗಣೆ ಮಾಡಬಹುದು’ ಎಂದೂ ಮಾಹಿತಿ ನೀಡಿವೆ.

‘ಎಚ್‌ಎಎಲ್ ತಾನು ಅಭಿವೃದ್ಧಿಪಡಿಸಿರುವ ಮಾನವರಹಿತ ವೈಮಾನಿಕ ವಾಹನದ (ಯುಎವಿ) ಚೊಚ್ಚಲ ಪರೀಕ್ಷಾರ್ಥ ಹಾರಾಟವನ್ನು ಮುಂದಿನ ವರ್ಷದ ಮಧ್ಯಂತರದಲ್ಲಿ ನಡೆಸಲು ತೀರ್ಮಾನಿಸಿದೆ. ಮೊದಲ ಹಂತದಲ್ಲಿ ಇಂತಹ 60 ವಾಹನಗಳನ್ನು ಅಭಿವೃದ್ಧಿಪಡಿಸುವ ಗುರಿಯನ್ನೂ ಹೊಂದಿದೆ’ ಎಂದೂ ತಿಳಿಸಿವೆ.

‘ಇಸ್ರೇಲ್ ಏರೋಸ್ಪೇಸ್ ಇಂಡಸ್ಟ್ರಿಯ ಸಹಭಾಗಿತ್ವದಲ್ಲಿ ಹೆರಾನ್ ಟಿಪಿ ಡ್ರೋನ್‌ಗಳನ್ನು ಅಭಿವೃದ್ಧಿಪಡಿಸುವ ಮಹತ್ವದ ಯೋಜನೆಯೊಂದನ್ನೂ ಎಚ್‌ಎಎಲ್ ಹೊಂದಿದೆ. ಭಾರತೀಯ ಸೇನೆಗೆ ಅಗತ್ಯವಿರುವಷ್ಟು ಡ್ರೋನ್‌ಗಳನ್ನು ಸಿದ್ಧಪಡಿಸುವ ಜೊತೆಗೆ ಜಾಗತಿಕ ಮಟ್ಟದಲ್ಲಿ ಅವುಗಳನ್ನು ರಫ್ತು ಮಾಡುವ ಆಲೋಚನೆಯನ್ನೂ ಸಂಸ್ಥೆ ಹೊಂದಿದೆ’ ಎಂದು ವ್ಯಕ್ತಿಯೊಬ್ಬರು ತಿಳಿಸಿದ್ದಾರೆ.

‘ಮಧ್ಯಮ ಎತ್ತರದ ಹೆರಾನ್ ಡ್ರೋನ್‌ಗಳು 35 ಸಾವಿರ ಅಡಿಗಳಷ್ಟು ಎತ್ತರಕ್ಕೆ ಹಾರಬಲ್ಲ ಹಾಗೂ ಸುಮಾರು 45 ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಬಲ್ಲ ಸಾಮರ್ಥ್ಯವನ್ನು ಹೊಂದಿರಲಿವೆ. ಹೆರಾನ್ ಟಿಪಿ ಡ್ರೋನ್‌ಗಳು ಸ್ವಯಂಚಾಲಿತ ಟ್ಯಾಕ್ಸಿ ಟೇಕಾಫ್ ಆ್ಯಂಡ್ ಲ್ಯಾಂಡಿಂಗ್ (ಎಟಿಒಎಲ್) ಹಾಗೂ ಉಪಗ್ರಹ ಸಂವಹನ ತಂತ್ರಜ್ಞಾನವನ್ನು ಒಳಗೊಂಡಿರಲಿವೆ’ ಎಂದೂ ಮಾಹಿತಿ ನೀಡಿದ್ದಾರೆ.

ಡ್ರೋನ್ ತಯಾರಿಕೆಗೆ ಸಂಬಂಧಿಸಿದ ಎರಡು ಪ್ರತ್ಯೇಕ ಯೋಜನೆಗಳಲ್ಲಿ ಎಚ್‌ಎಎಲ್, ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ (ಡಿಆರ್‌ಡಿಒ) ಜೊತೆಗೂಡಿ ಕೆಲಸ ಮಾಡುತ್ತಿದೆ.

ದುರಸ್ತಿಗಾಗಿ ಅಮೆರಿಕದ ನೌಕೆ ಭಾರತಕ್ಕೆ

ನವದೆಹಲಿ: ಅಮೆರಿಕದ ನೌಕಾಪಡೆಯ ಸರಕು ಸಾಗಣೆ ನೌಕೆಯು ದುರಸ್ತಿಗಾಗಿ ಚೆನ್ನೈ ಸಮೀಪದ ಕಟ್ಟುಪಲ್ಲಿಯಲ್ಲಿರುವ ಹಡಗುಕಟ್ಟೆಗೆ ಬಂದಿದೆ. ಅಮೆರಿಕದ ಹಡಗುಗಳನ್ನು ಭಾರತದ ಹಡಗುಕಟ್ಟೆಗಳಲ್ಲಿ ದುರಸ್ತಿ ಮಾಡುವ ಸಂಬಂಧ ಎರಡೂ ದೇಶಗಳು ಒಪ್ಪಂದ ಮಾಡಿಕೊಂಡ ನಂತರ, ದುರಸ್ತಿಗಾಗಿ ಭಾರತಕ್ಕೆ ಬಂದಿರುವ ಅಮೆರಿಕದ ಮೊದಲ ಹಡಗು ಇದು.

ಕಟ್ಟುಪಲ್ಲಿಯಲ್ಲಿರುವ ಎಲ್ ಅಂಡ್ ಟಿ ಕಂಪನಿಯ ಹಡಗುಕಟ್ಟೆಗೆ ಬಂದ ಯುಎಸ್‌ಎನ್‌ಎಸ್ ಚಾರ್ಲ್ಸ್ ಡ್ರೀವ್, 11 ದಿನ ಅಲ್ಲೇ ಇರಲಿದೆ. ಸದ್ಯ ನೌಕೆಯು ಖಾಲಿಯಾಗಿದ್ದು, ದುರಸ್ತಿ ನಡೆಯಲಿದೆ.

ಮಣಿಪುರದಲ್ಲಿ 5 ದಿನ ಇಂಟರ್‌ನೆಟ್ ಸ್ಥಗಿತ

ಇಂಫಾಲ (ಪಿಟಿಐ): ಮಣಿಪುರಕ್ಕೆ ಸ್ವಾಯತ್ತತೆ ಬೇಕು ಎಂದು ಆಗ್ರಹಿಸಿ ಆಲ್ ಟ್ರೈಬಲ್ ಸ್ಟೂಡೆಂಟ್ಸ್ ಯೂನಿಯನ್ ಮಣಿಪುರ (ಎಟಿಎಸ್‌ಯುಎಂ) ಸಂಘಟನೆಯು ಶುಕ್ರವಾರ ಬೆಳಿಗ್ಗೆಯಿಂದಲೇ ರಾಜ್ಯದ ಮುಖ್ಯ ಹೆದ್ದಾರಿಗಳನ್ನು ಬಂದ್ ಮಾಡಿ, ಅನಿರ್ದಿಷ್ಟಾವಧಿ ‘ಆರ್ಥಿಕ ದಿಗ್ಬಂದನ’ ಹೇರಿದೆ. ದ್ವೇಷ ಭಾಷಣವನ್ನು ಹತ್ತಿಕ್ಕುವ ಸಲುವಾಗಿ ರಾಜ್ಯದಲ್ಲಿ ಐದು ದಿನಗಳ ಕಾಲ ಮೊಬೈಲ್ ಇಂಟರ್ನೆಟ್ ಸೇವೆಯನ್ನು ಸ್ಥಗಿತಗೊಳಿಸಲಾಗಿದೆ.

‘ಕೋವಿಡ್ ನಿರ್ವಹಣೆ: ಒಕ್ಕೂಟ ಪ್ರಜ್ಞೆ ಮೆರೆದ ರಾಜ್ಯಗಳು’

ಒಂದನೇ ಪುಟದಿಂದ...

ಕೃಷಿ, ಹೈನುಗಾರಿಕೆ ಮತ್ತು ಆಹಾರ ಸಂಸ್ಕರಣೆ ಕ್ಷೇತ್ರಗಳು ಆಧುನೀಕರಣಗೊಳ್ಳಬೇಕು ಎಂದು ಪ್ರಧಾನಿ ಮೋದಿ ಅವರು ಬಲವಾಗಿ ಪ್ರತಿಪಾದಿಸಿದರು. ಇದು ಭಾರತವು ಸ್ವಾವಲಂಬಿಯಾಗಲು ನೆರವಾಗುವುದಲ್ಲದೆ, ಕೃಷಿ ಕ್ಷೇತ್ರದಲ್ಲಿ ದೇಶವು ಜಾಗತಿಕ ನಾಯಕ ಎನಿಸಿಕೊಳ್ಳಬಹುದು ಎಂದರು.

ಜಿಎಸ್‌ಟಿ ಸಂಗ್ರಹವನ್ನು ಇನ್ನಷ್ಟು ಹೆಚ್ಚಿಸಲು ಎಲ್ಲರೂ ಜೊತೆಗೂಡಿ ಕೆಲಸ ಮಾಡಬೇಕು ಎಂದು ಅವರು ಕರೆ ಕೊಟ್ಟರು. ಜಿಎಸ್‌ಟಿ ಸಂಗ್ರಹವು ಈಗ ಉತ್ತಮಗೊಂಡಿದೆ. ಆದರೆ, ಇನ್ನೂ ಹೆಚ್ಚು ಸಂಗ್ರಹಿಸಲು ಅವಕಾಶ ಇದೆ. ನಮ್ಮ ಅರ್ಥವ್ಯವಸ್ಥೆಯನ್ನು ಬಲಪಡಿಸಲು ಮತ್ತು ಐದು ಲಕ್ಷ ಕೋಟಿ ಡಾಲರ್ ವಹಿವಾಟಿಗೆ ಏರಿಸಲು ಇದು ಅಗತ್ಯವಾಗಿದೆ ಎಂದರು.

ಈ ಸಭೆಯಲ್ಲಿ ಚರ್ಚಿಸಿದ ವಿಚಾರಗಳು ದೇಶದ ಮುಂದಿನ 25 ವರ್ಷಗಳ ಆದ್ಯತೆಗಳನ್ನು ನಿರ್ಧರಿಸಲಿವೆ. ಇಂದು ಬಿತ್ತುವ ಬೀಜವು 2047ರ ಹೊತ್ತಿಗೆ ಫಲ ಕೊಡಲಿದೆ ಎಂದರು.

ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್, ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಸಭೆಯಲ್ಲಿ ಭಾಗವಹಿಸಿರಲಿಲ್ಲ. 23 ರಾಜ್ಯಗಳ ಮುಖ್ಯಮಂತ್ರಿಗಳು, ಮೂವರು ಲೆಫ್ಟಿನೆಂಟ್ ಗವರ್ನರ್‌ಗಳು ಮತ್ತು ಇಬ್ಬರು ಆಡಳಿತಾಧಿಕಾರಿಗಳು ಸಭೆಯಲ್ಲಿ ಭಾಗಿಯಾಗಿದ್ದರು.

ಧಾನ್ಯ, ಎಣ್ಣೆಬೀಜಗಳು ಮತ್ತು ಇತರ ಕೃಷಿ ಉತ್ಪನ್ನಗಳಲ್ಲಿ ಸ್ವಾವಲಂಬನೆ ಸಾಧನೆ, ಬೆಳೆ ವೈವಿಧ್ಯ, ರಾಷ್ಟ್ರೀಯ ಶಿಕ್ಷಣ ನೀತಿಯ ಜಾರಿ ಮತ್ತು ನಗರಾಡಳಿತ ವಿಷಯಗಳ ಬಗ್ಗೆ ಚರ್ಚೆ ನಡೆಯಿತು.

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಹೊಸ ಶಿಕ್ಷಣ ನೀತಿಯ ಬಗ್ಗೆ ಮಾತನಾಡಿದರು.



ನವದೆಹಲಿಯಲ್ಲಿ ಭಾನುವಾರ ನಡೆದ ನೀತಿ ಆಯೋಗದ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮೇಘಾಲಯದ ಮುಖ್ಯಮಂತ್ರಿ ಕಾನ್ರಾಡ್ ಸಂಗ್ಮಾ ಅವರಿಗೆ ನಮಸ್ಕರಿಸಿದರು – ಪಿಟಿಐ ಚಿತ್ರ

> ಜಿಎಸ್‌ಟಿಯಿಂದಾಗಿ ರಾಜ್ಯಕ್ಕೆ ಕೊರತೆಯಾಗುವ ವರಮಾನಕ್ಕೆ ಪರಿಹಾರ ನೀಡುವ ಪದ್ಧತಿಯನ್ನು ಕೇಂದ್ರವು ಇನ್ನೂ ಐದು ವರ್ಷ ಕಾಲ ವಿಸ್ತರಿಸಬೇಕು
> **ಭೂಪೇಶ್ ಬಘೇಲ್**
> ಛತ್ತೀಸಗಡ ಮುಖ್ಯಮಂತ್ರಿ



ಅಮೆರಿಕದ ನ್ಯೂಜರ್ಸಿಯಲ್ಲಿ ನಡೆದ ಸ್ಪರ್ಧೆಯಲ್ಲಿ ಮಿಸ್ ಇಂಡಿಯಾ ಯುಎಸ್‌ಎ–2022 ಸ್ಪರ್ಧೆಯಲ್ಲಿ ಕಿರೀಟ ತೊಟ್ಟ ಆರ್ಯ ವಾಲ್ವೇಕರ್ – ಇನ್‌ಸ್ಟಾಗ್ರಾಂ ಚಿತ್ರ

ಕೇಂದ್ರ ಸಂಪುಟ ಸೇರಲ್ಲ: ಜೆಡಿ(ಯು)

ಪಟ್ನಾ (ಪಿಟಿಐ): ‘ಆರ್.ಸಿ.ಪಿ. ಸಿಂಗ್ ರಾಜೀನಾಮೆ ನೀಡಿದ ನಂತರ ಯಾವುದೇ ಪ್ರಾತಿನಿಧ್ಯವಿಲ್ಲದೆ ಉಳಿದಿರುವ ಕೇಂದ್ರ ಸಚಿವ ಸಂಪುಟವನ್ನು ಸೇರುವುದಿಲ್ಲ’ ಎಂದು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ನೇತೃತ್ವದ ಜೆಡಿ(ಯು) ಪಕ್ಷವು ಭಾನುವಾರ ಸ್ಪಷ್ಟಪಡಿಸಿದೆ.

ಭಾನುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜೆಡಿ(ಯು) ರಾಷ್ಟ್ರೀಯ ಅಧ್ಯಕ್ಷ ರಾಜೀವ್ ರಂಜನ್ ಸಿಂಗ್ (ಲಾಲನ್), ‘ಆರ್.ಸಿ.ಪಿ. ಸಿಂಗ್ ಅವರ ದೇಹವು ಇಲ್ಲಿತ್ತು. ಆದರೆ ಅವರ ಆತ್ಮವು ಬೇರೆಲ್ಲೋ ಇತ್ತು. ಆದ್ದರಿಂದ ಅವರು ಪಕ್ಷದಿಂದ ನಿರ್ಗಮಿಸುವುದು ನಿರೀಕ್ಷಿತವಾಗಿತ್ತು’ ಎಂದು ಹೇಳಿದರು.

‘2019ರ ಲೋಕಸಭಾ ಚುನಾವಣೆಯ ಬಳಿಕ ಕೇಂದ್ರ ಸರ್ಕಾರವನ್ನು ಸೇರದಿರಲು ನಿರ್ಧರಿಸಿದ್ದೆವು. ನಾವು ನಮ್ಮ ನಿಲುವಿಗೇ ಅಂಟಿಕೊಳ್ಳುತ್ತೇವೆ’ ಎಂದು ರಾಜೀವ್ ರಂಜನ್ ಹೇಳಿದರು.

ನೀತಿ ಆಯೋಗದ ಸಭೆಗೆ ಮುಖ್ಯಮಂತ್ರಿ ನಿತೀಶ್ ಕುಮಾರ್ ಗೈರಾಗಿರುವುದರಿಂದ ಬಿಜೆಪಿ ಜತೆಗಿನ ಸಂಬಂಧ ಹಳಸಿದೆ ಎಂಬ ವದಂತಿಗಳನ್ನು ಅಲ್ಲಗಳೆದ ಅವರು, ಜೆಡಿಯು ಮತ್ತು ಬಿಜೆಪಿ ನಡುವೆ ‘ಎಲ್ಲವೂ ಚೆನ್ನಾಗಿದೆ’ ಎಂದು ಹೇಳಿಕೊಂಡಿದ್ದಾರೆ.

ತಾಲೀಮು ಕೈಬಿಡಲು ಚೀನಾಗೆ ಆಗ್ರಹ

ವಾಷಿಂಗ್ಟನ್ (ಪಿಟಿಐ): ತೈವಾನ್ ಹಾಗೂ ಅದರ ಆಸುಪಾಸಿನಲ್ಲಿ ನಡೆಸುತ್ತಿರುವ ಸೇನಾ ತಾಲೀಮು ಅನ್ನು ತಕ್ಷಣವೇ ಸ್ಥಗಿತಗೊಳಿಸಬೇಕು ಎಂದು ಅಮೆರಿಕ, ಆಸ್ಟ್ರೇಲಿಯ, ಜಪಾನ್‌ಗಳು ಚೀನಾಗೆ ಆಗ್ರಹಪಡಿಸಿವೆ.

ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟೊನಿ ಬ್ಲಿಂಕೆನ್, ಆಸ್ಟ್ರೇಲಿಯ ವಿದೇಶಾಂಗ ಸಚಿವ ಪೆನ್ನಿ ವೊಂಗ್, ಜಪಾನ್‌ನ ಸಚಿವ ಹಯಾಷಿ ಯೊಷಿಮಸ ಈ ಬಗ್ಗೆ ಜಂಟಿ ಹೇಳಿಕೆ ನೀಡಿದ್ದಾರೆ.

ತೈವಾನ್‌ನಲ್ಲಿ ಶಾಂತಿ ಮತ್ತು ಸ್ಥಿರತೆ ಸ್ಥಾಪನೆಗೆ ಬದ್ಧವಾಗಿರುವುದಾಗಿಯೂ ಈ ದೇಶಗಳು ಪ್ರತಿಪಾದಿಸಿವೆ. ಅಮೆರಿಕ ಸಂಸತ್ತಿನ ಸ್ಪೀಕರ್ ನ್ಯಾನ್ಸಿ ಪೆಲೋಸಿ ಅವರು ತೈಪೆಗೆ ಭೇಟಿ ನೀಡಿದ್ದ ಹಿಂದೆಯೇ ಚೀನಾ ತಾಲೀಮು ಅನ್ನು ಚುರುಕುಗೊಳಿಸಿತ್ತು.

ಪೆಲೋಸಿ. ಅವರು, ತೈವಾನ್ ಅಧ್ಯಕ್ಷ ಸಾಯ್ ಇಂಗ್ ವೆನ್ ಮತ್ತಿತರ ಮುಖಂಡರ ಜೊತೆಗೆ ನಡೆಸಿದ್ದ ಸಭೆಯು ಚೀನಾವನ್ನು ಕೆರಳಿಸಿತ್ತು. ಅದರ ಹಿಂದೆಯೇ ಚೀನಾ ಸೇನಾ ತಾಲೀಮು ಆರಂಭಿಸಿತ್ತು.

ಇಸ್ರೇಲ್ ದಾಳಿ: ಇಸ್ಲಾಮಿಕ್ ಜಿಹಾದ್ ನಾಯಕ ಸಾವು

ಗಾಜಾ (ಎ.ಪಿ): ಇಸ್ರೇಲ್ ನಡೆಸಿರುವ ವಾಯುದಾಳಿಯಲ್ಲಿ ಗಾಜಾ ನಿರಾಶ್ರಿತರ ಶಿಬಿರದಲ್ಲಿದ್ದ ಹಿರಿಯ ಇಸ್ಲಾಮಿಕ್ ಜಿಹಾದ್ ಕಮಾಂಡರ್‌ವೊಬ್ಬರು ಮೃತಪಟ್ಟಿದ್ದಾರೆ. ಉಗ್ರರ ಗುಂಪು ಗುರಿಯಾಗಿಸಿ ಈ ವಾರದಲ್ಲಿ ನಡೆದ ಎರಡನೇ ದಾಳಿ ಇದಾಗಿದೆ. ಇರಾನ್ ಬೆಂಬಲಿತ ಉಗ್ರರ ಗುಂಪು ಇಸ್ರೇಲ್‌ನ ದಾಳಿಗೆ ಪ್ರತಿಯಾಗಿ ಹಲವು ಸುತ್ತಿನ ರಾಕೆಟ್ ದಾಳಿ ನಡೆಸಿದೆ. ಗಡಿಯುದ್ಧಕ್ಕೂ ನಡೆಯುತ್ತಿರುವ ಈ ಕಾಳಗ ಯುದ್ಧದ ಸನ್ನಿವೇಶವನ್ನು ನಿರ್ಮಿಸಿದೆ.

ಚೆಸ್ ಒಲಿಂಪಿಯಾಡ್: ಡ್ರಾ ಸಾಧಿಸಿದ 'ಬಿ' ತಂಡ

ಭಾರತ 'ಎ' ತಂಡ ಜಯಭೇರಿ

ಮಹಾಬಲಿಪುರಂ: ಭಾರತ 'ಎ' ತಂಡ ಚೆಸ್ ಒಲಿಂಪಿಯಾಡ್‌ನ ಒಂಬತ್ತನೇ ಸುತ್ತಿನಲ್ಲಿ ಬ್ರೆಜಿಲ್ ತಂಡವನ್ನು 3–1 ರಲ್ಲಿ ಮಣಿಸಿತು. 'ಬಿ' ತಂಡ ಅಜರ್‌ಬೈಜಾನ್ ಜತೆ 2–2 ರಲ್ಲಿ ಡ್ರಾ ಮಾಡಿಕೊಂಡಿತು.

ಭಾನುವಾರ ನಡೆದ ಪಂದ್ಯದಲ್ಲಿ 'ಎ' ತಂಡದ ಅರ್ಜುನ್ ಎರಿಗೈಸಿ ಮತ್ತು ಕೆ.ಶಶಿಕಿರಣ್ ಅವರು ತಮ್ಮ ಎದುರಾಳಿಗಳನ್ನು ಮಣಿಸಿದರು. ಪಿ.ಹರಿಕೃಷ್ಣ ಮತ್ತು ವಿದಿತ್ ಸಂತೋಷ್ ಗುಜರಾತಿ ಅವರು ಡ್ರಾ ಸಾಧಿಸಿದರು.

'ಬಿ' ತಂಡದ ಆರ್.ಪ್ರಗ್ನಾನಂದ ಅವರು ಅಜರ್‌ಬೈಜಾನ್‌ನ ದುರ್ರೈರ್‌ಬೈಲಿ ವಾಸಿಫ್ ಅವರನ್ನು ಮಣಿಸಿದರು. ರೌನಕ್ ಸಾಧ್ವಾನಿ ಅವರು ಅಬಸೊವ್ ನಿಜಾತ್ ಎದುರು ಸೋತರು. ಡಿ.ಗುಕೇಶ್ ಮತ್ತು ನಿಹಾಲ್ ಸರಿನ್ ಅವರು ಕ್ರಮವಾಗಿ ಶಕ್ರಿಯಾರ್ ಮಮೆದ್ಯರೊವ್ ಹಾಗೂ ಮಮೆದೊವ್ ರಾಫ್ ಎದುರು ಡ್ರಾ ಮಾಡಿದರು.

ಸತತ ಎಂಟು ಗೆಲುವು ಪಡೆದಿದ್ದ ಗುಕೇಶ್ ಟೂರ್ನಿಯಲ್ಲಿ ಇದೇ ಮೊದಲ ಬಾರಿ ಡ್ರಾ ಮಾಡಿಕೊಂಡರು. ಬಿಳಿ ಕಾಯಿಗಳೊಂದಿಗೆ ಆಡಿದ ಅವರು 34 ನಡೆಗಳ ಬಳಿಕ ಡ್ರಾಗೆ ಒಪ್ಪಿಕೊಂಡರು.

ಭಾರತ 'ಸಿ' ತಂಡ 3–1 ರಲ್ಲಿ ಪರಗ್ವೆ ಎದುರು ಜಯಿಸಿತು. ಎಸ್.ಪಿ.ಸೇತುರಾಮನ್, ಕಾರ್ತಿಕೇಯನ್ ಮುರಳಿ ಮತ್ತು ಅಭಿಮನ್ಯು ಪುರಾಣಿಕ್ ಅವರು ಪೂರ್ಣ ಪಾಯಿಂಟ್ಸ್ ಕಲೆಹಾಕಿದರು. ಸೂರ್ಯಶೇಖರ್ ಗಂಗೂಲಿ ಸೋಲು ಅನುಭವಿಸಿದರು.

ಮಹಿಳೆಯರ ವಿಭಾಗದಲ್ಲಿ ಭಾರತ 'ಎ' ತಂಡ 1.5–2.5 ರಿಂದ ಪೋಲೆಂಡ್ ಎದುರು ಪರಾಭವಗೊಂಡಿತು. ಭಾರತ 'ಬಿ' ತಂಡ ಸ್ವಿಟ್ಜರ್‌ಲೆಂಡ್ ವಿರುದ್ಧ 4–0 ರಲ್ಲಿ, ಭಾರತ 'ಸಿ' ತಂಡ 3–1 ರಲ್ಲಿ ಎಸ್ಟೋನಿಯ ಎದುರು ಗೆದ್ದಿತು.



ಡಿ.ಗುಕೇಶ್ ಅವರು ಒಂಬತ್ತನೇ ಸುತ್ತಿನಲ್ಲಿ ಆಡಿದರು –ಎಎಫ್‌ಪಿ ಚಿತ್ರ

ಪ್ರಣವ್ 75ನೇ ಜಿ.ಎಂ

ಚೆನ್ನೈ (ಪಿಟಿಐ): ಚೆನ್ನೈನ ಯುವ ಆಟಗಾರ ವಿ.ಪ್ರಣವ್ ಅವರು ಭಾರತದ 75ನೇ ಗ್ರ್ಯಾಂಡ್‌ಮಾಸ್ಟರ್ ಎನಿಸಿಕೊಂಡರು.

15 ವರ್ಷದ ಪ್ರಣವ್ ಅವರು ರೊಮೇನಿಯದಲ್ಲಿ ನಡೆದ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡಿ ತಮ್ಮ ಮೂರನೇ ಜಿಎಂ ನಾರ್ಮ್ ಪಡೆದು ಗ್ರ್ಯಾಂಡ್‌ಮಾಸ್ಟರ್ ಪದವಿ ಗಿಟ್ಟಿಸಿಕೊಂಡರು.

ಪ್ರಣವ್ 2021 ರಲ್ಲಿ ಸರ್ಬಿಯ ಓಪನ್ ಟೂರ್ನಿಯಲ್ಲಿ ಮೊದಲ ಜಿಎಂ ನಾರ್ಮ್ ಹಾಗೂ ಜೂನ್ ತಿಂಗಳಲ್ಲಿ ಬುಡಾಪೆಸ್ಟ್‌ನಲ್ಲಿ ನಡೆದ ಟೂರ್ನಿಯಲ್ಲಿ ಎರಡನೇ ಜಿಎಂ ನಾರ್ಮ್ ಪಡೆದುಕೊಂಡಿದ್ದರು. ಅವರು ತಮಿಳುನಾಡಿನ 27ನೇ ಗ್ರ್ಯಾಂಡ್‌ಮಾಸ್ಟರ್ ಎನಿಸಿಕೊಂಡರು.

ಸ್ಪಿನ್ನರ್‌ಗಳ ಕೈಚಳಕ: ಭಾರತಕ್ಕೆ ಜಯ

ಫ್ಲಾರಿಡಾ: ಅಂತೂ ಇಂತೂ ಲಯ ಕಂಡುಕೊಳ್ಳುವಲ್ಲಿ ಯಶಸ್ವಿಯಾದ ಶ್ರೇಯಸ್ ಅಯ್ಯರ್ ಅವರ ಅಬ್ಬರದ ಆಟ ಮತ್ತು ಸ್ಪಿನ್ನರ್‌ಗಳ ಚುರುಕಿನ ಬೌಲಿಂಗ್ ನೆರವಿನಿಂದ ಭಾರತ ತಂಡ ಐದನೇ ಹಾಗೂ ಕೊನೆಯ ಟಿ20 ಪಂದ್ಯದಲ್ಲಿ ವೆಸ್ಟ್ ಇಂಡೀಸ್ ತಂಡವನ್ನು 88 ರನ್‌ಗಳಿಂದ ಮಣಿಸಿತು.

ಭಾನುವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಭಾರತ, 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 188 ರನ್ ಗಳಿಸಿತು. ವಿಂಡೀಸ್ 15.4 ಓವರ್‌ಗಳಲ್ಲಿ 100 ರನ್‌ಗಳಿಗೆ ಆಲೌಟಾಯಿತು. ಐದು ಪಂದ್ಯಗಳ ಸರಣಿಯನ್ನು ಭಾರತ 4–1 ರಲ್ಲಿ ಜಯಿಸಿತು.

ರವಿ ಬಿಷ್ಣೋಯಿ (16ಕ್ಕೆ 4), ಅಕ್ಷರ್ ಪಟೇಲ್ (15ಕ್ಕೆ 3) ಮತ್ತು ಕುಲದೀಪ್ ಯಾದವ್ (12ಕ್ಕೆ 3) ಅವರ ಸ್ಪಿನ್ ದಾಳಿಗೆ ವಿಂಡೀಸ್ ಬಳಿ ಉತ್ತರ ಇರಲಿಲ್ಲ. ಶಿಮ್ರೊನ್ ಹೆಟ್ಮಯೆರ್ (56, 35 ಎ.) ಮಾತ್ರ ಅಲ್ಪ ಪ್ರತಿರೋಧ ಒಡ್ಡಿದರು.

ಶ್ರೇಯಸ್ ಆಸರೆ: ಮೊದಲು ಬ್ಯಾಟ್ ಮಾಡಿದ ಭಾರತ, ಶ್ರೇಯಸ್ ಅವರ (64; 40ಎ, 4X8, 6X2) ಅಮೋಘ ಬ್ಯಾಟಿಂಗ್ ಬಲದಿಂದ ಸವಾಲಿನ ಮೊತ್ತ ಪೇರಿಸಿತು.

ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಭಾರತ ಆರಂಭದಲ್ಲಿಯೇ ಆಘಾತ ಅನುಭವಿಸಿತು. ರೋಹಿತ್ ಶರ್ಮಾ ವಿಶ್ರಾಂತಿ ಪಡೆದಿದ್ದರಿಂದ ಇಶಾನ್ ಕಿಶನ್ ಮತ್ತು ಶ್ರೇಯಸ್ ಇನಿಂಗ್ಸ್ ಆರಂಭಿಸಿದರು.

ಐದನೇ ಓವರ್‌ನಲ್ಲಿ ಇಶಾನ್ (11 ರನ್) ಔಟಾದರು. ಈ ಹಂತದಲ್ಲಿ ಶ್ರೇಯಸ್ ಮತ್ತು ದೀಪಕ್ ಹೂಡಾ (38; 25ಎ) ಎರಡನೇ ವಿಕೆಟ್ ಜೊತೆಯಾಟದಲ್ಲಿ 76 ರನ್ ಸೇರಿಸಿದರು. ಇದರಿಂದಾಗಿ ತಂಡವು ನೂರರ ಗಡಿ ದಾಟಿತು.

ಆದರೆ ಇನಿಂಗ್ಸ್‌ನ ಕೊನೆಯ ಒಂಬತ್ತು ಓವರ್‌ಗಳಲ್ಲಿ ಭಾರತದ ಬ್ಯಾಟರ್‌ಗಳು ತುಸು ಅವಸರಪಟ್ಟು ವಿಕೆಟ್ ಕಳೆದುಕೊಂಡರು. ಶ್ರೇಯಸ್ ಮತ್ತು ದೀಪಕ್ ಔಟಾದ ನಂತರ ಹಾರ್ದಿಕ್ (28 ರನ್) ಅವರೊಬ್ಬರೇ ತುಸು ಹೋರಾಟ ತೋರಿದರು.

ಶನಿವಾರ ನಡೆದಿದ್ದ ನಾಲ್ಕನೇ ಪಂದ್ಯದಲ್ಲಿ ಭಾರತ ತಂಡವು 59 ರನ್‌ಗಳಿಂದ ವಿಂಡೀಸ್ ಬಳಗವನ್ನು ಮಣಿಸಿತ್ತು.

ಸಂಕ್ಷಿಪ್ತ ಸ್ಕೋರು: ಭಾರತ 20 ಓವರ್‌ಗಳಲ್ಲಿ 7ಕ್ಕೆ188 (ಶ್ರೇಯಸ್ ಅಯ್ಯರ್ 64, ದೀಪಕ್ ಹೂಡಾ 38, ಹಾರ್ದಿಕ್ ಪಾಂಡ್ಯ 28, ದಿನೇಶ್ ಕಾರ್ತಿಕ್ 12, ಒಡಿನ್ ಸ್ಮಿತ್ 33ಕ್ಕೆ3)



ರವಿ ಬಿಷ್ಣೋಯಿ– ಪಿಟಿಐ ಚಿತ್ರ

ವೆಸ್ಟ್ ಇಂಡೀಸ್ 15.4 ಓವರ್‌ಗಳಲ್ಲಿ 100 (ಶಿಮ್ರೊನ್ ಹೆಟ್ಮಯೆರ್ 56, ರವಿ ಬಿಷ್ಣೋಯಿ 16ಕ್ಕೆ 4, ಅಕ್ಷರ್ ಪಟೇಲ್ 15ಕ್ಕೆ 3, ಕುಲದೀಪ್ ಯಾದವ್ 12ಕ್ಕೆ 3) ಫಲಿತಾಂಶ: ಭಾರತಕ್ಕೆ 88 ರನ್ ಗೆಲುವು, ಸರಣಿಯಲ್ಲಿ 4–1 ಜಯ

ಮಂಗಳೂರು ಯುನೈಟೆಡ್‌ಗೆ 8 ವಿಕೆಟ್ ಜಯ

'ಸಮರ್ಥ' ಆಟಕ್ಕೆ ಒಲಿದ ಜಯ

• ಮೋಹನಕುಮಾರ್ ಸಿ

ಮುಖ್ಯಾಂಶಗಳು

- 'ಮಹಾರಾಜ ಟ್ರೋಫಿ' ಉದ್ಘಾಟನಾ ಪಂದ್ಯ
- ಆರ್.ಸಮರ್ಥ್ ಅಜೇಯ 57 ರನ್
- ಕಾಡಿದ ಮಳೆ: 18 ಓವರ್‌ಗೆ ಸೀಮಿತಗೊಂಡ ಪಂದ್ಯ

ಮೈಸೂರು: ಮಳೆ ಕಾಡಿದ ಪಂದ್ಯದಲ್ಲಿ ಮಿಂಚಿದ ನಾಯಕ ಆರ್.ಸಮರ್ಥ್ ಮಂಗಳೂರು ಯುನೈಟೆಡ್ ತಂಡಕ್ಕೆ ಚೊಚ್ಚಲ ಜಯದ ಕಾಣಿಕೆ ನೀಡಿದರು.

ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಭಾನುವಾರ ಆರಂಭವಾದ 'ಮಹಾರಾಜ ಟ್ರೋಫಿ' ಟ್ವೆಂಟಿ-20 ಕ್ರಿಕೆಟ್ ಟೂರ್ನಿಯ ಉದ್ಘಾಟನಾ ಪಂದ್ಯದಲ್ಲಿ ಮಂಗಳೂರು ತಂಡವು 8 ವಿಕೆಟ್‌ಗಳಿಂದ ಹುಬ್ಬಳ್ಳಿ ಟೈಗರ್ಸ್ ತಂಡವನ್ನು ಮಣಿಸಿತು.

ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಮಂಗಳೂರು ತಂಡಕ್ಕೆ ವೈಶಾಖ್ ವಿಜಯಕುಮಾರ್, ಎಚ್.ಎಸ್.ಶರತ್ ಅವರ ಶಿಸ್ತಿನ ಬೌಲಿಂಗ್ ದಾಳಿ ನಡೆಸಿ ತಲಾ ಎರಡು ವಿಕೆಟ್ ಉರುಳಿಸಿ ನೆರವಾದರು. ಹುಬ್ಬಳ್ಳಿ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 119 ರನ್ ಗಳಿಸಿತು. ಲಿಯಾನ್ ಖಾನ್ (34), ತುಷಾರ್ ಸಿಂಗ್ (34) ಅಮೋಘ ಬ್ಯಾಟಿಂಗ್ ಮಾಡಿದರು.

ಹುಬ್ಬಳ್ಳಿ ತಂಡದ ಇನಿಂಗ್ಸ್ ಮುಗಿದ ಸಂದರ್ಭದಲ್ಲಿ ಮಳೆ ಸುರಿಯಿತು. ಮಳೆ ನಿಂತ ಮೇಲೆ ಆರಂಭವಾದ ಪಂದ್ಯದಲ್ಲಿ ಮಂಗಳೂರಿಗೆ 18 ಓವರ್‌ಗಳಲ್ಲಿ 112 ರನ್ (ವಿಜೆಡಿ ನಿಯಮದಡಿ) ಗೆಲುವಿನ ಗುರಿ ನೀಡಲಾಯಿತು. ತಂಡವು 2 ವಿಕೆಟ್ ಕಳೆದುಕೊಂಡು 114 ರನ್ ಗಳಿಸಿ ಜಯಿಸಿತು. ಸಾಧಾರಣ ಗುರಿ ಬೆನ್ನಟ್ಟಿದ ಮಂಗ ಳೂರು ತಂಡ ಆರಂಭದಲ್ಲಿಯೇ ಆಘಾತ ಎದುರಿಸಿತು. ಫಾರೂಕಿ ಹಾಕಿದ ಮೂರನೇ ಓವರ್‌ನಲ್ಲಿ ಮ್ಯಾಕ್ ನೇಲ್ ಹಾಡ್ಲೀ ನೊರಾನ್ಹಾ (6 ರನ್) ಔಟಾದರು. ಆದರೆ ಇನ್ನೊಂದು ಬದಿಯಲ್ಲಿದ್ದ ಸಮರ್ಥ್ (57; 41ಎಸೆತ, 4X6, 6X2) ತಂಡವನ್ನು ಸಂಕಷ್ಟದಿಂದ ಪಾರು ಮಾಡಿದರು. ಅವರಿಗೆ ನಿಕಿನ್ ಜೋಸ್ (23) ಹಾಗೂ ಅಭಿನವ್ ಮನೋಹರ್ (25) ಕೂಡ ನೆರವಾದರು. ಹುಬ್ಬಳ್ಳಿ ತಂಡದ ನಾಯಕ ಅಭಿಮನ್ಯು ಮಿಥುನ್ ಹೊರತುಪಡಿಸಿ ವಿ.ಕೌಶಿಕ್, ಝಹೂರ್ ಫಾರೂಖಿ, ಎಂ.ಜಿ.ನವೀನ್ ಸೇರಿದಂತೆ ಎಲ್ಲ ಬೌಲರ್‌ಗಳನ್ನು ಆರ್.ಸಮರ್ಥ್ ದಂಡಿಸಿದರು.

ಇನ್ನೊಂದು ಪಂದ್ಯದಲ್ಲಿ ಮೈಸೂರು ವಾರಿಯರ್ಸ್ ತಂಡ 69 ರನ್‌ಗಳಿಂದ ಶಿವಮೊಗ್ಗ ಸ್ಟ್ರೈಕರ್ಸ್ ಅನ್ನು ಮಣಿಸಿತು.

ಸಂಕ್ಷಿಪ್ತ ಸ್ಕೋರ್: ಹುಬ್ಬಳ್ಳಿ ಟೈಗರ್ಸ್ 9ಕ್ಕೆ 119 (20 ಓವರ್‌ಗಳಲ್ಲಿ) ಲಿಯಾನ್ ಖಾನ್ 34, ತುಷಾರ್ ಸಿಂಗ್ 34, ಎಚ್.ಎಸ್.ಶರತ್ 17ಕ್ಕೆ 2, ವಿಜಯ್ ಕುಮಾರ್ ವೈಶಾಖ್ 23ಕ್ಕೆ 2

ಮಂಗಳೂರು ಯುನೈಟೆಡ್ 2ಕ್ಕೆ 114 (16 ಓವರ್‌ಗಳಲ್ಲಿ) ಆರ್. ಸಮರ್ಥ್ 57, ನಿಖಿನ್ ಜೋಸ್ 23, ಅಭಿನವ್ ಮನೋಹರ್ 25, ಮಿಥುನ್ 20ಕ್ಕೆ 1. ಫಲಿತಾಂಶ: ಮಂಗಳೂರು ಯುನೈಟೆಡ್‌ಗೆ 8 ವಿಕೆಟ್ ಗೆಲುವು



ಹುಬ್ಬಳ್ಳಿ ವಿರುದ್ಧ ಅಮೋಘ ಆಟವಾಡಿದ ಮಂಗಳೂರು ಯುನೈಟೆಡ್‌ನ ನಾಯಕ ಆರ್.ಸಮರ್ಥ್ ಬ್ಯಾಟಿಂಗ್ ವೈಖರಿ –ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಅಥ್ಲೆಟಿಕ್ ಕೂಟ: ಶುಲ್ಕ ಕೈಬಿಟ್ಟ ಕೆಎಎ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಮಂಗಳೂರು: ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಇದೇ 26ರಿಂದ 28ರವರೆಗೆ ನಡೆಯಲಿರುವ ರಾಜ್ಯ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳುವ ಕ್ರೀಡಾಪಟುಗಳಿಂದ ಪ್ರವೇಶ ಶುಲ್ಕ ಪಡೆಯುವ ನಿರ್ಧಾರವನ್ನು ಕರ್ನಾಟಕ ರಾಜ್ಯ ಅಥ್ಲೆಟಿಕ್ ಸಂಸ್ಥೆ ಕೈಬಿಟ್ಟಿದೆ.

ಭಾರತ ಅಥ್ಲೆಟಿಕ್ ಫೆಡರೇಷನ್ (ಎಎಫ್‌ಐ) ನಿರ್ದೇಶನದಂತೆ ಜೂನಿಯರ್ ಮತ್ತು ಸೀನಿಯರ್ ಅಥ್ಲೀಟ್‌ಗಳಿಂದ ಕ್ರಮವಾಗಿ ₹200 ಮತ್ತು ₹600 ಪಡೆಯಲು ನಿರ್ಧರಿಸಲಾಗಿತ್ತು.

ಇದಕ್ಕೆ ಕ್ರೀಡಾಪಟುಗಳಿಂದ, ಕೆಎಎ ಜಿಲ್ಲಾ ಘಟಕಗಳಿಂದ ಮತ್ತು ನೊಂದಾಯಿತ ಕ್ಲಬ್‌ಗಳಿಂದ ತೀವ್ರ ವಿರೋಧ ವ್ಯಕ್ತವಾಗಿತ್ತು. ಉತ್ತರ ಕರ್ನಾಟಕದ ಕೆಲವು ಘಟಕಗಳು ಕೂಟವನ್ನೇ ಬಹಿಷ್ಕರಿಸುವ ಎಚ್ಚರಿಕೆ ನೀಡಿದ್ದವು. ಈ ಕುರಿತು, 'ಅಥ್ಲೀಟ್‌ಗಳ ಹಾದಿಗೆ ಶುಲ್ಕದ ಹರ್ಡಲ್' ಎಂಬ ಶೀರ್ಷಿಕೆಯಲ್ಲಿ ಭಾನುವಾರ 'ಪ್ರಜಾವಾಣಿ' ವರದಿ ಪ್ರಕಟಿಸಿತ್ತು.

ಶುಲ್ಕ ಪಡೆಯದೇ ಇರುವ ನಿರ್ಧಾರವನ್ನು ಕೆಎಎ ಗೌರವ ಕಾರ್ಯದರ್ಶಿ ಎ.ರಾಜವೇಲು ತಿಳಿಸಿದರು.

'ಶುಲ್ಕದ ಬಗ್ಗೆ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಎಎಫ್‌ಐನ ಆನ್‌ಲೈನ್ ವ್ಯವಸ್ಥೆಯನ್ನು ನೋಡಿಕೊಳ್ಳುವ ಸ್ಪೋರ್ಟಿಂಗ್ ಇಂಡಿಯಾ ಕಂಪನಿಯವರ ಜೊತೆ ಮಾತುಕತೆ ನಡೆಯಿತು. ಎಲ್ಲವೂ ಆನ್‌ಲೈನ್‌ನಲ್ಲಿ ನಡೆಯುವುದರಿಂದ ಶುಲ್ಕ ಭರಿಸದೇ ಇದ್ದರೆ ಪ್ರವೇಶ ಪತ್ರ ಸಿಗುವುದಿಲ್ಲ. ಹೀಗಾಗಿ ಶುಲ್ಕವನ್ನು ಕೆಎಎ ಭರಿಸಿ ಅಥ್ಲೆಟಿಕ್ ಕೂಟವನ್ನು ನಡೆಸಲಿದೆ' ಎಂದು ರಾಜವೇಲು ತಿಳಿಸಿದರು.

ಫಿಡೆ ಉಪಾಧ್ಯಕ್ಷರಾಗಿ ಆನಂದ್

ಚೆನ್ನೈ (ಪಿಟಿಐ): ಭಾರತದ ಚೆಸ್ ದಂತಕತೆ ವಿಶ್ವನಾಥನ್ ಆನಂದ್ ಅವರು ಅಂತರರಾಷ್ಟ್ರೀಯ ಚೆಸ್ ಸಂಸ್ಥೆಯ (ಫಿಡೆ) ಉಪಾಧ್ಯಕ್ಷರಾಗಿ ಆಯ್ಕೆಯಾದರು. ರಷ್ಯಾದ ಅರ್ಕೇದಿ ದೊರ್ಕೊವಿಚ್ ಅಧ್ಯಕ್ಷರಾಗಿ ಇನ್ನೊಂದು ಅವಧಿಗೆ ಮರು ಆಯ್ಕೆಯಾದರು.

ಇಲ್ಲಿ ನಡೆಯುತ್ತಿರುವ 44ನೇ ಚೆಸ್ ಒಲಿಂಪಿಯಾಡ್‌ನ ಜತೆಯಲ್ಲೇ ಫಿಡೆ ವಾರ್ಷಿಕ ಮಹಾಸಭೆ ನಡೆಯಿತು.

ನೂತನ ಅಧ್ಯಕ್ಷರ ಆಯ್ಕೆಗೆ ಭಾನುವಾರ ನಡೆದ ಚುನಾವಣೆಯಲ್ಲಿ ದೊರ್ಕೊವಿಚ್ 157 ಮತಗಳನ್ನು ಪಡೆದರು. ಅವರ ಎದುರಾಳಿ ಆಂಡ್ರಿ ಬರಿಶ್‌ಪೊಲೆಟ್ಸ್ 16 ಮತಗಳನ್ನು ಗಳಿಸಿದರು.



ವಿಶ್ವನಾಥನ್ ಆನಂದ್

ತೈಲ ಮಾರಾಟ ಕಂಪನಿಗಳ ನಷ್ಟ ₹ 18,480 ಕೋಟಿ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳಿಗೆ ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಒಟ್ಟು ₹ 18,480 ಕೋಟಿ ನಷ್ಟವಾಗಿದೆ.

ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ), ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ (ಬಿಪಿಸಿಎಲ್) ಮತ್ತು ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ (ಎಚ್‌ಪಿಸಿಎಲ್) ಕಂಪನಿಗಳು ಜೂನ್ ತ್ರೈಮಾಸಿಕದಲ್ಲಿ ಒಟ್ಟು ₹ 10,700 ಕೋಟಿ ನಷ್ಟ ಅನುಭವಿಸಬಹುದು ಎಂದು ಐಸಿಐಸಿಐ ಸೆಕ್ಯುರಿಟೀಸ್ ಈ ಹಿಂದೆ ಅಂದಾಜು ಮಾಡಿತ್ತು. ಅಂದಾಜಿಗೆ ಹೋಲಿಸಿದರೆ ನಷ್ಟ ಹೆಚ್ಚಾಗಿದೆ.

ಏಪ್ರಿಲ್–ಜೂನ್ ಅವಧಿಯಲ್ಲಿ ಕಚ್ಚಾ ತೈಲ ದರ ಏರಿಕೆ ಆಗಿದ್ದರೂ, ಪೆಟ್ರೋಲ್ ಮತ್ತು ಡೀಸೆಲ್ ಮಾರಾಟ ದರ ಪರಿಷ್ಕರಣೆ ಮಾಡದೇ ಇರುವುದರಿಂದ ಕಂಪನಿಗಳಿಗೆ ನಷ್ಟವಾಗಿದೆ ಎಂದು ಕಂಪನಿಗಳು ತಮ್ಮ ತ್ರೈಮಾಸಿಕ ಫಲಿತಾಂಶದಲ್ಲಿ ಹೇಳಿಕೊಂಡಿವೆ.

ಬಿಪಿಸಿಎಲ್ ನಷ್ಟ ₹ 6,291 ಕೋಟಿ: ಏಪ್ರಿಲ್–ಜೂನ್ ಅವಧಿಯಲ್ಲಿ ಬಿಪಿಸಿಎಲ್ ₹ 6,291 ಕೋಟಿ ನಷ್ಟ ಅನುಭವಿಸಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹ 3,192 ಕೋಟಿ ಲಾಭ ಗಳಿಸಿತ್ತು.


ಆಕಾಸಾ ಏರ್ ಸೇವೆ ಆರಂಭ

ನವದೆಹಲಿ (ಪಿಟಿಐ): ಆಕಾಸಾ ಏರ್ ವಿಮಾನಯಾನ ಕಂಪನಿಯ ಮೊದಲ ಸೇವೆಯು ಮುಂಬೈ–ಅಹಮದಾಬಾದ್ ನಡುವೆ ಭಾನುವಾರ ಆರಂಭವಾಗಿದೆ.

ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರು ವಿಮಾನ ಸೇವೆಗೆ ವರ್ಚುವಲ್ ಆಗಿ ಚಾಲನೆ ನೀಡಿದರು.

ಕಂಪನಿಯು ಆಗಸ್ಟ್ 13ರಿಂದ ಬೆಂಗಳೂರು–ಕೊಚ್ಚಿ, ಆಗಸ್ಟ್ 19ರಿಂದ ಬೆಂಗಳೂರು–ಮುಂಬೈ ಹಾಗೂ ಸೆಪ್ಟೆಂಬರ್ 15ರಿಂದ ಚೆನ್ನೈ–ಮುಂಬೈ ಮಾರ್ಗದಲ್ಲಿ ಸೇವೆ ಆರಂಭಿಸಲು ನಿರ್ಧರಿಸಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹405
ಮೊಟ್ಟೆಗೆ	₹57
ಮೈಸೂರು	
100 ಮೊಟ್ಟೆಗೆ	₹405

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹160-515
ದ್ವಿತಳಿ (ಬಿ.ವಿ)	₹125-780

ತುರ್ತುನಿಧಿಗೆ ಉತ್ತಮ 'ಸ್ವೀಪ್ ಇನ್ ಎಫ್‌ಡಿ'



ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಜೀವನದಲ್ಲಿ ಅನಿರೀಕ್ಷಿತವಾಗಿ ಎದುರಾಗುವ ಹಣಕಾಸಿನ ತುರ್ತು ಸಂದರ್ಭಗಳನ್ನು ಎದುರಿಸಲು ನಮಗೆ 'ತುರ್ತು ನಿಧಿ' (Emergency Fund) ಅತ್ಯಗತ್ಯ. ಆಸ್ಪತ್ರೆ ವೆಚ್ಚಗಳು, ಉದ್ಯೋಗ ನಷ್ಟದ ಪರಿಣಾಮವನ್ನು ನಿಭಾಯಿಸುವುದು, ವೇತನ ಕಡಿತ... ಹೀಗೆ ಅನೇಕ ಸಂಕಷ್ಟದ ಸಂದರ್ಭಗಳಲ್ಲಿ ತುರ್ತು ನಿಧಿಯು ಆಪ್ತಮಿತ್ರನಂತೆ ಕಾಯುತ್ತದೆ. ಆದರೆ ತುರ್ತು ನಿಧಿಯ ಹಣವನ್ನು ಎಲ್ಲಿ ಇರಿಸಿಕೊಳ್ಳಬೇಕು ಎನ್ನುವ ಬಗ್ಗೆ ಹಲವರಲ್ಲಿ ಗೊಂದಲವಿದೆ. ತುರ್ತು ನಿಧಿ ಕಾಯ್ದಿರಿಸಿಕೊಳ್ಳಲು ಪರಿಗಣಿಸಬಹುದಾದ ಉತ್ತಮ ಆಯ್ಕೆಗಳಲ್ಲಿ 'ಸ್ವೀಪ್ ಇನ್ ಎಫ್‌ಡಿ' ಕೂಡ ಒಂದು.

ಸ್ವೀಪ್ ಇನ್ ಎಫ್‌ಡಿ ಅಂದರೆ ಏನು, ಈ ಸೇವೆ ಪಡೆಯಲು ಯಾರು ಅರ್ಹರು, ಅನುಕೂಲ ಪಡೆಯುವುದು ಹೇಗೆ ಎಂಬ ಬಗ್ಗೆ ಒಮ್ಮೆ ಗಮನ ಹರಿಸೋಣ.

ಏನಿದು ಸ್ವೀಪ್ ಇನ್ ಎಫ್‌ಡಿ?: ನಿಮ್ಮ ಉಳಿತಾಯ ಖಾತೆಯಲ್ಲಿರುವ ಹೆಚ್ಚುವರಿ ಹಣವನ್ನು ನಿಶ್ಚಿತ ಠೇವಣಿಯಾಗಿ (ಫಿಕ್ಸೆಡ್ ಡೆಪಾಸಿಟ್) ಸ್ವಯಂಚಾಲಿತವಾಗಿ ಪರಿವರ್ತಿಸುವ ವ್ಯವಸ್ಥೆಯೇ 'ಸ್ವೀಪ್ ಇನ್ ಎಫ್‌ಡಿ'. ಉಳಿತಾಯ ಖಾತೆ ಮತ್ತು ನಿಶ್ಚಿತ ಠೇವಣಿಯ ವೈಶಿಷ್ಟ್ಯಗಳನ್ನು ಇದು ಒಳಗೊಂಡಿದೆ. ನಿಮಗೆ ಬೇಕಾದಾಗ ದುಡ್ಡು ತೆಗೆಯುವ ಸೌಲಭ್ಯ ಕೊಡುವ ಜೊತೆಗೆ ಹೆಚ್ಚಿನ ಬಡ್ಡಿಯ ಲಾಭವನ್ನೂ ಸ್ವೀಪ್ ಇನ್ ಎಫ್‌ಡಿ ಕೊಡುತ್ತದೆ.

ಉದಾಹರಣೆಗೆ, ಶಂಕರ್ ಎನ್ನುವ ಸರ್ಕಾರಿ ಉದ್ಯೋಗಿ ಖಾಸಗಿ ಬ್ಯಾಂಕ್ ಒಂದರಲ್ಲಿ ಉಳಿತಾಯ ಖಾತೆ ಹೊಂದಿದ್ದು ಅದನ್ನು ಎರಡು ವರ್ಷಗಳ ಅವಧಿಗೆ ಸ್ವೀಪ್ ಇನ್ ಎಫ್‌ಡಿ ಜೊತೆ ಜೋಡಣೆ ಮಾಡಿದ್ದಾರೆ ಎಂದುಕೊಳ್ಳಿ. ತಮ್ಮ ಉಳಿತಾಯ ಖಾತೆಯಲ್ಲಿ ಇರಬೇಕಾದ ಕನಿಷ್ಠ ಮೊತ್ತದ ಮಿತಿಯನ್ನು ₹ 40 ಸಾವಿರಕ್ಕೆ ನಿಗದಿಪಡಿಸಿದ್ದಾರೆ ಎಂದು ಭಾವಿಸಿ. ಶಂಕರ್ ಖಾತೆಗೆ ಬೋನಸ್ ರೂಪದಲ್ಲಿ ₹ 40 ಸಾವಿರ ಸಂದಾಯವಾಗುತ್ತದೆ ಎಂದುಕೊಳ್ಳಿ. ಶಂಕರ್ ಖಾತೆಯಲ್ಲಿರುವ ಒಟ್ಟು ಮೊತ್ತ ₹ 80 ಸಾವಿರವಾಗಿದ್ದು ನಿಗದಿಪಡಿಸಿದ ಮಿತಿಗಿಂತ ₹40 ಸಾವಿರ ಹೆಚ್ಚಿಗೆ ಇದೆ. ಇಂತಹ ಸಂದರ್ಭದಲ್ಲಿ ₹ 40 ಸಾವಿರ ಸ್ವಯಂಚಾಲಿತವಾಗಿ ಸ್ವೀಪ್ ಇನ್ ಎಫ್‌ಡಿಗೆ ವರ್ಗಾವಣೆಗೊಳ್ಳುತ್ತದೆ.

ಲಾಭಗಳು: 'ಸ್ವೀಪ್ ಇನ್ ಎಫ್‌ಡಿ'ಯಲ್ಲಿ ಉಳಿತಾಯ ಖಾತೆಗಿಂತ ಹೆಚ್ಚಿನ ಬಡ್ಡಿ ಲಭಿಸುತ್ತದೆ. ಜೊತೆಗೆ ಸ್ವೀಪ್ ಇನ್ ಎಫ್‌ಡಿಯಲ್ಲಿ ಇರುವ ಹಣವನ್ನು ತುರ್ತು ಸಂದರ್ಭಗಳಲ್ಲಿ ಹಿಂಪಡೆದರೆ ಯಾವುದೇ ಶುಲ್ಕ ಕಟ್ಟಬೇಕಿಲ್ಲ. ಇನ್ನೊಂದು ಅನುಕೂಲ ಏನೆಂದರೆ, ನಿಮ್ಮ ಸಾಲದ ಇಎಂಐ ಪಾವತಿಸುವ ದಿನ ಉಳಿತಾಯ ಖಾತೆಯಲ್ಲಿ ಒಂದೊಮ್ಮೆ ಅಗತ್ಯ ಮೊತ್ತ ಇರದಿದ್ದರೆ, ಸ್ವೀಪ್ ಇನ್ ಎಫ್‌ಡಿ ಅಡಿಯಲ್ಲಿ ಇರುವ ಹಣವನ್ನು ಬ್ಯಾಂಕ್ ಸುಲಭವಾಗಿ ವರ್ಗಾಯಿಸುತ್ತದೆ. ಇದರಿಂದಾಗಿ ಇಎಂಐ ಪಾವತಿಸದೆ ಉಂಟಾಗುವ ತಾಪತ್ರಯ ತಪ್ಪುತ್ತದೆ.

ಚೆಕ್ ಬೌನ್ಸ್ ಆಗುವ ಸಮಸ್ಯೆಯೂ ಇಲ್ಲವಾಗುತ್ತದೆ. ಬಹುಪಾಲು ಬ್ಯಾಂಕ್‌ಗಳು ಸ್ವೀಪ್ ಇನ್ ಎಫ್‌ಡಿಯನ್ನು ಪರಿಚಯಿಸಿದ್ದು ಅದು ಜನಪ್ರಿಯ ಆಗುತ್ತಿದೆ ಕೂಡ. ಸ್ವೀಪ್ ಇನ್ ಎಫ್‌ಡಿಗೆ ನೀಡುವ ಬಡ್ಡಿದರ ಸಾಮಾನ್ಯ ಎಫ್‌ಡಿ ಬಡ್ಡಿ ದರದಷ್ಟೇ ಇರುತ್ತದೆ. ಆದರೆ ಖಾತೆಯಲ್ಲಿ ಎಷ್ಟು ಮೊತ್ತವನ್ನು ಎಷ್ಟು ದಿನ ಇರಿಸಿದ್ದೀರಿ ಎನ್ನುವುದರ ಆಧಾರದ ಮೇಲೆ ಬಡ್ಡಿ ದರ ನಿಗದಿಯಾಗುತ್ತದೆ.

ನೆಟ್ ಬ್ಯಾಂಕಿಂಗ್ ಮೂಲಕ ಅಥವಾ ನೇರವಾಗಿ ಬ್ಯಾಂಕ್ ಶಾಖೆಗೆ ತೆರಳಿ ಸ್ವೀಪ್ ಇನ್ ಎಫ್‌ಡಿ ಖಾತೆ ಪ್ರಾರಂಭಿಸಬಹುದು. ಬ್ಯಾಂಕಿನಿಂದ ಬ್ಯಾಂಕಿಗೆ ಸ್ವೀಪ್ ಇನ್ ಎಫ್‌ಡಿ ನಿಯಮಗಳಲ್ಲಿ ಕೆಲವು ಬದಲಾವಣೆಗಳು ಇರುತ್ತವೆ, ಅವನ್ನು ಗಮನಿಸಿಕೊಂಡು ಮುಂದುವರಿಯಬೇಕು.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

ವಿದೇಶಿ ಹೂಡಿಕೆದಾರರ ಉತ್ಸಾಹ



ಆಗಸ್ಟ್ 5ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಉತ್ತಮ ಗಳಿಕೆ ಕಂಡಿವೆ. 58,387 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇಕಡ 1.42ರಷ್ಟು ಜಿಗಿದಿದೆ. 17,397 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 1.39ರಷ್ಟು ಹೆಚ್ಚಳ ಕಂಡಿದೆ. ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಸಕಾರಾತ್ಮಕತೆ, ತ್ರೈಮಾಸಿಕ ಫಲಿತಾಂಶಗಳಲ್ಲಿ ಕಂಪನಿಗಳ ಉತ್ತಮ ಸಾಧನೆ, ವಾಹನ ಮಾರಾಟದಲ್ಲಿ ಹೆಚ್ಚಳ, ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಷೇರುಗಳ ಖರೀದಿ ಸೇರಿದಂತೆ ಹಲವು ಅಂಶಗಳು ಜಿಗಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ಬಿಎಸ್‌ಇ ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 3ರಷ್ಟು ಜಿಗಿದಿದೆ, ಬಿಎಸ್‌ಇ ಪವರ್ ಸೂಚ್ಯಂಕ ಶೇ 2.87ರಷ್ಟು ಹೆಚ್ಚಳವಾಗಿದೆ. ವಾಹನ ಸೂಚ್ಯಂಕ ಶೇ 2.22ರಷ್ಟು ಸುಧಾರಿಸಿದೆ. ಆದರೆ ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 3ರಷ್ಟು ಕುಸಿದಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ವಾರದ ಅವಧಿಯಲ್ಲಿ ₹ 6,991.54 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹ 1,765.59 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಏರಿಕೆ–ಇಳಿಕೆ: ಬಿಎಸ್‌ಇ ಲಾರ್ಜ್ ಕ್ಯಾಪ್ ಸೂಚ್ಯಂಕ ಶೇ 1.4ರಷ್ಟು ಗಳಿಸಿಕೊಂಡಿದೆ. ಪಿಬಿ ಫಿನ್‌ಟೆಕ್, ಪೇಟಿಎಂ, ಇಂಟರ್ ಗ್ಲೋಬ್ ಏವಿಯೇಷನ್ ಶೇ 11ರಿಂದ ಶೇ 21ರಷ್ಟು ಗಳಿಸಿಕೊಂಡಿವೆ. ಇಂಡಸ್ ಟವರ್ಸ್, ಗೇಲ್ ಇಂಡಿಯಾ, ಬ್ರಿಟಾನಿಯಾ ಇಂಡಸ್ಟ್ರೀಸ್, ಸ್ಟಾರ್ ಹೆಲ್ತ್ ಮತ್ತು ಡಿಎಲ್‌ಎಫ್ ಕುಸಿದಿವೆ.

ಮಿಡ್ ಕ್ಯಾಪ್ ಸೂಚ್ಯಂಕ ಶೇ 1.7ರಷ್ಟು ಹೆಚ್ಚಳ ದಾಖಲಿಸಿದೆ. ನೆರೋಲ್ಯಾಕ್ ಪೇಂಟ್ಸ್, ಜೆಎಸ್‌ಡಬ್ಲ್ಯು ಎನರ್ಜಿ, ಐಡಿಬಿಐ ಬ್ಯಾಂಕ್, ಚೋಳಮಂಡಲಂ ಇನ್ವೆಸ್ಟ್‌ಮೆಂಟ್ ಆ್ಯಂಡ್ ಫೈನಾನ್ಸ್ ಕಂಪನಿ ಮತ್ತು ನ್ಯಾಟ್ಕೋ ಫಾರ್ಮಾ ಶೇ 10ರಿಂದ ಶೇ 24ರವರೆಗೆ ಜಿಗಿದಿವೆ. ಗೋದ್ರೇಜ್ ಪ್ರಾಪರ್ಟೀಸ್, ಬಾಲಕೃಷ್ಣ ಇಂಡಸ್ಟ್ರೀಸ್, ಕ್ರಾಂಪ್ಟನ್ ಗ್ರೀವ್ಸ್, ಮ್ಯಾಕ್ಸ್ ಫೈನಾನ್ಶಿಯಲ್ ಸರ್ವಿಸಸ್, ಕುಮಿನ್ಸ್ ಮತ್ತು ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ಇಳಿಕೆಯಾಗಿವೆ.

ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 2ರಷ್ಟು ಜಿಗಿದಿದೆ. ಸಬೆಕ್ಸ್, ಸ್ಪೈಸ್ ಜೆಟ್, ನಜಾರಾ ಟೆಕ್ನಾಲಜೀಸ್, ಜಯಪ್ರಕಾಶ್ ಪವರ್ ವೆಂಚರ್ಸ್, ನವನೀತ್ ಎಜುಕೇಷನ್ ಹೆಚ್ಚಳ ದಾಖಲಿಸಿವೆ. ಬಿರ್ಲಾ ಟೈರ್ಸ್, ಫ್ಯೂಚರ್ ಎಂಟರ್‌ಪ್ರೈಸಸ್, ಬ್ರೈಟ್ ಕಾಮ್ ಗ್ರೂಪ್, ಫ್ಯೂಚರ್ ರಿಟೇಲ್, ಕೆಬಿಸಿ ಗ್ಲೋಬಲ್ ಮತ್ತು ನ್ಯೂಲ್ಯಾಂಡ್ ಲ್ಯಾಬೊರೇಟರಿಸ್ ಕುಸಿದಿವೆ.

ಮುನ್ನೋಟ: ಈ ವಾರ ಭಾರ್ತಿ ಏರ್‌ಟೆಲ್, ಡಿಶ್ ಟಿವಿ, ಅದಾನಿ ಪೋರ್ಟ್ಸ್, ಸೇಂಟ್ ಗೊಬೇನ್, ಡೆಲಿವರಿ, ಎಂಡೂರೆನ್ಸ್ ಟೆಕ್ನಾಲಜೀಸ್, ಎನ್‌ಸಿಸಿ, ಮದರ್ ಸನ್ ಸುಮಿ ಸಿಸ್ಟಮ್ಸ್, ಜೆಕೆ ಟೈರ್ಸ್, ಧನಲಕ್ಷ್ಮೀ ಬ್ಯಾಂಕ್, ಟಾಟಾ ಕೆಮಿಕಲ್ಸ್, ಡೆಲ್ಟಾ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ. ಜಾಗತಿಕ ವಿದ್ಯಮಾನಗಳ ಜೊತೆ ದೇಶಿಯ ಬೆಳವಣಿಗೆಗಳು ಷೇರುಪೇಟೆ ಸೂಚ್ಯಂಕಗಳ ಗತಿ ನಿರ್ಧರಿಸಲಿವೆ.

ಶುಲ್ಕ ಪರಿಷ್ಕರಣೆ ಅಗತ್ಯ: ವಿಐಎಲ್

ನವದೆಹಲಿ (ಪಿಟಿಐ): ಮೊಬೈಲ್ ಸೇವಾ ಶುಲ್ಕಗಳನ್ನು ಕಾಲಕಾಲಕ್ಕೆ ಪರಿಷ್ಕರಿಸುವ ಅಗತ್ಯವಿದೆ ಎಂದು ವೊಡಾಫೋನ್ ಐಡಿಯಾ ಕಂಪನಿ ಹೇಳಿದೆ.

'ವಿಶ್ವದಲ್ಲಿ ಅತ್ಯಂತ ಕಡಿಮೆ ಶುಲ್ಕ ಇರುವುದು ಭಾರತದಲ್ಲಿ. ಆದರೆ, ಅನಿಯಮಿತ ಡೇಟಾ ಸೌಲಭ್ಯದ ಕಾರಣದಿಂದಾಗಿ ಅತಿಹೆಚ್ಚು ತಲಾವಾರು ಡೇಟಾ ಬಳಕೆ ಇರುವುದು ಕೂಡ ಭಾರತದಲ್ಲಿಯೇ' ಎಂದು ಕಂಪನಿಯು ವಾರ್ಷಿಕ ವರದಿಯಲ್ಲಿ ಹೇಳಿದೆ.

'ದೂರಸಂಪರ್ಕ ಉದ್ಯಮವು ಕಾಲಕಾಲಕ್ಕೆ ಸೇವಾ ಶುಲ್ಕವನ್ನು ಜಾಸ್ತಿ ಮಾಡಬೇಕು. ಕಂಪನಿಗಳು ಹೂಡಿಕೆ ಮಾಡಿರುವ ಮೊತ್ತಕ್ಕೆ ಪ್ರತಿಯಾಗಿ ಒಳ್ಳೆಯ ಫಲ ಸಿಗಬೇಕು ಎಂದಾದರೆ, ಭವಿಷ್ಯದಲ್ಲಿ ಹೂಡಿಕೆಗಳಿಗೆ ನೆರವಾಗಬೇಕು ಎಂದಾದರೆ ಇದು ಅಗತ್ಯ' ಎಂದು ಕಂಪನಿಯು ಹೇಳಿದೆ.

ಸಿಎಸ್‌ಐಆರ್: ಮಹಾ ನಿರ್ದೇಶಕಿ ಕಲೈಸೆಲ್ವಿ



ಕಲೈಸೆಲ್ವಿ

ನವದೆಹಲಿ (ಪಿಟಿಐ): ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿಯ (ಸಿಎಸ್‌ಐಆರ್) ಮೊಟ್ಟ ಮೊದಲ ಮಹಿಳಾ ಮಹಾ ನಿರ್ದೇಶಕಿಯಾಗಿ ಹಿರಿಯ ವಿಜ್ಞಾನಿ ನಲ್ಲಥಂಬಿ ಕಲೈಸೆಲ್ವಿ ನೇಮಕಗೊಂಡಿದ್ದಾರೆ. ಸಿಎಸ್‌ಐಆರ್ ದೇಶದಾದ್ಯಂತ ಇರುವ 38 ಸಂಶೋಧನಾ ಸಂಸ್ಥೆಗಳನ್ನು ಒಳಗೊಂಡ ಒಕ್ಕೂಟವಾಗಿದೆ.

ಅಧಿಕಾರ ವಹಿಸಿಕೊಂಡ ದಿನದಿಂದ 2 ವರ್ಷಗಳ ಅವಧಿಗೆ ಕಲೈಸೆಲ್ವಿ ಅವರು ಅಧಿಕಾರದಲ್ಲಿ ಇರಲಿದ್ದಾರೆ ಎಂದು ಸಿಬ್ಬಂದಿ ಸಚಿವಾಲಯ ಶನಿವಾರ ಆದೇಶ ಹೊರಡಿಸಿದೆ.

ತಮಿಳುನಾಡಿನ ತಿರುನೆಲ್ವೇಲಿ ಮೂಲದ ಅವರು ಸದ್ಯ ತಮಿಳುನಾಡಿನ ಕರೈಕುಡಿಯಲ್ಲಿರುವ ಸಿಎಸ್‌ಐಆರ್ ನಿರ್ದೇಶಕಿ ಮತ್ತು ಐಎಸ್‌ಐಆರ್ ಇಲಾಖೆಯ ಕಾರ್ಯದರ್ಶಿಯೂ ಆಗಿರಲಿದ್ದಾರೆ.


ಸಚಿವ ನಿಶಾದ್‌ಗೆ ಜಾಮೀನು ರಹಿತ ವಾರಂಟ್

ಪ್ರಜಾವಾಣಿ ವಾರ್ತೆ

ಲಖನೌ: ಯೋಗಿ ಆದಿತ್ಯನಾಥ ಸರ್ಕಾರದ ಸಂಪುಟ ದರ್ಜೆ ಸಚಿವ, ಬಿಜೆಪಿ ಮಿತ್ರ ಪಕ್ಷ ನಿಶಾದ್ ಪಾರ್ಟಿಯ ಅಧ್ಯಕ್ಷರೂ ಆದ ಸಚಿವ ಸಂಜಯ್ ನಿಶಾದ್ ವಿರುದ್ಧ ಜಾಮೀನು ರಹಿತ ವಾರಂಟ್ ಜಾರಿಗೊಳಿಸಿರುವ ಗೋರಖಪುರ ನ್ಯಾಯಾಲಯ, ಅವರನ್ನು ಬಂಧಿಸಿ ನ್ಯಾಯಾಲಯದ ಎದುರು ಹಾಜರುಪಡಿಸುವಂತೆ ಆದೇಶಿಸಿದೆ.

ಏಳು ವರ್ಷಗಳ ಹಿಂದೆ ನಿಶಾದ್ ವಿರುದ್ಧ ದಾಖಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಹಲವು ಬಾರಿ ಸಮನ್ಸ್ ಜಾರಿ ಮಾಡಿದರೂ ನ್ಯಾಯಾಲಯಕ್ಕೆ ಹಾಜರಾಗಲು ವಿಫಲವಾದ ಕಾರಣ ಸಿಜೆಎಂ ಜಗನ್ನಾಥ್ ಅವರು ಜಾಮೀನು ರಹಿತ ವಾರಂಟ್ ಜಾರಿ ಮಾಡಿದ್ದಾರೆ.

ಸಮುದಾಯದ ಮೀಸಲಾತಿಗೆ ಒತ್ತಾಯಿಸಿ ರೈಲ್ವೆ ಹಳಿಗಳ ಮೇಲೆ ಧರಣಿ ನಡೆಸುತ್ತಿದ್ದ ವೇಳೆ ನಿಶಾದ್ ಮತ್ತು ಪೊಲೀಸರ ನಡುವೆ ಹಿಂಸಾಚಾರ ಮತ್ತು ಘರ್ಷಣೆ ಉಂಟಾಗಿತ್ತು. 2015ರಲ್ಲಿ ನಡೆದ ಪ್ರತಿಭಟನೆ ವೇಳೆ ಪೊಲೀಸರು ಪ್ರತಿಭಟನಕಾರರ ಮೇಲೆ ಗುಂಡಿನ ದಾಳಿ ನಡೆಸಿದ್ದರಿಂದ ಒಬ್ಬರು ಸಾವನ್ನಪ್ಪಿದ್ದರು. ಗೋರಖಪುರ ಜಿಲ್ಲೆಯ ಸಹಜನ್ವಾನ್ ಪೊಲೀಸ್ ಠಾಣೆಯಲ್ಲಿ ನಿಶಾದ್ ಸೇರಿದಂತೆ 36 ಮಂದಿ ವಿರುದ್ಧ ಪ್ರಕರಣ ದಾಖಲಾಗಿತ್ತು.


1. ಭಾರತದ ಅಮಿತ್ ಫಂಘಾಲ್ ಮತ್ತು ಇಂಗ್ಲೆಂಡ್‌ನ ಕೈರನ್ ನಡುವಣ ಸೆಣಸಾಟ. 2. ಟ್ರಿಪಲ್ ಜಂಪ್‌ನಲ್ಲಿ ಚಿನ್ನಕ್ಕಾಗಿ ಎಲ್ಡೊಸಾ ಪೌಲ್ ಜಿಗಿದರು. 3. ಭಾರತದ ನಿಖತ್ ಜರೀನ್ (ಬಲ) ಎದುರಾಳಿಗೆ ಪಂಚ್ ನೀಡಿದ ರೀತಿ– ಪಿಟಿಐ/ಎಎಫ್‌ಪಿ ಚಿತ್ರಗಳು

ಟ್ರಿಪಲ್ ಜಂಪ್ ದಾಖಲೆ; ಮಿನುಗಿದ ಬಾಕ್ಸರ್‌ಗಳು

ಅಥ್ಲೆಟಿಕ್ಸ್; ಎಲ್ಡೊಸಾ, ಅಬೂಬಕ್ಕರ್ ಮಿಂಚು

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ಅಥ್ಲೆಟಿಕ್ಸ್‌ಗೆ ಭಾನುವಾರ ಐತಿಹಾಸಿಕ ದಿನವಾಗಿ ಮಾರ್ಪಟ್ಟಿತು. ಬರ್ಮಿಂಗ್‌ಹ್ಯಾಮ್‌ನ ಅಲೆಕ್ಸಾಂಡರ್ ಕ್ರೀಡಾಂಗಣದ ಟ್ರ್ಯಾಕ್‌ನಲ್ಲಿ ಮಿಂಚು ಹರಿಸಿದ ಎಲ್ಡೊಸಾ ಪಾಲ್ ಮತ್ತು ಅಬ್ದುಲ್ಲಾ ಅಬೂಬಕ್ಕರ್ ಅವರು ಟ್ರಿಪಲ್ ಜಂಪ್‌ನಲ್ಲಿ ಕ್ರಮವಾಗಿ ಚಿನ್ನ ಹಾಗೂ ಬೆಳ್ಳಿ ಗೆದ್ದರು.

ಈ ಹಿಂದಿನ ಕಾಮನ್‌ವೆಲ್ತ್ ಕೂಟಗಳಲ್ಲಿ ಭಾರತ ಟ್ರಿಪಲ್ ಜಂಪ್‌ನಲ್ಲಿ ನಾಲ್ಕು ಪದಕ ಜಯಿಸಿತ್ತು. ಆದರೆ ಭಾರತದ ಇಬ್ಬರು ಅಥ್ಲೀಟ್‌ಗಳು ಮೊದಲ ಎರಡೂ ಸ್ಥಾನಗಳನ್ನು ಪಡೆದುಕೊಂಡದ್ದು ಇದೇ ಮೊದಲು.

ಭಾನುವಾರ ಇತರ ಸ್ಪರ್ಧೆಗಳಲ್ಲಿ ಎರಡು ಕಂಚುಗಳನ್ನು ಬಗಲಿಗೆ ಹಾಕಿಕೊಂಡ ಭಾರತದ ಅಥ್ಲೀಟ್‌ಗಳು, ಟ್ರ್ಯಾಕ್ ಮತ್ತು ಫೀಲ್ಡ್ ಸ್ಪರ್ಧೆಯಲ್ಲಿ ಒಂದೇ ದಿನ ನಾಲ್ಕು ಪದಕ ಗೆದ್ದ ಸಾಧನೆ ಮಾಡಿದರು.ಎಲ್ಡೊಸಾ ತಮ್ಮ ಮೂರನೇ ಪ್ರಯತ್ನದಲ್ಲಿ 17.03 ಮೀ. ಸಾಧನೆಯೊಂದಿಗೆ ಅಗ್ರಸ್ಥಾನ ಪಡೆದರೆ, ಅಬೂಬಕ್ಕರ್ 17.02 ಮೀ. ದೂರ ಜಿಗಿದು ಎರಡನೇ ಸ್ಥಾನ ಗಳಿಸಿದರು. ಅವರು ಐದನೇ ಪ್ರಯತ್ನದಲ್ಲಿ ಈ ಸಾಧನೆ ಮಾಡಿದರು. ಬರ್ಮುಡಾ ದೇಶದ ಜಾ–ನಲ್ ಪೆರಿನ್‌ಚೆಫ್ (16.92 ಮೀ.) ಕಂಚು ಪಡೆದರು.

ಈ ಹಿಂದೆ ಮೊಹಿಂದರ್ ಸಿಂಗ್ ಗಿಲ್ ಅವರು 1970 ಮತ್ತು 1974 ರಲ್ಲಿ ಕ್ರಮವಾಗಿ ಕಂಚು ಹಾಗೂ ಬೆಳ್ಳಿ ಗೆದ್ದಿದ್ದರು. ರೆಂಜಿತ್ ಮಹೇಶ್ವರಿ ಹಾಗೂ ಅರ್ಪಿಂದರ್ ಸಿಂಗ್ ಅವರು 2010, 2014 ರಲ್ಲಿ ಮೂರನೇ ಸ್ಥಾನ ಗಳಿಸಿದ್ದರು. ಅನುರಾಣಿ ಅವರು ಜಾವೆಲಿನ್ ಥ್ರೋನಲ್ಲಿ ಕಂಚು ಗೆದ್ದು ಐತಿಹಾಸಿಕ ಸಾಧನೆ ಮಾಡಿದರು. ಕಾಮನ್‌ವೆಲ್ತ್ ಕೂಟದ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಪದಕ ಗೆದ್ದ ಭಾರತದ ಮೊದಲ ಮಹಿಳಾ ಅಥ್ಲೀಟ್ ಎಂಬ ಹಿರಿಮೆ ತಮ್ಮದಾಗಿಸಿಕೊಂಡರು.


ರಾಣಿ ಅವರು 60 ಮೀ. ಸಾಧನೆ ಮಾಡಿದರು. ತಮ್ಮ ನಾಲ್ಕನೇ ಪ್ರಯತ್ನದಲ್ಲಿ ಈ ದೂರವನ್ನು ಕಂಡುಕೊಂಡರು.

ಪುರುಷರ ವಿಭಾಗದಲ್ಲಿ ಭಾರತ ಈ ಹಿಂದೆ ಪದಕ ಜಯಿಸಿತ್ತು. ಕಾಶಿನಾಥ್ ನಾಯ್ಕ್ ಅವರು 2010ರ ಕೂಟದಲ್ಲಿ ಕಂಚು ಹಾಗೂ ನೀರಜ್ ಚೋಪ್ರಾ 2018ರ ಕೂಟದಲ್ಲಿ ಚಿನ್ನ ಗೆದ್ದಿದ್ದರು.

ಸಂದೀಪ್‌ಗೆ ಕಂಚು: ಭಾರತದ ಸಂದೀಪ್ ಕುಮಾರ್, ಪುರುಷರ 10,000 ಮೀ. ನಡಿಗೆಯಲ್ಲಿ ಮೂರನೇ ಸ್ಥಾನ ಪಡೆದು ಕಂಚು ಜಯಿಸಿದರು. ಅವರು 38 ನಿ. 49.21 ಸೆ.ಗಳಲ್ಲಿ ಗುರಿ ತಲುಪಿದರು. ಭಾರತದ ಇನ್ನೊಬ್ಬ ಸ್ಪರ್ಧಿ ಅಮಿತ್ ಖತ್ರಿ 43 ನಿ. 4.97 ಸೆ.ಗಳಲ್ಲಿ ಗುರಿ ತಲುಪಿ ಒಂಬತ್ತನೇ ಸ್ಥಾನ ಪಡೆದರು.

ಪದಕ ಪಟ್ಟಿ

ಸ್ಥಾನ	ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
1	ಆಸ್ಟ್ರೇಲಿಯಾ	63	52	52	167
2	ಇಂಗ್ಲೆಂಡ್	54	58	51	163
3	ಕೆನಡಾ	23	31	33	87
4	ನ್ಯೂಜಿಲೆಂಡ್	18	12	17	47
5	ಭಾರತ	17	13	20	50
6	ಸ್ಕಾಟ್ಲೆಂಡ್	11	10	25	46



ಅಬೂಬಕ್ಕರ್ –ಎಎಫ್‌ಪಿ ಚಿತ್ರ

ಭಾರತದ ಸ್ಪರ್ಧೆಗಳು ಇಂದು

ಬ್ಯಾಡ್ಮಿಂಟನ್ ಫೈನಲ್	
ಮಹಿಳಾ ಸಿಂಗಲ್ಸ್ (ಪಿ.ವಿ. ಸಿಂಧು)	ಮಧ್ಯಾಹ್ನ 1.20
ಪುರುಷರ ಸಿಂಗಲ್ಸ್ ಲಕ್ಷ್ಯಸೇನ್)	ಮಧ್ಯಾಹ್ನ 2.10
ಪುರುಷರ ಡಬಲ್ಸ್ (ಸಾತ್ವಿಕ್ ಸಾಯಿರಾಜ್/ಚಿರಾಗ್ ಶೆಟ್ಟಿ)	ಮಧ್ಯಾಹ್ನ 3
ಹಾಕಿ ಫೈನಲ್	
ಭಾರತ– ಆಸ್ಟ್ರೇಲಿಯಾ	ಸಂಜೆ 5
ಟೇಬಲ್ ಟೆನಿಸ್	
ಕಂಚಿನ ಪದಕ: ಜಿ ಸತ್ಯನ್	ಮಧ್ಯಾಹ್ನ 3.35
ಫೈನಲ್: ಅಚಂತ ಶರತ್ ಕಮಲ್	ಸಂಜೆ 4.25
ಸಮಾರೋಪ ಸಮಾರಂಭ, ರಾತ್ರಿ 12	
ನೇರಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್	

ಅಮಿತ್ ಪಂಘಾಲ್, ನೀತು, ನಿಖತ್ ‘ತಾಕತ್’

ಬರ್ಮಿಂಗ್‌ಹ್ಯಾಮ್ (ಪಿಟಿಐ): ಎದುರಾಳಿಗಳಿಗೆ ಭಾರಿ ಸೋಲಿನ ಪಂಚ್ ನೀಡಿದ ಅಮಿತ್ ಪಂಘಾಲ್, ನಿಖತ್ ಜರೀನ್ ಮತ್ತು ನೀತು ಗಂಗಾಸ್ ಕಾಮನ್‌ವೆಲ್ತ್ ಕ್ರೀಡಾಕೂಟದ ಬಾಕ್ಸಿಂಗ್ ಸ್ಪರ್ಧೆಯಲ್ಲಿ ಚಿನ್ನದ ಪದಕಗಳಿಗೆ ಮುತ್ತಿಟ್ಟರು.

ಭಾನುವಾರ ನಡೆದ ಪುರುಷರ 51 ಕೆಜಿ ವಿಭಾಗದ ಫೈನಲ್‌ನಲ್ಲಿ ಅಮಿತ್ 5-0ಯಿಂದ ಇಂಗ್ಲೆಂಡ್‌ನ ಕೈರನ್ ಮೆಕ್‌ಡೊನಾಲ್ಡ್ ಅವರನ್ನು ಸೋಲಿಸಿದರು. ಮಹಿಳೆಯರ 48 ಕೆಜಿ ವಿಭಾಗದಲ್ಲಿ ನೀತು 5-0ಯಿಂದ ಇಂಗ್ಲೆಂಡ್‌ನ ಡೆಮಿ ಜೇಡ್ ರೆಸ್ತಾನ್ ಅವರನ್ನು ಮಣಿಸಿದರು.

ಮಹಿಳೆಯರ 50 ಕೆಜಿ ವಿಭಾಗದ ಚಿನ್ನದ ಪದಕದ ಸುತ್ತಿನಲ್ಲಿ ನಿಖತ್ ಕೂಡ 5–0ಯಿಂದ ನಾರ್ದರ್ನ್ ಐರ್ಲೆಂಡ್‌ನ ಕ್ಯಾರ್ಲಿ ಮೆಕ್ ನಾಲ್ ಅವರನ್ನು ಸೋಲಿಸಿದರು. ನಿಖತ್ ಈ ಕೂಟದಲ್ಲಿ ಮೊದಲ ಬಾರಿ ಸ್ಪರ್ಧಿಸಿದ್ದರು.

ಕಳೆದ ಆವೃತ್ತಿಯಲ್ಲಿ ಬೆಳ್ಳಿ ಜಯಿಸಿದ್ದ ಅಮಿತ್ ಇಲ್ಲಿ ತಮ್ಮ ಸಾಧನೆ ಉತ್ತಮಪಡಿಸಿಕೊಂಡರು. ಗೋಲ್ಡ್‌ಕೋಸ್ಟ್‌ನಲ್ಲಿ ನಡೆದಿದ್ದ ಆ ಕೂಟದಲ್ಲಿ ಭಾರತದ ಬಾಕ್ಸರ್ ಕೈರನ್ ವಿರುದ್ಧ ಸೋತಿದ್ದರು.



ಎದುರಾಳಿಗೆ ನೀತು ಗಂಗಾಸ್ (ಬಲ) ಪಂಚ್– ಎಎಫ್‌ಪಿ ಚಿತ್ರ

ಇಲ್ಲಿ ಆ ಸೇಡು ತೀರಿಸಿಕೊಂಡರು.

ಅಮಿತ್ ಪಂಚ್‌ಗಳಿಗೆ ಎದುರಾಳಿಯ ಬಲಗಣ್ಣಿನ ಮೇಲೆ ಗಾಯವಾಗಿ ಸ್ವಲ್ಪ ಕಾಲ ಸ್ಪರ್ಧೆ ಸ್ಥಗಿತಗೊಂಡಿತು.

ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಮೊದಲ ಬಾರಿ ಕಣಕ್ಕಿಳಿದಿದ್ದ 21 ವರ್ಷದ ನೀತು, ಒಂಬತ್ತು ನಿಮಿಷಗಳ ಸೆಣಸಾಟದಲ್ಲಿ ಎದುರಾಳಿಯ ಮೇಲೆ ಸಂಪೂರ್ಣ ಹತೋಟಿ ಸಾಧಿಸಿದರು. ಡೆಮಿ ಜೇಡ್ ಅವರಿಗೆ ಪುಟಿದೇಳುವ ಅವಕಾಶವನ್ನೇ ನೀಡಲಿಲ್ಲ. ನಿಖರ ಮತ್ತು ಚುರುಕಿನ ಪಂಚ್‌ಗಳ ಸಮ್ಮಿಲನ ಅವರ ಗೆಲುವಿಗೆ ಕಾರಣವಾಯಿತು. ಡೆಮಿ ಅವರು 2019ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಜಯಿಸಿದ್ದರು.

ಹರಿಯಾಣ ವಿಧಾನಸಭೆಯ ಉದ್ಯೋಗಿಯ ಮಗಳು ನೀತು. ಬಾಕ್ಸಿಂಗ್‌ನ ಮಿನಿ ಕ್ಯೂಬಾ ಎಂದು ಕರೆಯಲಾಗುವ ಭಿವಾನಿಯವರು.

ರೋಹಿತ್, ಹುಸಾಮುದ್ದೀನ್‌ಗೆ ಕಂಚಿನ ಪದಕ



ಮೊಹಮ್ಮದ್ ಹುಸಾಮುದ್ದೀನ್

ರೋಹಿತ್ ಟೋಕಾಸ್ ಮತ್ತು ಮೊಹಮ್ಮದ್ ಹುಸಾಮುದ್ದೀನ್ ಅವರು ಸೆಮಿ–ಫೈನಲ್‌ಗಳಲ್ಲಿ ಸೋತು ಕಂಚಿನ ಪದಕಕ್ಕೆ ಸಮಾಧಾನಪಟ್ಟುಕೊಳ್ಳಬೇಕಾಯಿತು. ಶನಿವಾರ ರಾತ್ರಿ ನಡೆದ ಪುರುಷರ 67 ಕೆಜಿ ವಿಭಾಗದ ಸೆಮಿಫೈನಲ್ ಬೌಟ್‌ನಲ್ಲಿ ರೋಹಿತ್ 2–3ರಿಂದ ಜಾಂಬಿಯಾದ ಸ್ಟೀಫನ್ ಜಿಂಬಾ ಎದುರು ಸೋತರೆ, 57 ಕೆಜಿ ವಿಭಾಗದ ನಾಲ್ಕರ ಘಟ್ಟದ ಸೆಣಸಾಟದಲ್ಲಿ ಹುಸಾಮುದ್ದೀನ್ 1–4ರಿಂದ ಘಾನಾದ ಜೋಸೆಫ್ ಕಾಮೆ ಎದುರು ಎಡವಿದರು.

ಕ್ರಿಕೆಟ್: ಭಾರತಕ್ಕೆ ಕೈತಪ್ಪಿದ ಚಿನ್ನ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಕೊನೆಯ ಓವರ್‌ಗಳಲ್ಲಿ ಒತ್ತಡಕ್ಕೆ ಒಳಗಾದ ಭಾರತ ತಂಡ, ಮಹಿಳಾ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಆಸ್ಟ್ರೇಲಿಯಾ ಎದುರು 9 ರನ್‌ಗಳಿಂದ ಸೋತು ಬೆಳ್ಳಿ ಪಡೆಯಿತು.

ಭಾನುವಾರ ರಾತ್ರಿ ನಡೆದ ಪಂದ್ಯದಲ್ಲಿ ಆಸ್ಟ್ರೇಲಿಯಾ 20 ಓವರ್‌ಗಳಲ್ಲಿ 8ಕ್ಕೆ 161 ರನ್ ಗಳಿಸಿದರೆ, ಭಾರತ 19.3 ಓವರ್‌ಗಳಲ್ಲಿ 152 ರನ್‌ಗಳಿಗೆ ಆಲೌಟಾಯಿತು.

ಹರ್ಮನ್‌ಪ್ರೀತ್ ಕೌರ್ (65) ಮತ್ತು ಜೆಮಿಮಾ ರಾಡ್ರಿಗಸ್ (33) ಅವರ ಹೋರಾಟ ಸಾಕಾಗಲಿಲ್ಲ. 2 ವಿಕೆಟ್‌ಗೆ 118 ರನ್ ಗಳಿಸಿ ಗೆಲುವಿನತ್ತ ದಾಪುಗಾಲಿಟ್ಟಿದ್ದ ಭಾರತ, ಮೂರು ರನ್‌ಗಳ ಅಂತರದಲ್ಲಿ ಮೂರು ವಿಕೆಟ್ ಕಳೆದುಕೊಂಡು ಒತ್ತಡಕ್ಕೆ ಒಳಗಾಯಿತು.

ಕೊನೆಯ ಓವರ್‌ನಲ್ಲಿ ಜಯಕ್ಕೆ 11 ರನ್‌ಗಳು ಬೇಕಿದ್ದವು. ಎರಡು ವಿಕೆಟ್‌ಗಳು ಕೈಯಲ್ಲಿದ್ದವು. ಜೆಸ್ ಜೊನಾಸೆನ್ ಬೌಲ್ ಮಾಡಿದ ಓವರ್‌ನ ಎರಡನೇ ಎಸೆತದಲ್ಲಿ ಮೇಘನಾ ಸಿಂಗ್ ರನೌಟ್ ಆದರೆ, ಮೂರನೇ ಎಸೆತದಲ್ಲಿ ಯಸ್ತಿಕಾ ಭಾಟಿಯಾ ಔಟಾದರು. ಆಸ್ಟ್ರೇಲಿಯಾ ಚಿನ್ನ ಗೆದ್ದು ಸಂಭ್ರಮಿಸಿತು.

ಮೊದಲು ಬ್ಯಾಟ್ ಮಾಡಿದ ಆಸ್ಟ್ರೇಲಿಯಾ ಬೆತ್ ಮೂನಿ ಅವರ ಅರ್ಧಶತಕದ (61, 41 ಎ. 4X8) ನೆರವಿನಿಂದ ಸವಾಲಿನ ಮೊತ್ತ ಪೇರಿಸಿತು.

ಸಂಕ್ಷಿಪ್ತ ಸ್ಕೋರ್: ಆಸ್ಟ್ರೇಲಿಯಾ 20 ಓವರ್‌ಗಳಲ್ಲಿ 8ಕ್ಕೆ 161 (ಬೆತ್ ಮೂನಿ 61, ಮೆಗ್ ಲಾನಿಂಗ್ 36, ಆ್ಯಶ್ಲಿ ಗಾರ್ಡನರ್ 25, ರೇಣುಕಾ ಸಿಂಗ್ 25ಕ್ಕೆ 2, ಸ್ನೇಹಾ ರಾಣಾ 38ಕ್ಕೆ 2, ದೀಪ್ತಿ ಶರ್ಮಾ 30ಕ್ಕೆ 1, ರಾಧಾ ಯಾದವ್ 24ಕ್ಕೆ 1). ಭಾರತ: 19.3 ಓವರ್‌ಗಳಲ್ಲಿ 152 (ಶಫಾಲಿ ವರ್ಮಾ 11, ಜೆಮಿಮಾ ರಾಡ್ರಿಗಸ್ 33, ಹರ್ಮನ್‌ಪ್ರೀತ್ ಕೌರ್ 65, ಆ್ಯಶ್ಲಿ ಗಾರ್ಡನರ್ 16ಕ್ಕೆ 3, ಮೇಘನ್ ಶೂಟ್ 27ಕ್ಕೆ 2).

16 ವರ್ಷದ ನಂತರ ಭಾರತಕ್ಕೆ ಪದಕ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಪೆನಾಲ್ಟಿ ಶೂಟೌಟ್‌ನಲ್ಲಿ ಅಮೋಘ ಪ್ರದರ್ಶನ ನೀಡಿದ ಸವಿತಾ ಪೂನಿಯಾ ಅವರು ಕಾಮನ್‌ವೆಲ್ತ್ ಕೂಟದ ಮಹಿಳಾ ಹಾಕಿ ಟೂರ್ನಿಯಲ್ಲಿ ಭಾರತ ತಂಡ ಕಂಚಿನ ಪದಕ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಮೂರನೇ ಸ್ಥಾನವನ್ನು ನಿರ್ಣಯಿಸಲು ಭಾನುವಾರ ನಡೆದ ಪಂದ್ಯದಲ್ಲಿ ಭಾರತ 2–1 ರಲ್ಲಿ ನ್ಯೂಜಿಲೆಂಡ್ ತಂಡವನ್ನು ಮಣಿಸಿತು. ಕಾಮನ್‌ವೆಲ್ತ್ ಕೂಟದಲ್ಲಿ ಭಾರತ ಮಹಿಳಾ ಹಾಕಿ ತಂಡಕ್ಕೆ 16 ವರ್ಷಗಳ ಬಳಿಕ ಪದಕ ಲಭಿಸಿದೆ.

ನಿಗದಿತ ಅವಧಿ ಕೊನೆಗೊಂಡಾಗ ಎರಡೂ ತಂಡಗಳು 1–1 ರಲ್ಲಿ ಸಮಬಲ ಸಾಧಿಸಿದ್ದವು. ಇದರಿಂದ ಪಂದ್ಯ ಪೆನಾಲ್ಟಿ ಶೂಟೌಟ್‌ಗೆ ಮುನ್ನಡೆಯಿತು. ಪೆನಾಲ್ಟಿ ಶೂಟೌಟ್‌ನ ಮೊದಲ ಅವಕಾಶದಲ್ಲಿ ಮೇಗನ್ ಹಲ್ ಅವರು ನ್ಯೂಜಿಲೆಂಡ್‌ಗೆ ಮುನ್ನಡೆ ತಂದಿತ್ತರು.

ಭಾರತದ ಪರ ಸೋನಿಕಾ ಮತ್ತು ನವನೀತ್ ಅವರು ಗೋಲು ಗಳಿಸಿ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದರು.

2ನೇ ಕ್ವಾರ್ಟರ್‌ನ ಹೆಚ್ಚಿನ ಅವಧಿ ಯಲ್ಲಿ ಚೆಂಡಿನ ಮೇಲಿನ ನಿಯಂತ್ರಣ ಭಾರತ ತಂಡ ಕೈಯಲ್ಲಿತ್ತು. ವಿರಾಮಕ್ಕೆ ಒಂದು ನಿಮಿಷ (29ನೇ ನಿ.) ಇದ್ದಾಗ ಸವಿತಾ ಬಳಗ ಮುನ್ನಡೆ ಗಳಿಸಿತು. ನವನೀತ್ ಕೌರ್ ಅವರು ಹೊಡೆದ ಚೆಂಡನ್ನು ನ್ಯೂಜಿಲೆಂಡ್ ಗೋಲ್ ಕೀಪರ್ ತಡೆದರು. ರಿಬೌಂಡ್ ಆಗಿ ಬಂದ ಚೆಂಡನ್ನು



ಭಾರತದ ಆಟಗಾರ್ತಿಯರ ಸಂಭ್ರಮ –ಪಿಟಿಐ ಚಿತ್ರ

ರಿವರ್ಸ್ ಹಿಟ್ ಮೂಲಕ ಸಲೀಮಾ ಟೇಟೆ ಗುರಿ ಸೇರಿಸಿದರು.ಭಾರತ ಕೊನೆಯ ಎರಡು ಅವಧಿಗಳಲ್ಲಿ ರಕ್ಷಣಾತ್ಮಕ ಆಟವಾಡಿತು. ಕೊನೆಯ ಕ್ವಾರ್ಟರ್‌ನಲ್ಲಿ ಮೇಲಿಂದ ಮೇಲೆ ಮೂರು ಪೆನಾಲ್ಟಿ ಕಾರ್ನರ್ ಅವಕಾಶಗಳು ಲಭಿಸಿದರೂ, ಗೋಲು ಬರಲಿಲ್ಲ. ಪಂದ್ಯ ಕೊನೆಗೊಳ್ಳಲು ಎರಡೂವರೆ ನಿಮಿಷ ಇದ್ದಾಗ ಲಾಲ್‌ರೆಮಿಸಿಯಾಮಿ ಅವರು ಹಳದಿ ಕಾರ್ಡ್ ಪಡೆದು ಹೊರ ನಡೆದರು.

ಕೊನೆಯ ನಿಮಿಷದಲ್ಲಿ ನ್ಯೂಜಿಲೆಂಡ್ ಪೆನಾಲ್ಟಿ ಅವಕಾಶ ಗಿಟ್ಟಿಸಿತು. ಒಲಿವಿಯಾ ಮೇರಿ ಗೋಲು ಗಳಿಸಿ ಸಮಬಲಕ್ಕೆ ಕಾರಣರಾದರು. ಪಂದ್ಯ ಪೆನಾಲ್ಟಿ ಶೂಟೌಟ್‌ಗೆ ಸಾಗಿತು.

ಪ್ಯಾರಾ ಟಿಟಿ: ಭಾವಿನಾಗೆ ಸ್ವರ್ಣ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಉತ್ತಮ ಸಾಮರ್ಥ್ಯ ತೋರಿದ ಪ್ಯಾರಾ ಟೇಬಲ್ ಟೆನಿಸ್‌ನಲ್ಲಿ ಭಾವಿನಾಬೆನ್ ಪಟೇಲ್ ಚಿನ್ನ ಜಯಿಸಿದರು. ಸೋನಾಲ್‌ಬೆನ್ ಪಟೇಲ್ ಕಂಚಿನ ಪದಕ ಕೊರಳಿಗೇರಿಸಿಕೊಂಡರು.

ಟೋಕಿಯೊ ಒಲಿಂಪಿಕ್ಸ್ ಬೆಳ್ಳಿ ಪದಕ ವಿಜೇತೆ ಭಾವಿನಾ, ಇಲ್ಲಿ ನಡೆದ ಮಹಿಳಾ ಸಿಂಗಲ್ಸ್ 3–5 ಕ್ಲಾಸ್ ವಿಭಾಗದ ಫೈನಲ್‌ನಲ್ಲಿ 12-10, 11-2, 11-9ರಿಂದ ನೈಜೀರಿಯಾದ ಇಫೆಚುಕ್ವುದೆ ಕ್ರಿಸ್ಟಿಯನ್ ಇಕ್‌ಪೋಯಿ ಎದುರು ಗೆದ್ದರು.

3–5 ಕ್ಲಾಸ್ ವಿಭಾಗದಲ್ಲಿ ಸ್ಪರ್ಧಿಸಿದ್ದ ಭಾರತದ ಇನ್ನೋರ್ವ ಆಟಗಾರ್ತಿ ಸೋನಾಲ್‌ಬೆನ್ ಕಂಚಿನ ಪದಕ ಜಯಿಸಿದರು. ಕಂಚಿನ ಪದಕದ ಸುತ್ತಿನಲ್ಲಿ 11-5, 11-2, 11-3ರಿಂದ ಇಂಗ್ಲೆಂಡ್‌ನ ಸುಯಿ ಬೇಲಿ ಅವರನ್ನು ಪರಾಭವಗೊಳಿಸಿದರು.

ಪುರುಷರ ಸಿಂಗಲ್ಸ್ 3–5 ಕ್ಲಾಸ್ ವಿಭಾಗದ ಕಂಚಿನ ಪದಕದ ಹಣಾಹಣಿಯಲ್ಲಿ ರಾಜ್ ಅರವಿಂದನ್ ಅಲಗಾರ್ ಸೋತರು. ಅವರು 3–11, 6–11, 9–11ರಿಂದ ನೈಜೀರಿಯಾದ ಇಸಾವು ಒಗುಂಕುನ್ಲೆ ಎದುರು ನಿರಾಸೆ ಅನುಭವಿಸಿದರು.



ಭಾವಿನಾ ಬೆನ್ ಪಟೇಲ್ ಸಂಭ್ರಮ– ಪಿಟಿಐ ಚಿತ್ರ

ಸ್ಕ್ವಾಷ್: ದೀಪಿಕಾ–ಸೌರವ್‌ಗೆ ಕಂಚು

ಬರ್ಮಿಂಗ್‌ಹ್ಯಾಮ್: ಭಾರತದ ದೀಪಿಕಾ ಪಳ್ಳಿಕಲ್– ಸೌರವ್ ಘೋಷಾಲ್ ಸ್ಕ್ವಾಷ್ ಸ್ಪರ್ಧೆಯ ಮಿಶ್ರ ಡಬಲ್ಸ್ ವಿಭಾಗದಲ್ಲಿ ಕಂಚಿನ ಪದಕ ಗೆದ್ದರು. ಕಂಚಿನ ಪದಕದ ಸುತ್ತಿನಲ್ಲಿ ಅವರು11-8, 11-4ರಿಂದ ಆಸ್ಟ್ರೇಲಿಯಾದ ಡೊನ್ನಾ–ಕ್ಯಾಮರಾನ್ ಅವರನ್ನು ಮಣಿಸಿದರು.

ಟಿಟಿ: ಶರತ್–ಸತ್ಯನ್‌ಗೆ ಬೆಳ್ಳಿ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ಅಚಂತಾ ಶರತ್ ಕಮಲ್ ಮತ್ತು ಜಿ.ಸತ್ಯನ್ ಅವರು ಟೇಬಲ್ ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್ ವಿಭಾಗದಲ್ಲಿ ಬೆಳ್ಳಿ ಜಯಿಸಿದರು.

ಭಾನುವಾರ ನಡೆದ ಫೈನಲ್‌ನಲ್ಲಿ ಭಾರತದ ಜೋಡಿ 11-8, 8-11, 3-11, 11-7, 4-11 ರಲ್ಲಿ ಇಂಗ್ಲೆಂಡ್‌ನ ಪಾಲ್ ಡ್ರಿಂಕ್‌ಹಾಲ್–ಲಿಯಾಮ್ ಪಿಚ್‌ಫೋರ್ಡ್ ಎದುರು ಸೋತರು.

2018ರ ಗೋಲ್ಡ್‌ಕೋಸ್ಟ್ ಕೂಟದ ಫೈನಲ್‌ನಲ್ಲೂ ಭಾರತದ ಜೋಡಿ ಇದೇ ಎದುರಾಳಿಗಳ ಎದುರು ಸೋತು ಬೆಳ್ಳಿ ಪಡೆದುಕೊಂಡಿತ್ತು.

ಶ್ರೀಜಾಗೆ ನಿರಾಸೆ: ಶ್ರೀಜಾ ಅಕುಲಾ ಅವರು ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಕಂಚು ಗೆಲ್ಲುವ ಅವಕಾಶವನ್ನು ಅಲ್ಪದರಲ್ಲೇ ಕಳೆದುಕೊಂಡರು. ಮೂರನೇ ಸ್ಥಾನ ನಿರ್ಣಯಿಸಲು ನಡೆದ ಪಂದ್ಯದಲ್ಲಿ 3-4 ರಲ್ಲಿ ಆಸ್ಟ್ರೇಲಿಯಾದ ಯಾಂಗ್ ಜಿ ಲಿಯು ಎದುರು ಸೋತರು.

ಎದುರಾಳಿಗೆ ಪ್ರಬಲ ಪೈಪೋಟಿ ನೀಡಿದ ಭಾರತದ ಆಟಗಾರ್ತಿ ಅಂತಿಮವಾಗಿ 11-3, 6-11, 2-11, 11-7, 13-15, 11-9, 7-11 ರಲ್ಲಿ ಪರಾಭವಗೊಂಡರು.



ಶರತ್ ಮತ್ತು ಜಿ.ಸತ್ಯನ್

ಬ್ಯಾಡ್ಮಿಂಟನ್: ಶ್ರೀಕಾಂತ್‌ಗೆ ಕಂಚು

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ಕಿದಂಬಿ ಶ್ರೀಕಾಂತ್ ಅವರು ಬ್ಯಾಡ್ಮಿಂಟನ್ ಸ್ಪರ್ಧೆಯ ಪುರುಷರ ಸಿಂಗಲ್ಸ್‌ನಲ್ಲಿ ಕಂಚಿನ ಪದಕ ಜಯಿಸಿದರು. ಭಾನುವಾರ ನಡೆದ ಕಂಚಿನ ಪದಕದ ಪಂದ್ಯದಲ್ಲಿ ಅವರು 21–15, 21–18ರಿಂದ ಸಿಂಗಪುರದ ಜಿ ಹೆಂಗ್ ಟೆಹ್ ಅವರನ್ನು ಸೋಲಿಸಿದರು.

ಪಿ.ವಿ.ಸಿಂಧು ಮತ್ತು ಲಕ್ಷ್ಯ ಸೇನ್ ಅವರು ಕ್ರಮವಾಗಿ ಮಹಿಳಾ ಮತ್ತು ಪುರುಷರ ಸಿಂಗಲ್ಸ್ ವಿಭಾಗಗಳ ಫೈನಲ್‌ಗೆ ಲಗ್ಗೆಯಿಟ್ಟರು. ಮಹಿಳಾ ಸಿಂಗಲ್ಸ್ ನಾಲ್ಕರ ಘಟ್ಟದ ಹಣಾಹಣಿಯಲ್ಲಿ ಸಿಂಧು 21-19, 21-17ರಿಂದ ಸಿಂಗಪುರದ ಯೊ ಜಿಯಾ ಮಿನ್ ಅವರನ್ನು ಪರಾಭವಗೊಳಿಸಿದರು.ಮೊದಲ ಬಾರಿ ಫೈನಲ್ ಪ್ರವೇಶಿಸಿರುವ ಲಕ್ಷ್ಯ, ಸೆಮಿಫೈನಲ್ ಪಂದ್ಯದಲ್ಲಿ 21-10, 18-21, 21-16ರಿಂದ ಸಿಂಗಪುರದ ಜಿಯಾ ಹೆಂಗ್ ಟೆಹ್ ಅವರನ್ನು ಮಣಿಸಿದರು.



ಕಿದಂಬಿ ಶ್ರೀಕಾಂತ್– ಎಪಿ ಚಿತ್ರ